ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಆಗಸ್ಟ್ 2019 ಬೆಲೆ ರೂ. 5/-



ಶ್ರೀ ಪ್ರತಿವಾದಿ ಭಯಂಕರ
ಅಣ್ಣನ್‌ಸ್ವಾಮಿ ಜಯಂತಿ
01-08-2019





ತಿರುಮಲ ಶ್ರೀ ವೆಂಕಟೇಶ್ವರಸ್ವಾಮಿಯವರ ದರ್ಶನ ಪಡೆದ ಶ್ರೀ ವೈ. ವಿ. ಸುಬ್ಬಾರೆಡ್ಡಿ ಇವರು
ಇವರು 22-06-2019 ರಂದು
ತಿ.ತಿ.ದೇ. ಧರ್ಮಕರ್ತ ಮಂಡಳಿಯ ನೂತನ ಅಧ್ಯಕ್ಷರಾಗಿ ಪ್ರಮಾಣ ಸ್ವೀಕಾರ ಮಾಡಿದರು

ಈ ಸಂದರ್ಭದಲ್ಲಿ ಸ್ವಾಮಿಯವರ ಪ್ರಸಾದವನ್ನು ನೀಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್ ರವರು
ತಿರುಮಲ ವಿಭಾಗದ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಎಸ್. ಶ್ರೀನಿವಾಸರಾಜು, ಐ.ಎ.ಎಸ್ ರವರು
ಮತ್ತು ತಿರುಪತಿ ವಿಭಾಗದ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಬಿ. ಲಕ್ಷ್ಮೀಕಾಂತಂ, ಐ.ಎ.ಎಸ್ ರವರು





ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನ ಪಡೆದ ಶ್ರೀ ಪಿ. ಬಸಂತ್ ಕುಮಾರ್, ಐ.ಎ.ಎಸ್ ರವರು
ಇವರು ಸ್ವಾಮಿಯವರ ಆಲಯದಲ್ಲಿ 04-07-2019 ರಂದು ತಿ.ತಿ.ದೇವಸ್ಥಾನಗಳ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾಗಿ (ತಿರುಪತಿ) ಪ್ರಮಾಣ ಸ್ವೀಕಾರ ಮಾಡಿದ
ಸಂದರ್ಭದಲ್ಲಿ ಇವರಿಗೆ ಸ್ವಾಮಿಯವರ ಪ್ರಸಾದವನ್ನು ನೀಡುತ್ತಿರುವ ತಿ.ತಿ.ದೇ. ಅಧಿಕಾರಿಗಳು



ವರ್ಗಾವಣೆ ಹೊಂದಿದ ತಿ.ತಿ.ದೇ. ದೇವಸ್ಥಾನಗಳ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ (ತಿರುಮಲ)
ಶ್ರೀ ಕೆ.ಎಸ್. ಶ್ರೀನಿವಾಸರಾಜು, ಐ.ಎ.ಎಸ್ ರವರಿಗೆ
ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ. ಅಧಿಕಾರಿಗಳು (04-07-2019)



ತಿ.ತಿ.ದೇವಸ್ಥಾನಗಳ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ (ತಿರುಪತಿ)
ಶ್ರೀ ಬಿ. ಲಕ್ಷ್ಮೀಕಾಂತಂ, ಐ.ಎ.ಎಸ್ ರವರ ಪದವಿ ವಿರಮಣ (30-06-2019) ಸಂದರ್ಭದ ಸಭೆ

# ಭಗವದ್ಗೀತೆ

**ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾಯು ಯುತ್ಸವಃ।**
**ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥**

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 1)



**ಸಂಜಯನೇ, ಯುದ್ಧದ ಬಯಕೆಯಿಂದ ಧರ್ಮ ಭೂಮಿಯಾದ ಕುರುಕ್ಷೇತ್ರದಲ್ಲಿ ಕಲೆತ ನನ್ನ ಮಕ್ಕಳೂ ಪಾಂಡವರೂ ಏನು ಮಾಡಿದರು.**



**ನಿನ್ನನೆ ಪಾಡುವೆ ನಿನ್ನ ನ ಪೊಗಳುವೆ**
**ನಿನ್ನ ನೆ ಬೇಡಿ ಬೇಸರಿಸುವೆ ರಂಗಯ್ಯ**
**ನಿನ್ನ ನೆ ಕಾಡುವೆ ನಿನ್ನ ಕಾಲ ಹಿಡಿವೆ**
**ನಿನ್ನ ತಾಂಬೂಲಕ್ಕೆ ಕೈಯ ನೀಡುವೆ**
**ರಂಗಯ್ಯ, ನಿನ್ನ ಕಾಲ ಹಿಡಿವೆ**
**ನಿನ್ನಂತೆ ಸಾಕಬಲ್ಲ ಸ್ವಾಮಿ ಇನ್ನುಂಟೆ ದೇವ**
**ನಿನ್ನಾಣೆ ಪುರಂದರವಿಠಲ ದಮ್ಮಯ್ಯ**
**ಸಾಸಿರ ನಮಕ್ಕೆ ಸಾಸಿರ ಮೂರುತಿ**
**ವಾಸುಕಿ ಶಯನನ ಅನಂತ ಮೂರುತಿ**
**ಶಾಶ್ವತ ನೆನೆಮರ ಸಲಹುವ ಮೂರುತಿ**
**ಯಶೋದೆಯ ಮೊಲೆಯ ನೋಡಿದನಮ್ಮ**
**ಪುರಂದರವಿಠಲನ ಕರುಣದ ಮೂರುತಿ**

ಶ್ರೀ ಪುರಂದರದಾಸರು

(ನಾಲ್ಕನೆಯ ದಶಕವು)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಅವತರಣವಿಶೇಷೈ ರಾತ್ಮಲೀಲಾಪದೇಶೈಃ ಅವಮತಿ ಮನುಕಂಪೇ ಮಂದಚಿತ್ತೇಷು ವಿಂದನ್।**
**ವೃಷಭಶಿಖರಿನಾಥ ಸ್ತ್ವನ್ನಿದೇಶೇನ ನೂನಂ ಭಜತಿ ಶರಣಭಾಜಾಂ ಭಾವಿನೋ ಜನ್ಮಭೇದಾನ್ ॥೩೫॥**

ಹಿಂದಿನ ಪದ್ಯದಲ್ಲಿ ದಯಾದೇವಿಯ ಪ್ರತಿವಾದದ ರೀತಿಯು ವರ್ಣಿಸಲ್ಪಟ್ಟಿತು. ಆ ವಾದದಿಂದ ಏರ್ಪಟ್ಟ ನಿಷ್ಕರ್ಷವೇನೆಂದರೆ - ಶರಣಾಗತನಾದವನ ಪಾಪಗಳಿಗೆ ದಂಡನೆಯು ಕೂಡದು. ಅಂದರೆ, ಅವನಿಗೆ ಹಲವು ಜನ್ಮಗಳನ್ನು ಕೊಟ್ಟು ದುಃಖಗಳನ್ನು ಅನುಭವಿಸುವಂತೆ ಮಾಡುವುದು ಕೂಡದು, ಆ ಪಾಪಗಳನ್ನು ಕ್ಷಮಿಸುವುದೇ ಈಗಿನ ಕರ್ತವ್ಯ. ಹಾಗಾದರೆ ಅವನು ಮಾಡಿದ ಪಾಪಗಳಿಗೆ ಗತಿಯೇನು? ಅವುಗಳು ಅವನಿಗೆ ಅನೇಕ ಜನ್ಮಗಳನ್ನು ಕೊಡಲೇಬೇಕಲ್ಲವೆ? ಎಂದರೆ, ಅದಕ್ಕೆ ಶಾಸ್ತ್ರ ರೀತಿಯಿಂದ ಹೀಗೆ ಸಮಾಧಾನವನ್ನು ಹೇಳಬಹುದು. ನಮ್ಮ ಸಿದ್ಧಾಂತದಲ್ಲಿ ಪುಣ್ಯ ಪಾಪಗಳೆಂಬುದು ಭಗವಂತನ ಅನುಗ್ರಹ ಮತ್ತು ನಿಗ್ರಹಗಳೇ ಆಗಿವೆ. ಅವು ಕೂಡ ಕೊನೆಯಲ್ಲಿ - ಇಂತಹ ಪಾಪ ಮಾಡಿದವನು ಈ ರೀತಿಯಾದ ಪ್ರಾಯಶ್ಚಿತ್ತರೂಪವಾದ ಪರಿಹಾರವನ್ನು ಮಾಡಿಕೊಳ್ಳದಿದ್ದರೆ ಇಂತಹ ಜನ್ಮವನ್ನು ಹೊಂದಿ ಇಂತಹ ಕಷ್ಟವನ್ನು ಅನುಭವಿಸಲೇ ಬೇಕು - ಎಂಬ ಭಗವತ್ಸಂಕಲ್ಪದಲ್ಲಿಯೇ ಪರ್ಯವಸಾನವನ್ನು ಹೊಂದುವುದು. ಇದು ಪಾಪಗಳಂತೆ ಪುಣ್ಯಗಳಿಗೂ ಸಮಾನವಾದುದು. ಆದ್ದರಿಂದ, ಶರಣಾಗತಿ ಎಂಬ ಸರ್ವಕರ್ಮ ಪರಿಹಾರವನ್ನು ಮಾಡಿಬಿಡುವುದರಿಂದ ಶರಣಾಗತನ ಚಿತ್ತದಲ್ಲಿ ಆಯಾಯ ಭಗವತ್ಸಂಕಲ್ಪದಿಂದ ಬರಬಹುದಾದ ಒಂದು ಜನ್ಮವೂ ಬರಲಾರದು. ಇಂತಹ ಪರಿಹಾರವನ್ನು ಮಾಡದಿದ್ದಾಗಲೇ ಜನ್ಮಗಳನ್ನುಂಟು ಮಾಡುವುದಾಗಿ ಅವನ ಸಂಕಲ್ಪ, ಆದ್ದರಿಂದ ಕರ್ಮವು ಜನ್ಮವನ್ನುಂಟು ಮಾಡುವ ಶಕ್ತಿಯನ್ನು ಪಡೆದಿರತಕ್ಕದ್ದಾದರೂ ಇವನ ವಿಷಯದಲ್ಲಿ ಮುಂದೆ ಬರುವುದು ನ್ಯಾಯವಲ್ಲ. ತತ್ವವು ಹೀಗಿದ್ದರೂ ಕವಿಯು ಈ ಪದ್ಯದಲ್ಲಿ ವಿಚಿತ್ರವಾದ ಒಂದು ಉತ್ಪ್ರೇಕ್ಷೆಯನ್ನು ಮಾಡಿ, ತನ್ಮೂಲಕ ಹಿಂದೆ ಕೇಳಿದ ಪ್ರಶ್ನೆಗೆ (ಜನ್ಮಗಳನ್ನು ಕೊಡಬಲ್ಲ ಕರ್ಮಗಳ ಗತಿಯೇನು?) ಉತ್ತರವನ್ನು ಕೊಟ್ಟು ದಯೆಯನ್ನು ಹೊಗಳುತ್ತಾರೆ. ಆದ್ದರಿಂದ ಈ ಪದ್ಯದಲ್ಲಿ ಹೇಳುವುದು ಚಮತ್ಕಾರೋಕ್ತಿಯೇ ಹೊರತು ತತ್ವಾರ್ಥವಲ್ಲ.

ಭಗವಂತನು ಮತ್ಸ್ಯ, ಕೂರ್ಮ, ಮನುಷ್ಯನೇ ಮೊದಲಾದ ಅನೇಕ ರೂಪಗಳಿಂದ ಅವತರಿಸುವನು. ಆ ಎಲ್ಲ ಅವತಾರಗಳಿಗೂ ಲೀಲೆಯೇ ಪ್ರಯೋಜನವೆಂದು ಶಾಸ್ತ್ರಗಳು ಹೇಳುವುವು. ಆದರೆ, ಇಲ್ಲಿನ ರಹಸ್ಯವೇ ಬೇರೆಯೆಂದು ಕವಿಯು ಉತ್ಪ್ರೇಕ್ಷಿಸಿದ್ದಾರೆ. ಹಿಂದೆ ಹೇಳಿದಂತೆ ಶರಣಾಗತನ ಪಾಪಗಳು ಅವನಿಗೆ ಅವಶ್ಯವಾಗಿ ಉಂಟಾಗಬಹುದಾದ ಜನ್ಮಗಳನ್ನು ಕೊಡಕೂಡದೆಂದು ದಯಾದೇವಿಯ ವಾದದಿಂದ ನಿಷ್ಕರ್ಷೆಯಾದ ಮೇಲೆ ಆ ಕರ್ಮಗಳಿಗೆ ಗತಿಯೇನೆಂದು ಜಿಜ್ಞಾಸೆಯುಂಟಾದಾಗ, ಈ ದಯಾದೇವಿಯು ತನಗೆ ಸ್ವಾಧೀನನಾದ ಭರ್ತೃವಾದ ಶ್ರೀನಿವಾಸನನ್ನು ನೋಡಿ" ಈ ಶರಣಾಗತನಿಗೆ ಬದಲಾಗಿ ಅವನು ಹೊಂದಬೇಕಾಗಿದ್ದ ಜನ್ಮಗಳನ್ನು ತಾವೇ ಹೊಂದಿ ಅವನ ಕರ್ಮಗಳನ್ನು ತೊಲಗಿಸಿ" ಎಂದು ನಿಯಮಿಸುವಳು. ಆ ನಿಯಮವನ್ನು ನೆರವೇರಿಸುವುದಕ್ಕಾಗಿಯೇ ಸರ್ವೇಶ್ವರನು - ಮೀನಾಗಿಯೂ, ಆಮೆಯಾಗಿಯೂ, ಸಿಂಹವಾಗಿಯೂ, ಮನುಷ್ಯನಾಗಿಯೂ ಅನೇಕ ಜನ್ಮಗಳನ್ನೆತ್ತಿ , ಆಯಾಯ ಜನ್ಮಗಳಲ್ಲಿ "ಅವಜಾನನ್ತಿ ಮಾಂ ಮೂಢಾಃ" ಎಂದು ಗೀತೆಯಲ್ಲಿ ಹೇಳಿರುವಂತೆ ಮೂಢರಾದ ಶಿಶುಪಾಲ, ರಾವಣರೇ ಮೊದಲಾದವರು ಅನೇಕ ರೀತಿಯಿಂದ ಮಾಡುವ ಅವಮಾನವನ್ನು ಸಹಿಸಿ ಶರಣಾಗತನಾದವನ ಕರ್ಮಗಳನ್ನು ತೊಲಗಿಸುವನು. ಹೆಂಗಸೊಬ್ಬಳ ಮಾತನ್ನು ಕೇಳಿ ಹೀಗೆ ಹಲವಾರು ಸಲ ಪರಿಭವವನ್ನು ಹೊಂದುವನೋ? ಎಂದು ಜನರು ಹೇಳದಿರುವುದಕ್ಕಾಗಿ ತನ್ನ ಲೀಲೆಗಾಗಿಯೇ ಅವತರಿಸುವನೆಂದು ಶಾಸ್ತ್ರಗಳಲ್ಲಿ ಪ್ರಕಟಪಡಿಸಲ್ಪಟ್ಟಿದೆ. ಈ ಲೋಕದಲ್ಲಿಯೂ ಒಬ್ಬನು ಮತ್ತೊಬ್ಬನಿಗೆ ಜಾಮೀನಾಗಿ ನಿಂತಾಗ ಮತ್ತೊಬ್ಬನು ಮಾಡಬೇಕಾದ ಕಾರ್ಯವನ್ನು ಮಾಡಿದಿದ್ದರೆ ಜಾಮೀನಾಗಿ ನಿಂತವನು ಆ ಕೆಲಸವನ್ನು ಮಾಡಿಯೇ ತೀರಬೇಕಲ್ಲವೆ! ಅದರಂತೆಯೇ ಶರಣಾಗತನಾದ ಜೀವನನ್ನು ಬಿಡಿಸುವುದರಲ್ಲಿ ತತ್ಪರಳಾದ ದಯಾದೇವಿಯು, ಅವನು ಹೊಂದಬೇಕಾಗಿರುವ ಜನ್ಮಗಳನ್ನು ಅವನು ಹೊಂದಲು ಸಾಧ್ಯವಿಲ್ಲವೆಂದು ನಿಷ್ಕರ್ಷೆಯಾದಾಗ, ತನಗೆ ಸೇರಿದ ಭಗವಂತನನ್ನು ಆ ಜನ್ಮಗಳನ್ನು ಹೊಂದುವಂತೆ ಪ್ರೇರಿಸಿ, ಅವನನ್ನು ಬಿಡಿಸುವಳು - ಎಂಬೀ ರೀತಿಯಲ್ಲಿ ದಯಾದೇವಿಯು ಇಲ್ಲಿ ಸ್ತುತಿಸಲ್ಪಡುವಳು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು



# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 50 ಸಂಚಿಕೆ -3

ಶ್ರೀ ವಿಕಾರಿನಾಮ ಸಂವತ್ಸರ
ಆಷಾಢ -ಶ್ರಾವಣ ಮಾಸ
ಸಂಚಿಕೆ

ಆಗಸ್ಟ್ 2019

## ವಿಷಯಸೂಚಿಕೆ

ಸಂಪಾದಕೀಯ 6
ಹಸಿರುತೋರಣ
ಗೋದಾದೇವಿ ಜನ್ಮನಕ್ಷತ್ರೋತ್ಸವ! ಗೋವಿಂದನ ಪುರಿಶೈವರ ತೋಟೋತ್ಸವ! 7
- ಕೆ.ನರಸಿಂಹಮೂರ್ತಿ
ತಿರುಪತಿ ಶ್ರೀ ವೆಂಕಟೇಶ್ವರ 11
- ದಿ॥ಬಿ.ಎನ್. ಶ್ರೀನಿವಾಸನ್
ನಾಗರ ಪಂಚಮಿ ತನ್ನಿಮಿತ್ತ ಸಕಾಲಿಕ ಬರಹ 13
- ಕೆ.ವಿ.ಪದ್ಮಾವತಿ
ಚಾರ್‌ಧಾಮ್‌ಯಾತ್ರೆ 16
- ಶ್ರೀಮತಿ. ಪಿ. ಪದ್ಮಜ
ಶ್ರೀ ಕೃಷ್ಣನ ಅವತಾರ ಹಿನ್ನೆಲೆ 18
- ಶ್ರೀಮತಿ. ಸುಧಾಮಧುಸೂದನ್
ಧ್ರುವವಂಶ ಚರಿತ್ರೆ 21
- ಡಿ.ಎಸ್.ಬದ್ರಿನಾಥ್
ಸಂಸ್ಕಾರ ಸಮನ್ವಿತ ಜೀವನವೃತ್ತಿ 23
- ಆರ್.ಎನ್.ಎನ್.ಮೂರ್ತಿ
ಮಾಂಡೂಕ್ಯೋಪನಿಷತ್ 26
-ಶ್ರೀಮತಿ.ಎ.ಗೀತ ವೀರರಾಘವನ್
ಶ್ರೀ ಕೃಷ್ಣ ಜನ್ಮಾಷ್ಟಮಿ ತದಂಗವಾಗಿ ಈ ಚಿಂತನ ಬರಹ 31
- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
ಶ್ರೀ ರಾಘವೇಂದ್ರ ಸ್ವಾಮಿಯ ಮಹಿಮೆ ಮತ್ತು ಆರಾಧನೆ 36
- ಎಸ್. ವೆಂಕಟರಾಘವನ್
ಯುವಕರಿಗೆ ಬೇಕಾಗಿರುವುದು ಸಾತ್ವಿಕ ಸುಖ 40
- ಡಿ.ಎಸ್.ಭೂಮಿಕ
ಹಿಪ್ಪಲಿಯಿಂದ ಆರೋಗ್ಯ ಸಂರಕ್ಷಣೆ 42
- ಶ್ರೀಮತಿ
ಉಡುಪಿಯ ಶ್ರೀ ಕೃಷ್ಣನ ಪೂಜಾ ವೈಭವ 44
- ಬಿ. ಗೋಪಾಲಾಚಾರ್
ಜ್ಞಾನಮೂರ್ತಿ ಶ್ರೀ ಹಯಗ್ರೀವ 47
- ಶ್ರೀಮತಿ. ಸುಮಾ ಚಂದ್ರಶೇಖರ್
ಓಂ ಶ್ರೀ ಬ್ರಹ್ಮಮಾತೇ ನಮೋ ನಮಃ 50
- ಶ್ರೀಮತಿ. ಗೀತಾ

ಮುಖಚಿತ್ರ - ಶ್ರೀ ಪ್ರತಿವಾದಿ ಭಯಂಕರ ಅಣ್ಣನ್ ಸ್ವಾಮಿ (ತಿರುಮಲೆ ಸ್ವಾಮಿಯವರ 'ಸುಪ್ರಭಾತಂ' ರಚಿಸಿದವರು)
ಹಿಂಬದಿಚಿತ್ರ - ನವನೀತಕೃಷ್ಣನು (ತಿರುಮಲೆ ಸ್ವಾಮಿಯ ಆಲಯ)

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**
ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ
ವೀಕ್ಷಿಸಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ
ಲೇಖನಗಳಲ್ಲಿನ ಅಭಿಪ್ರಾಯಗಳು
ಸಂಪಾದಕವರ್ಗದ, ಪತ್ರಿಕೆಯ,
ಅಭಿಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org

**ಸಂಪಾದಕೀಯ**

# ತಿರುಮಲೆಯಲ್ಲಿ ವನಸಂಪತ್ತು

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ, ತದಹಾಂ ಭಕ್ತ್ಯುಪಹೃತ ಮಶ್ನಾಮಿ ಪ್ರಯತಾತ್ಮನಃ ಎಂಬ ಭಗವದ್ಗೀತೆಯಲ್ಲಿನ ವಾಕ್ಯದಂತೆ,. ಭಕ್ತಿಯಿಂದ ಇವುಗಳಲ್ಲಿ ಯಾವ ಒಂದು ವಸ್ತುವನ್ನಾದರೂ ನೀಡಿದರೂ ಸ್ವೀಕರಿಸುತ್ತೇನೆ ಎಂದು ಭಗವಂತನು ಹೇಳಿದ್ದಾನೆ. ಪಂಚಭಕ್ಷ್ಯ ಪರಮಾನ್ನದಂತಹವು ಎಷ್ಟೇ ಇದ್ದರೂ ಅವುಗಳ ಬಗೆಗೆ ಗೀತೆಯಲ್ಲಿ ಏನನ್ನೂ ವಿವರಿಸಿಲ್ಲ.. ಫಲಪುಷ್ಪಪತ್ರೆ ತೋಯಾದಿಗಳು ನಿತ್ಯನೂತನವಾದುವು.ನಿರ್ಮಲವಾದ ಸರ್ವಜೀವನ ಸಂಜೀವಿನಿಗಳು.ತ್ಯಾಗಕ್ಕೆ ಪ್ರತೀಕವಾದುವು. ಅವುಗಳ ಸಾರವನ್ನು ಪಡೆದುಕೊಂಡು ಸೋಹಂ ಸೋಹಂ ಎಂದು ಕುಣಿದಾಡುವ ಮಾನವ, ತಾನೇ ತ್ಯಾಗ ಮಯನೆಂದು ಕೊಂಡು, ಮಾಧವನಾಗಿ ಬೆಳೆಯಬೇಕೆಂದು ಭಾವಿಸಿದ. ಆದರೆ ಯೋಗಿಗಳು,ಸಾಧುಗಳು, ಜನಸಂದಣಿಯಿಂದ ದೂರವಾಗಿದ್ದು ಯಾವುದೋ ಬೆಟ್ಟ ಗುಡ್ಡಗಳಲ್ಲಿ, ಗಲಗಲ ಹರಿಯುವ ನದಿಯ ತೀರದಲ್ಲೋ, ಫಲಪುಷ್ಪಭರಿತವಾದ ವನಗಳಲ್ಲಿ ಆಶ್ರಮಗಳು, ಆರಾಧನಾಲಯಗಳನ್ನು ಕಟ್ಟಿಕೊಂಡು ಆಹ್ಲಾದಕರವಾದ ಆರೋಗ್ಯಕರವಾದ ವನಸಂಪತ್ತುಗಳ ನಡುವೆ ಮನಸ್ಸನ್ನು ಭಗವಂತನಿಗೆ ಅರ್ಪಿಸಿ ಧನ್ಯ ರಾಗಬೇಕೆಂದು ಹೇಳಿದರು. ಆ ರೀತಿಯಲ್ಲಿ ಪರಮಾತ್ಮನ ಅರ್ಚನೆಯಲ್ಲಿ ಅತಿ ಬೆಲೆಬಾಳುವ ನಿರ್ಮಲವಾದುದನ್ನು ಅರ್ಪಿಸಿ ಮನಸ್ಸಿನ ಪವಿತ್ರತೆಯನ್ನು, ಪಕ್ವತೆಯನ್ನು ಹೆಚ್ಚಿಸಿಕೊಂಡರು.

ಊರು, ಹೆಸರು ಇಲ್ಲದ ಪರಮಾತ್ಮನನ್ನು ಒಂದು ಊರಿನ ಕೊನೆಯಲ್ಲಿ ಪ್ರತಿಷ್ಠಾಪಿಸಿ ಅರ್ಚಿಸುವುದಕ್ಕೆ ಆರಂಭಿಸಿದಂದಿನಿಂದ ಮಾನವನು ಆ ಶ್ರಮಗಳನ್ನು ನೆಲೆಗೊಳಿಸಿದರು.ನಾಮಜಪಯಜ್ಞದೊಂದಿಗೆ,ಫಲಯಜ್ಞ, ಪುಷ್ಪಯಾಗದಂತಹಾ ಆರಾಧನೆಗಳನ್ನು ನಡೆಸಿದ.ಆ ದಿವ್ಯವಿಭೂತಿ ಸಂದರ್ಶನಾನಂದದ ಪಾರವಶ್ಯತೆಯಲ್ಲಿ ಮುಳುಗಿ ತೇಲುತ್ತಾ "ಅಭಿಷೇಕ ಪ್ರಿಯ ಶ್ಶಿವಃ ಅಲಂಕಾರ ಪ್ರಿಯೋ ವಿಷ್ಣು,ನಮಸ್ಕಾರ ಪ್ರಿಯೋ ಭಾನುಃ"ಎಂದು ಯಾರನ್ನು ಹೇಗೆ ಅರ್ಚಿಸಬೇಕೋ ಹೇಗೆ ಧನ್ಯರಾಗ ಬೇಕೋ ಎಂದು ಮುಂದಿನ ತಲೆಮಾರಿಗೆ ವಿವರಿಸಿದರು.ಆ ರೀತಿಯಲ್ಲೇ ಪಲ್ಲವೋತ್ಸವ, ಫಲೋತ್ಸವ,ಪ್ಲವೋತ್ಸವ, ಪುಷ್ಪಯಾಗ ದಂತಹಾ ಉತ್ಸವಗಳು ನಡೆದಿರುವುದು ಹೊಸದೇನಲ್ಲ. ಒಂದೇ ಮನಸ್ಸಿನಿಂದ ದೇವರನ್ನು ಅರ್ಪಿಸಿ ಭಕ್ತಿಯಿಂದ ಜನ್ಮವನ್ನು ಚರಿತಾರ್ಥಗೊಳಿಸಿಕೊಳ್ಳಬೇಕೆಂದು ಕೊಳ್ಳುವ ಜೀವಿಗಳ ಪ್ರಯತ್ನಗಳಿಗೆ ಪ್ರತಿಬಿಂಬಗಳು ಇವು.

ಆದರೆ ಕಾಲ ಬದಲಾಗಿದೆ. ಆಡಂಬರ ಅಗಸಕ್ಕೆ ಏರಿದೆ.ಅರ್ತಿ ದೂರವಾಗಿ ಹಣದ ಆಸೆ ಹೆಚ್ಚಾಗಿದೆ. ಇದರಿಂದಾಗಿ ಮರಗಳು, ನೀರು ಬರಿದಾಗಿ ಭೂಮಿ ಕ್ರಮೇಣ ಪಾಷಾಣವಾಗುತ್ತಿವೆ.ದಿವ್ಯವಾದ ಜಲಸಂಪತ್ತಿಗೆ ನಿಲಯವಾದ ಕಾರಡವಿಗಳು, ಕಾಗೆಗಳೂ ಪ್ರವೇಶಿಸದ ಅರಣ್ಯಗಳು ಕಥೆಗಳಲ್ಲಿ ಮಾತ್ರ ಉಳಿದು ಜೀವಜಾಲಕ್ಕೆ ವ್ಯಥೆಯನ್ನು ಮಾತ್ರ ಉಳಿಸುತ್ತಿವೆ. ಈ ಅಪಾಯ ಹೀಗೆ ಮುಂದುವರೆದರೆ ಕೆಲವು ವರ್ಷಗಳಲ್ಲಿ ಈ ದೇಶದಲ್ಲೇ ಮರುಭೂಮಿಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಇದರಿಂದ ಪ್ರಳಯ ಬರುತ್ತವೆ ಎಂದು ಶಾಸ್ತ್ರವೇತ್ತರು ಹೇಳುತ್ತಿದ್ದಾರೆ.

ಈ ನಿಟ್ಟಿನಲ್ಲಿ ತಿರುಮಲೆ ತಿರುಪತಿ ದೇವಸ್ಥಾನದವರು ಕೇವಲ ಫಲಪುಷ್ಪಯಾಗಾದಿಗಳೊಂದಿಗೆ ಸುಮ್ಮನಾಗದೇ. ಆ ವನಸಂಪತ್ತುಗಳ ರಕ್ಷಣೆ ಪೋಷಣೆಗಳಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.ನಂದನೋದ್ಯಾನಗಳು, ದಿವ್ಯಾ ರಾಮವಾಟಿಕೆಗಳನ್ನು ಏರ್ಪಡಿಸಿ,ಆ ಪ್ರಾಕೃತಿಕ ಸಹಜತ್ವವನ್ನು ಪುನಃಪ್ರತಿಷ್ಠಾಪಿಸುವುದರೊಂದಿಗೆ ತಿರುಮಲೆಯ ಗಿರಿಯಲ್ಲೂ ವಿವಿಧ ವೃಕ್ಷ ಸಂಪತ್ತಿನೊಂದಿಗೆ ಎಲ್ಲವನ್ನು ಹರಿತಮಯವನ್ನಾಗಿ ಮಾಡುವ ಯೋಜನೆಯನ್ನು ಅನುಸರಿಸುತ್ತಿದೆ.ಆದರೆ, ನಾವೆಷ್ಟೇ ಕಷ್ಟ ಪಟ್ಟರೂ ಎಲ್ಲರೂ ಜೊತೆ ಸೇರಿದಾಗ ಮಾತ್ರ ಈ ಯೋಜನೆಯು ಫಲನೀಡುತ್ತದೆ. ನಮ್ಮ ಜನಜೀವನವನ್ನು ಪುನಃ ಸಸ್ಯ ಶ್ಯಾಮಲ, ಸಂಪತ್ತು ಭರಿತವನ್ನಾಗಿ ಮಾಡಿಕೊಳ್ಳಬೇಕೆಂದರೆ ವನ್ಯ ಸಂಪತ್ತಿನ ಪ್ರೇಮಿಗಳು, ರಕ್ಷಕರು ಎಲ್ಲರೂ ಒಂದಾಗಿ ಮುಂದಕ್ಕೆಸಾಗಿ ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಮುಖ್ಯವಾಗಿ ಆರಾಧನಾ ಸ್ಥಾನಗಳಲ್ಲಿ ವನಸಂಪತ್ತನ್ನು ಬೆಳೆಸುವ ಪ್ರಯತ್ನ ಮಾಡ ಬೇಕು. ಸಾಧ್ಯವಾದಷ್ಟೂ ವನಸಂಪತ್ತನ್ನು ಹೆಚ್ಚಿಸಿ ಎಲ್ಲಾ ಜೀವ ಜಾತಿಗಳಿಗೂ ಸಹಕಾರಿಯಾಗಬೇಕು. ಆಗಲೇ ಮನುಷ್ಯನ ಜೀವನಕ್ಕೆ ಪರಮಾರ್ಥಸಿಗುತ್ತದೆ.ವನಸಂಪತ್ತೇ ಇಲ್ಲದಿದ್ದರೆ ಯಾವ ದೇಶದಲ್ಲೇ ಆದರೂ ಉಳಿಯುವುದು ಅಶಾಂತಿ, ಹೋರಾಟ ಮಾತ್ರ ಎಂದು ಗುರುತಿಸಬೇಕು.

**ಮನುಷ್ಯನಿಗಿಂತಲೂ ಮೊದಲಿರುವುದು ವನಸಂಪತ್ತು**
**ಅದು ನಮ್ಮ ಆಪತ್ತನ್ನೂ ಕಳೆಯಬಲ್ಲದು**

**ಬನ್ನಿ ಗಿಡಗಳನ್ನು ನೆಡೋಣ, ಮರಗಳನ್ನು ಬೆಳೆಸೋಣ, ವಿಶ್ವವನ್ನು ಉಳಿಸೋಣ.**

ಹಸಿರು ತೋರಣ

# ಗೋದಾದೇವಿ ಜನ್ಮನಕ್ಷತ್ರೋತ್ಸವ! ಗೋವಿಂದನ ಪುರಿಶೈವರ ತೋಟೋತ್ಸವ!

- ಮೂಲ. ಶ್ರೀಮತಿ. ಎಂ ಉತ್ತರ ಫಲ್ಗುಣಿ
- ಅನುವಾದ ಕೆ. ನರಸಿಂಹಮೂರ್ತಿ

"ಕಾರ್ಕೋಟಿ ಪೂರ್ವ ಫಲ್ಗುಣಾಂ ತುಲಸಿಕಾನನೋದ್ಭವಮ್।
ಪಾಂಡ್ಯೇ ವಿಶ್ವಂಭರಾಂ ದೇವಿಂ ವಂದೇ ಶ್ರೀ ರಂಗನಾಯಿಕಮ್॥"

ಪಾಂಡ್ಯದೇಶದಲ್ಲಿ ಶ್ರೀ ವಿಷ್ಣೋಪಾಸಕರಾದ ಭಾಗವತರ ತುಲಸಿವನದಲ್ಲಿ ಆಷಾಢ ಶುಕ್ಲ ಚತುರ್ಥಿ ಮಂಗಳವಾರ, ಪೂರ್ವಾಫಲ್ಗುಣಿ ನಕ್ಷತ್ರ, ತುಲಾಲಗ್ನದಲ್ಲಿ ಭೂದೇವಿ ಅಂಶ ದಿಂದ ಅಂಡಾಳ್ (ಗೋದಾದೇವಿ) ಆವಿರ್ಭವಿಸಿದ್ದಾಳೆ. ಅದಕ್ಕೇ ಕಟಕ ಮಾಸ ಪೂರ್ವಫಲ್ಗುಣಿ ದಿನವನ್ನು ಜನ್ಮದಿನವೆಂದು ನಿರ್ಣಯಿಸಿ ಆ ದಿನಕ್ಕೆ ಹತ್ತು ದಿನ ಮುಂಚೆಯಿಂದಲೇ ಉತ್ಸವ ಗಳನ್ನು ಜರುಗಿಸುತ್ತಾ ಪೂರ್ವಫಲ್ಗುಣಿ ದಿನದಂದು ಶಾತ್ತು ಮೋರೆಯನ್ನು ತಿರುಪತಿ ದೇವಸ್ಥಾನದಲ್ಲಿ ಜರುಗಿಸಲಾಗುತ್ತದೆ. ಇದಕ್ಕೆ ತಿರುವಾಡಿಪ್ೂರಂ ಶಾತುಮೋರೆಂದು ಹೆಸರು.

## 'ತಿರುವಾಡಿಪ್ಪೂರಂ' - ಒಂದು ಶೋಧ

ವರಾಹಪುರಾಣದಲ್ಲಿ ಶ್ರೀ ವೇಂಕಟಾಚಲ ಮಹಾತ್ಮೆ ಯೆಂಬ ಅಧ್ಯಾಯದ ಅಷ್ಟೋತ್ತರಶತನಾಮದಲ್ಲಿ "ಗೋವಿಂದಾಯ ನಮಸ್ತುಭ್ಯಂ ಶ್ರೀನಿವಾಸಯತೇ ನಮಃ" ಎಂದು ಶ್ರೀ ವೇಂಕಟಾಚಲಪತಿಯನ್ನು ಶ್ರೀಗೋವಿಂದರಾಜ ಸ್ವಾಮಿಯ ಪ್ರತಿರೂಪದಂತೆ ಹೇಳ್ಪಟ್ಟಿದೆ.

ಕಟ್ಟಿಯಾದವರಾಜರು ರಾಜ್ಯವಾಳುತ್ತಿದ್ದಾಗ ಆ ಸಮಯದಲ್ಲಿ ಭಗವದ್ರಾಮಾನುಜಾಚಾರ್ಯರು ನೆಲೆಸಿದ್ದಾರೆ. ಅದೇ ಸಮಯದಲ್ಲಿ ಚಿದಂಬರ ಗೋವಿಂದರಾಜಸ್ವಾಮಿಯು ಒಂದಾನೊಂದು ಕಾರಣವಾಗಿ ಕಾವೇರಿ ನದಿ ತೀರದಲ್ಲಿರುವ ಶ್ರೀ ಚಿತ್ರಕೂಟವೆಂಬ ಪುರಾಣಪ್ರಸಿದ್ಧವಾದ ದಿವ್ಯಕ್ಷೇತ್ರವನ್ನು ಬಿಟ್ಟು ತಿರುಮಲೆ ಗಡಿಯಲ್ಲಿರುವ ತಿರುಪತಿಯೆಂಬ ದಿವ್ಯನಗರಕ್ಕೆ ಬಂದು ಸೇರಿ ಕೊಂಡಿದ್ದಾನೆ. ಇಲ್ಲಿ ಶ್ರೀ ವೆಂಕಟೇಶ್ವರನೆಂಬ ಅಪರಾವತಾರನಾಗಿ ದೇವತಾರಾಧನೆಯನ್ನು ಸ್ವೀಕರಿಸುತ್ತಾನೆ. ಆಗ ಭಾಷ್ಯಕಾರರು ಶ್ರೀ ಗೋವಿಂದರಾಜಸ್ವಾಮಿಯ ಜೊತೆಗೆ ಶ್ರೀ ವೇಂಕಟೇಶ್ವರ ಸ್ವಾಮಿಗೂ ಸಹಾ ಯಾವುದೇ ಭೇದವಿಲ್ಲದೇ ಸಮಸ್ತ ಐಶ್ವರ್ಯಗಳನ್ನು ಅನುಭವಿಸಬೇಕೆಂದು ತೀರ್ಮಾನಿಸಿದ್ದಾರೆ. ಇದೇ ಸಂದರ್ಭದಲ್ಲಿ ಆಳ್ವಾರ್ ಪುತ್ರಿ ಅಂಡಾಳ್ ಕೈಯಲ್ಲಿ ತಾವರೆ ಹೂವನ್ನು ಹಿಡಿಸಿ ದಿವ್ಯೈಶ್ವರ್ಯಾಭಿವೃದ್ಧಿ ಕಾರಿಣಿಯಾದ ವ್ಯೂಹಲಕ್ಷ್ಮೀಗೆ ಸೇರಿದ ಸಿಂಹಾಸನಕ್ಕೆ ಯಂತ್ರ ಮಂತ್ರೋದ್ಧಾರಣದಿಂದ ಹತ್ತಿಸಿದ್ದಾರೆ. ಶ್ರೀ ಗೋವಿಂದರಾಜ ಸ್ವಾಮಿಯ ಎಡಪಕ್ಕಕ್ಕೆ ವೈಖಾನಸ ಪ್ರಕಾರವಾಗಿ ಪ್ರತಿಷ್ಠಾಪಿಸಿ ಸಮಸ್ತ ಉತ್ಸವಗಳು ಜರುಗುವಂತೆ ಸಂಕಲ್ಪ ಗೈದಿದ್ದಾರೆ.

ಇದೇ ಕುರಿತಾಗಿ ಶ್ರೀ ಗೋದಾದೇವಿ ದಿವ್ಯಾವತಾರಕಾಲವಾದ ಶ್ರೀ ಪೂರ್ವಫಲ್ಗುಣಿ ನಕ್ಷತ್ರ ಕಾಲಮಾನದಲ್ಲಿ ಶ್ರೀಗೋದಾದೇವಿಯನ್ನು ಶ್ರೀ ಗೋವಿಂದರಾಜಸ್ವಾಮಿಯೊಂದಿಗೆ ಸೇರಿಸಿ ತಿರುಮಲೆಯ ಪ್ರಮುಖ ದ್ವಾರದಲ್ಲಿರುವ 'ಅಡಿಪುಳಿ' (ಅಲಿಪಿರಿ) ಮಂಟಪದ ಮುಂಗಡೆ ಸ್ವಯಂವ್ಯಕ್ತವಾದ ಶ್ರೀವೇಂಕಟಾಚಲ ಪತಿ ದಿವ್ಯ ಪಾದಾರವಿಂದಗಳಲ್ಲಿ ಪ್ರತಿಷ್ಠಾಪಿಸಿದ್ದಾರೆ.

## ಪುರಿಶೈವರ ತೋಟೋತ್ಸವ

ತಿರುವಾಡಿಪ್ಪೂರ ಶಾತ್ತುಮೋಲಿನ ದಿನವೇ ತಿರುಮಲೆ ಸ್ವಾಮಿಯು ಪುರಿಶೈವ ತೋಟಕ್ಕೆ ಬರುತ್ತಾರೆ. ಈ ಕಟಕಮಾಸ ಪೂರ್ವಫಲ್ಗುಣಿ ನಕ್ಷತ್ರದಂದು ಸಾಯಂಕಾಲ ಶ್ರೀ ಮಲೆಯಪ್ಪ ಸ್ವಾಮಿ ಒಂದು ಸುತ್ತು ತಿರುಗಿ ಮಹಾಪ್ರದಕ್ಷಿಣಾಕಾರವಾಗಿ ಬಂದು ಪುರಿಶೈವದಲ್ಲಿರುವ ಮಂಟಪಕ್ಕೆ ಒಂದು ಸೇರುತ್ತಾರೆ. ಅಲ್ಲಿ ಸೇವಾಸಮರ್ಪಣದ ನಂತರ ಗೋಷ್ಠಿಯನ್ನು ವಿನಿಯೋಗಿಸಲಾಗುತ್ತದೆ. ಹಿಂದೆಯೇ ಶ್ರೀ ತಿರುಮಲೇಶನು ಹೊರಟು ಹೊಂಗೆ ಮರದ ಬಳಿ ಬರುತ್ತಲೇ ಸ್ವಾಮಿಗೆ ಆರತಿಯೊಂದಿಗೆ ಶೇಷಾರತಿ, ಪುಷ್ಪಸರ, ಮತ್ತು ಶಠಾರಿಯನ್ನು ಮರಕ್ಕೆ ನೇತು ಹಾಕುತ್ತಾರೆ. ಅರ್ಚಕರು ಆ ಶಠಾರಿಯನ್ನು ತಿರುಚ್ಚಿಯಲ್ಲಿ ಇಡದೇ ತೆಗೆದುಕೊಂಡು, ಸ್ವಾಮಿ ಗಜೇಂದ್ರ ಮೋಕ್ಷ ಮಂಡಪ ದಾಟಿ ಬೀದಿಗಿಳಿಯುತ್ತಲೇ ಸ್ವಾಮಿಗೆ ಆರತಿಗೈದು ಶ್ರೀಶಠಾರಿಗೆ



ನೀರಿನ ಪ್ರೋಕ್ಷಣೆಯೊಂದಿಗೆ ಅಭಿಷೇಕ ಮಾಡಲಾಗುತ್ತದೆ. ಮತ್ತೊಮ್ಮೆ ಸ್ವಾಮಿಗೆ ಆರತಿಯೆತ್ತಿ ಆ ಶಠಾರಿಯನ್ನು ಪಲ್ಲಕ್ಕಿಯಲ್ಲಿಡುತ್ತಾರೆ. ನಂತರ ಸ್ವಾಮಿ ಕ್ರಮೇಣ ತಮ್ಮ ಸನ್ನಿಧಿಯೊಳಗೆ ತೆರಳುತ್ತಾರೆ. ಇದು ತಿರುಮಲೆಯಲ್ಲಿ ಜರಗುವ ಪುರಿಶೈವರ ತೋಟೋತ್ಸವ.

ಈ ವಿಧವಾಗಿ ತೋಟೋತ್ಸವವು ಯಾವಾಗಲೂ ಜರುಗುವುದುಂಟು. ಹೀಗೆ ಜರುಗಿಸಲಾಗುತ್ತಿತ್ತು ಎಂಬುದನ್ನು ಹಲವು ಶಾಸನಗಳು ಈ ರೀತಿಯಾಗಿ ತಿಳಿಸುತ್ತವೆ. ಅವಾವುವೆಂದು ತಿಳಿಯೋಣ.

## ಶಾಸನಗಳಲ್ಲಿ ತೋಟೋತ್ಸವ

ತಿರುಮಲೆಯಲ್ಲಿ 1983 ನೇ ಸಂವತ್ಸರ ಸೆಪ್ಟೆಂಬರ್ 23 ನೇ ದಿನ ಜರುಗಿದ ತೋಟೋತ್ಸವ ಪುನರುದ್ಧರಿಸಲ್ಪಟ್ಟ ಉತ್ಸವ ಅದು ಮೊದಲು ಜರುಗಿಸುತ್ತಿದ್ದ ಉತ್ಸವವಾದರೂ ತದನಂತರ ನಿಂತು ಹೋಗಿತ್ತು ಉತ್ಸವ ಅದು ಮೊದಲು ಜರುಗಿಸುತ್ತಿದೆ.

ತೋಟತಿರುನಾಳ್, ತೋಪು ತಿರುನಾಳ್ ಎಂದು ವ್ಯವಹರಿಸಲ್ಪಡುವ ಮೊಟ್ಟ ಮೊದಲು ಸಾಳುವ ನರಸಿಂಹನ ಕಾಲದಲ್ಲಿ (ಸಂಪುಟ - 2 ಶಾಸನ 113) 1494 ನೇ ಸಂವತ್ಸರ ಫೆಬ್ರವರಿ 17 ನೇ ತಾರೀಖಿನ ಶಾಸನದಲ್ಲಿ ಕಂಡು ಬರುತ್ತದೆ. ಚಂದ್ರಗಿರಿ ನಿವಾಸಿ ಹಾರಿತ ಗೋತ್ರ, ಅಶ್ವಲಾಯನ ಸ್ತೋತ್ರ, ನಿಯೋಗಿ ತಿಮ್ಮದಂಡನಾಯಕನಾದ ಈ ಶಾಸನದಲ್ಲಿ ತೋಟೋತ್ಸವ 20 ದಿನಗಳವರೆಗೆ ಆಚರಿಸಲ್ಪಟ್ಟಂತೆ ಹೇಳಲಾಗಿದೆ. ಉತ್ಸವ ಆರಂಭವಾದ ಹನ್ನೊಂದನೆಯ ದಿನ ತಿಮ್ಮದಂಡನಾಯಕನು ಸ್ವಾಮಿಗೆ ಹರಿಕೆಯೊಪ್ಪಿಸಿದಂತೆ ಹೇಳಲ್ಪಟ್ಟಿದೆ.

ಶ್ರೀ ಕೃಷ್ಣದೇವರಾಯನ ಕಾಲದಲ್ಲಿ 1542 ನೇ ಸಂವತ್ಸರ ಸೆಪ್ಟೆಂಬರ್ 15 ನೇ ತಾರೀಖು ಶಾಸನದಲ್ಲಿ (ಸಂಪುಟ - 3, ಶಾಸನ - 28) ತಿರುಪತಿ ಸಮೀಪದಲ್ಲಿರುವ ನರಸಿಂಗಾಪುರನಿವಾಸಿ ಪಂಡಯಾರು ಶನ್ನಮ ಶೆಟ್ಟಿಯಾರ್ ಪುತ್ರ ಪಪ್ಪುಶೆಟ್ಟಿಅಯ್ಯನ್ ತಿರುಪತಿಯ ಶ್ರೀ ಗೋವಿಂದರಾಜಸ್ವಾಮಿ ತಿರುಮಲೆ ಶ್ರೀ ಸ್ವಾಮಿಯು ತನ್ನ ತೋಟದಲ್ಲಿರುವ ಮಂಟಪಕ್ಕೆ ಬಂದಿರಲು ತಿರುಮಲೆ ತಿರುಪತಿಯಲ್ಲಿ ಜರಗುವ ಎಲ್ಲಾ ಮರ್ಯಾದೆಗಳನ್ನು ಬೇರೆ ಬೇರೆಯಾಗಿ ಕೈಗೊಂಡಿದ್ದಾನೆ. ಶಾಸನಗಳಲ್ಲಿ ಹೇಳಲ್ಪಡುವ ಎರಡನೇ ತೋಟೋತ್ಸವವಿದು.

ಅಚ್ಯುತದೇವರಾಯನ ಕಾಲದಲ್ಲಿ 1536ನೇ ಸಂವತ್ಸರ ಮಾರ್ಚ್ 6 ನೇ ತಾರೀಖಿನ ಶಾಸನದಲ್ಲಿ (ಸಂಪುಟ - 4 , ಶಾಸನಂ 73) ಶ್ರೀ ಪರಾಶರ ಭಟ್ಟಾಚಾರ್ಯರ ಶಿಷ್ಯರಾದ ಮಲ್ಲಮಲ್ಲಿಯನ್‌ನ ಕುಮಾರ ರಾಮಯ್ಯನ್ ರಾಮಭಟ್ಟರು ತೋಟೋತ್ಸವ, ರಾಮಚಂದ್ರದೀಕ್ಷಿತ್ ತೋಟೋತ್ಸವ, ಅಪ್ಪಾಪಿಳ್ಳೈ ತೋಟೋತ್ಸವಗಳಿಗೆ ಸಕಲ ಏರ್ಪಾಟುಗಳನ್ನು ಮಾಡಿದಂತೆ ಹೇಳಲಾಗಿದೆ. ಸಂಪುಟ 4, ಶಾಸನ 18 ರಲ್ಲಿ ಜಯಪ್ಪನಾಯಕರ್ ತೋಟೋತ್ಸವ, 19 ನೇ ಶಾಸನದಲ್ಲಿ ಕುಮಾರ ಪಲ್ಲಿಕಿಗೆ ಸೇರಿದ ಕಟ್ಲಕೊಂಡಮನಾಯಕರ ಕುಮಾರನು ಮೂರ್ತಿನಾಯಕರ ತೋಟೋತ್ಸವ, ಸದಾಶಿವರಾಯರ ಕಾಲಕ್ಕೆ ಸೇರಿದ 1554 ನೇ ಸಂವತ್ಸರ ಆಗಸ್ಟ್ 7 ನೇ ದಿನಾಂಕದ ಶಾಸನವು ತೋಟೋತ್ಸವಕ್ಕೆ ಸಂಬಂಧಿಸಿದ ಏಕೈಕ ಸಂಪೂರ್ಣ ಶಾಸನ.

ಇದರಲ್ಲಿ ತೋಟೋತ್ಸವವನ್ನು ಜರಗಿಸುವ ವಿಧಿ-ವಿಧಾನಗಳನ್ನು, ಶ್ರೀ ಮಲೆಯಪ್ಪಸ್ವಾಮಿಗೆ ಮತ್ತು ಉಭಯ ದೇವಿಯರಿಗೆ (ಶ್ರೀದೇವಿ-ಭೂದೇವಿ), ಕೃಷ್ಣಸ್ವಾಮಿಗೆ, ವಿಶ್ವಕ್ಸೇನಾಚಾರ್ಯರರಿಗೆ,ಭಾಷ್ಯಾಕಾರರಿಗೆ ಜರುಗಿಸಬೇಕಾದ ಪೂಜೆ, ಮರ್ಯಾದೆಗಳು, ಸೇವಾ ಕೈಂಕರ್ಯಗಳನ್ನು ಸವಿವರವಾಗಿ ತಿಳಿಸಲಾಗಿದೆ. ಈ ಉತ್ಸವದಲ್ಲಿ ಮೂರ್ತಿನಾಯಕರ್, ರಾಜೇಂದ್ರಸಿಂಗ್ ನೆಲ್ಲೂರಿನಲ್ಲಿ 50 ಸ್ವರ್ಣ ನಾಣ್ಯಗಳನ್ನು, ಪುದಿಪಟ್ಲ ಕೋನೇಟಿಯವರು 25 ನಾಣ್ಯಗಳನ್ನು ಒಟ್ಟು 75 ನಾಣ್ಯಗಳ ಆದಾಯವನ್ನು ನೀಡಬಲ್ಲ ಭೂಮಿಯನ್ನು ತಿರುಮಲೆ ಶ್ರೀ ಭಂಡಾರಕ್ಕೆ ಸಮರ್ಪಿಸಿದ್ದಾರೆ. ಆ 75 ನಾಣ್ಯಗಳನ್ನು ಯಾವುದಕ್ಕೆ, ಹೇಗೆ ಖರ್ಚು ಮಾಡಿದ್ದಾರೆಂಬುದನ್ನು ಸಹಾ ಆ ಶಾಸನದಲ್ಲಿ ಬರೆಯಲಾಗಿದೆ. ಮೂರ್ತಿ ನಾಯಕರ ಕೈಯಿಂದ ಸ್ವಲ್ಪ ಕಾಲ ಆಚರಿಸಲ್ಪಟ್ಟು,ಬೆಳೆಯುತ್ತಿರುವ ಹೂದೋಟಗಳಲ್ಲಿ ನಿರ್ಮಿಸಲ್ಪಟ್ಟ ಮಂಟಪದಲ್ಲಿ ಸ್ವಾಮಿಯವರು, ಉಭಯದೇವಿಯರು, ಶ್ರೀಕೃಷ್ಣನು, ಸೇನಾಧಿಪತಿಗಳು, ಶ್ರೀ ರಾಮಾನುಜಾ

ಚಾರ್ಯರು ತಾಳ್ಲಪಾಕ ತಿರುಮಲಯ್ಯಂಗಾರ್ ಏರ್ಪಾಟು ಮಾಡಿದ ಅಣಿ ಬ್ರಹ್ಮೋತ್ಸವ (ಜೂನ್- ಜುಲೈ) ದ ಅಂಕುರಾರ್ಪಣೆ ದಿನದಂದು ಶ್ರವಣನಕ್ಷತ್ರ ಪ್ರಯುಕ್ತ ಮುಹೂರ್ತದಲ್ಲಿ ಆಸೀನರಾಗುತ್ತಾರೆ. ತದನಂತರ ಪುನಗು ಕಸ್ತೂರಿ ಚಂದನಗಳಿಂದ ತಿರುಮಜ್ಜನ ನಡೆಯುತ್ತದೆ.ಬಳಿಕ ಅಲಂಕಾರ, ನೈವೇದ್ಯ, ಆರತಿ, ಶಠಾರಿ ಕೊಡುವ ಪ್ರಕ್ರಿಯೆ ಇವತ್ತಿಗೂ ಆಚರಣೆಯಲ್ಲಿವೆ.

ತೋಟೋತ್ಸವದ ಹೆಸರಿನಲ್ಲಿ ಜರಗುವ ಉತ್ಸವ ಕಡೆಯದಾಗಿ ವೇಂಕಟಪತಿರಾಯನ ಕಾಲದಲ್ಲಿ 1606 ನೇ ವರ್ಷ ಮಾರ್ಚ್ 31 ನೇ ದಿನಾಂಕ (6, 13ನೇ ಶಾಸನದಲ್ಲಿ) ಜರುಗಿದಂತೆ ಕಾಣಬಹುದು. ವಿಜಯನಗರದ ಕೋಶಾಧಿಪತಿ ಬೊಕ್ಕಸಂಕೃಷ್ಣಯ್ಯ ತನ್ನ ತಂದೆ ಬೊಕ್ಕಸ ನರಸಯ್ಯ ಹೆಸರಿನಲ್ಲಿರುವ ಹೂದೋಟದ ಮಂಟಪದಲ್ಲಿ ಆಚರಿಸಿದ್ದನಾದರೂ, ಅಲ್ಲಿಂದ ಮುಂದೆ ನವಾಬರ ಕಾಲದಲ್ಲಾಗಲೀ, ಕಂಪನಿಯವರ ಶಾಸನಕಾಲದಲ್ಲಾಗಲೀ, ಮಹಂತರ ಆಳ್ವಿಕೆಯಲ್ಲಾಗಲೀ ಈ ಉತ್ಸವವು ಆಚರಿಸಿದಂತೆ ಯಾವ ದಾಖಲೆ ಇಲ್ಲ. ಸುಮಾರು 400 ವರ್ಷಗಳ ನಂತರ 1983 ನೇ ಇಸವಿಯಲ್ಲೇ ಮತ್ತೆ ಜರುಗಿಸಲಾಗಿದೆ.

'ತೋಟೋತ್ಸವ' ವೆಂಬ ಹೆಸರಿನಲ್ಲೇ ಉತ್ಸವ ನಡೆಯಲಿಲ್ಲವಾದರೂ ಶ್ರೀನಿವಾಸಸ್ವಾಮಿ ತಿರುಮಲೆಯಲ್ಲಿನ ಹಲವು ಮುಖ್ಯ ಪ್ರದೇಶಗಳಿಗೆ ಸಂದರ್ಶಿಸುವುದು, ವನಭೋಜನಗಳಂತಹ ಉತ್ಸವಗಳು ತೋಟೋತ್ಸವ ಎಂಬ ಹೆಸರಿನಡಿಯಲ್ಲೇ ಬರುತ್ತವೆ. ಇದೇ ನಿಟ್ಟಿನಲ್ಲಿ, ಸ್ವಾಮಿ ಪುರಿಶೈವರ ತೋಟಕ್ಕೆ ಬರುವಂತಹ ಉತ್ಸವಕ್ಕೆ ಪುರಿಶೈವರ ತೋಟೋತ್ಸವ ಎಂದು ಹೆಸರು. ಈ ಉತ್ಸವ 1527 ನೇ ಇಸವಿ ಯದಾದರೂ ತಿರುಮಲೆಯ ತಿರುಮಲರಾತಿ ಮಂಟಪದಲ್ಲಿ ನಿರ್ವಹಿಸಲ್ಪಡುತ್ತದೆ. ಗೋದಾದೇವಿ ಹುಟ್ಟಿದ ದಿನದಂದೇ ಅನಂತಾಳ್ವಾರರು ಪರಮ ಪದಗೈದ ದಿನವೂ ಕೂಡ ಬರುತ್ತದೆ. ಆದ್ದರಿಂದ ಆ ದಿನವೇ ಪುರಿಶೈವರ ತೋಟೋತ್ಸವವನ್ನು ಜರುಗಿಸುತ್ತಾರೆ. ಆಂಡಾಳ್ ತಿರುವಾಡಿಪ್ಪೂರಂ ಉತ್ಸವವ ಸಹಾ ಮಾಡುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಅನಂತಾಳ್ವಾರರ ಹೂತೋಟದ ಕುರಿತು ಸ್ವಲ್ಪ ತಿಳಿದುಕೊಳ್ಳೋಣ.


ಅನಂತಾಳ್ವಾರರು ಹಾಗೂ ಅವರ ಪತ್ನಿ ಇಬ್ಬರೂ ಸೇರಿ ಎಷ್ಟೋ ವ್ಯಯ - ಪ್ರಯಾಸಗಳಿಂದ ನಿರ್ಮಿಸಿದ "ರಾಮಾನುಜ ಪುಷ್ಪವಾಟಿಕ"ದಲ್ಲಿ ಬಗೆಬಗೆಯ ಬಣ್ಣ - ಬಣ್ಣದ ಹೂಗಳನ್ನು ಬೆಳೆಯುತ್ತಿದ್ದರು. ಪ್ರತಿನಿತ್ಯ ಈ ತೋಟದಿಂದ ಆರಿಸಿ ಆರಿಸಿ ಶೇಖರಿಸಿದ ಹೂಮಾಲೆಯನ್ನು ಸ್ವಾಮಿಯ ಸನ್ನಿಧಿಗೆ ಸಮರ್ಪಿಸುತ್ತಿದ್ದರು. ಈ ಪುಷ್ಪಹಾರಗಳನ್ನು ಅಪಾದ ಮಸ್ತಕಕ್ಕೆ ಹಾಕಿಕೊಂಡು ಅಷ್ಟೆತ್ತರಕ್ಕೆ ನಿಂತು ಸ್ವಾಮಿ ಭಕ್ತರಿಗೆ ದರ್ಶನ ಕೊಡುತ್ತಿದ್ದನು.ಆ ಆನಂದನಿಲಯನಾದ ಗೋವಿಂದನ ಬಗೆ ಬಗೆಯಾದ ವೇಷಭೂಷಗಳಲ್ಲಿ ಪ್ರಕಾಶನಗೊಂಡು ಮೈಮರೆಸುತ್ತಿದ್ದನು.

ಹೀಗೆ ದಿನವೂ ಸಾಗುತ್ತಿರಲು,ಸಂತೋಷಗೊಂಡ ಸಪ್ತಗಿರೀಶನು ತನಗೆ ಸಮರ್ಪಿಸಲ್ಪಟ್ಟ ಪುಷ್ಪಾಹಾರಗಳೇ ಇಷ್ಟು ಸುಂದರವಾಗಿರಲು ಇನ್ನು ಆಳ್ವಾರರು ಬೆಳೆಸಿರುವ ತೋಟ ಅದೆಷ್ಟೋ ಸುಂದರವಿರಬಹುದು ಅದನ್ನು ನೋಡಬೇಕೆಂದುಕೊಂಡಿದ್ದಾನೆ. ರಾತ್ರಿಯ ಏಕಾಂತ ಸಮಯದಲ್ಲಿ ಅರ್ಚಕರು ಸ್ವರ್ಣದ್ವಾರವನ್ನು ಹಾಕಿ ತೆರಳಿದ ಬಳಿಕ ಆನಂದನಿಲಯನು ಅಲಮೇಲುಮಂಗಳೊಂದಿಗೆ ಸೇರಿ ಅನಂತಾಳ್ವಾರರ ತೋಟವನ್ನು ಪ್ರವೇಶಿಸಿದ್ದಾನೆ. ಆ ವನವನ್ನು ನೋಡಿ ಎಷ್ಟೋ ಪರವಶಗೊಂಡಿದ್ದಾನೆ. ಆಡಿ - ಹಾಡಿ ವಿಹರಿಸಿದ್ದಾನೆ.

ಹೀಗೆ ಆ ರಾತ್ರಿಯೆಲ್ಲಾ ತೋಟವೆಲ್ಲಾ ತಿರುಗಿ ಕಿತ್ತಾಡಿ ತುಳಿದಾಡಿ ಬೆಳಗಿನ ಮುಂಜಾನೆಯ ಸುಪ್ರಭಾತದ ಹೊತ್ತಿಗೆ ಆ ದಿವ್ಯ ದಂಪತಿಗಳಿಬ್ಬರೂ ಆನಂದನಿಲಯವನ್ನು ಸೇರಿ



ಕೊಂಡಿದ್ದಾರೆ. ಬೆಳಕು ಹರಿದ ನಂತರ ಪುಷ್ಪ ಶೇಖರಣೆಗಾಗಿ ತೋಟಕ್ಕೆ ಪ್ರವೇಶಿಸಿದ ಅನಂತಾಳ್ವಾರರಿಗೆ ಆನಂದ ಉಡುಗಿ ಹೋಗಿದೆ. ಈ ರೀತಿಯಾಗಿ ಹಾಳಾದ ತೋಟವನ್ನು ನೋಡಿ ಅದೆಷ್ಟೋ ಕೋಪ ಬಂದಿದೆ. ಅದರೇನು ಮಾಡಿ ಯಾರು? ಆ ದೇವ ದೇವತೆಗಳಿಬ್ಬರೂ ಪ್ರತಿ ರಾತ್ರಿ ಬಂದು ತೋಟವೆಲ್ಲಾ ತಿರುತಿರುಗಿ ಸರ್ವನಾಶ ಮಾಡಹತ್ತಿದ್ದಾರೆ. ಇದನ್ನೆಲ್ಲಾ ಭರಿಸಿದ ಆಳ್ವಾರರು ಕಣ್ತುಂಬಾ ಆರ್ದ್ರವಾಗಿ ನೀರಿಟ್ಟುಕೊಂಡು ಬೆಟ್ಟದ ದೈವಕ್ಕೆ ಮೊರೆಯಿಟ್ಟಿದ್ದಾರೆ. ಇದನ್ನು ಕಂಡ ಸ್ವಾಮಿಗೆ ಅದೆಷ್ಟೋ ಬಾಧೆಯೆನಿಸಿದೆ. ಅರ್ಧರಾತ್ರಿ ಸಮಯದಲ್ಲಿ ಇಬ್ಬರೂ ಆಳ್ವಾರರ ಕಣ್ಣಿಗೆ ಬಿದ್ದಿದ್ದಾರೆ. ಇಬ್ಬರನ್ನೂ ಹಿಡಿಯಲೆತ್ನಿಸಿದ್ದಾರೆ. ಆದರೆ ಸ್ವಾಮಿ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ. ಆದರೆ ಅಮ್ಮ ಮಾತ್ರ ಆತನ ಕೈಗೆ ಸಿಕ್ಕಿದ್ದಾಳೆ. ಆಕೆಯನ್ನು ಹಿಡಿದುಕೊಂಡು ಆ ತೋಟದಲ್ಲಿರುವ ಸಂಪಿಗೆ ಮರದ ಕಾಡಕ್ಕೆ ಗಟ್ಟಿಯಾಗಿ ಬಂಧಿಸಿದ್ದಾರೆ. ಅಮ್ಮ ಎಷ್ಟೋ ಬಗೆಯಲ್ಲಿ ಮೊರೆಯಿಟ್ಟಿದ್ದಾಳೆ. ಆದರೆ ಯಾವ ಮಾತಿಗೂ ಆತ ಕರಗಲಿಲ್ಲ. ಸರಿ-ಆಕೆಯ ಪತಿಗಾಗಿ ಎದುರು ನೋಡುತ್ತಿದ್ದಾನೆ. ಆಗ ಆ ಪುರುಷನು ತೋಟದಿಂದ ಸ್ವಾಮಿಯ ದಕ್ಷಿಣ ಬೀದಿಯಲ್ಲಿ ಪ್ರವೇಶಿಸಿ ಆಲಯಕ್ಕೆ ಅಪ್ರದಕ್ಷಿಣವಾಗಿ ಓಡಿ ಹೋಗುವುದು ಕಂಡು ಆತನನ್ನು ಅಟ್ಟಾಯಿಸಿಕೊಂಡು ಹೋಗಿದ್ದಾನೆ. ಆದರೆ ತಪ್ಪಿಸಿಕೊಂಡು ಓಡಿ ಹೊ ಕಾಣಲಿಲ್ಲ. ಆಗ ಸ್ವಾಮಿಯು "ಅರ್ಚಕರೇ, ನೀವೇನು ಕಂಗಾಲಾಗಬೇಡಿ. ಅಲ ವೇಲುಮಂಗ ಅನಂತಾಳ್ವಾರರ ತೋಟದಲ್ಲಿ ಬಂಧಿಸಲ್ಪಟ್ಟಿ ದ್ದಾಳೆ. ನೀವು ಹೋಗಿ ಸಗೌರವಯುತವಾಗಿ ಹಿಂದಕ್ಕೆ ಕರೆದು ತನ್ನಿ ಎಂದರು. ಆದ್ದರಿಂದ ಎಲ್ಲರೂ ಅನಂತಾಳ್ವಾರರ ಮನೆಗೆ ಹೋಗಿ "ಅನಂತಾಚಾರ್ಯ! ಎಷ್ಟು ಭಾಗ್ಯಶಾಲಿಯಯ್ಯಾ ನೀನು! ಸಾಕ್ಷಾತ್ ತಾಯಿಯನ್ನೇ ಬಂಧಿಸಿದ ಪರಮ ಭಕ್ತನು ನೀನು ಎಂದಿದ್ದಾರೆ. ಅದನ್ನು ಕೇಳುತ್ತಲೇ ಅನಂತಾಳ್ವಾರರು "ಅಯ್ಯೋ! ಎಂಥಾ ಕೆಲಸ ಮಾಡಿ ಬಿಟ್ಟೇ ಎಂದು ಅಮ್ಮನಿಗೆ ಸಾಷ್ಟಾಂಗವೆರಗಿ ಒಂದು ಹೂ ಪಟ್ಟಿಯಲ್ಲಿ ಕೂರಿಸಿ ಕೊಂಡು ಆಲಯಕ್ಕೆ ಕರೆ ತಂದಿದ್ದಾರೆ. ಅದಕ್ಕೆ ಶ್ರೀನಿವಾಸನು "ಓ ಮಾವಾ! ನಿನ್ನ ಮಗಳನ್ನು ಹೂ ಬುಟ್ಟಿಯಲ್ಲಿ ಕೂರಿಸಿ ನನಗೆ ಸಮರ್ಪಿ ಸುತ್ತಿರುವುದರಿಂದ ನೀನು ನನಗೆ ಮಾವನಾಗಿದ್ದೀಯೆ! ಹೂಬುಟ್ಟಿಯಿಂದ ಯಥಾ ಸ್ಥಾನವಾದ ಶ್ರೀನಿವಾಸನ ವಕ್ಷಸ್ಥಳಕ್ಕೆ ಅಮ್ಮನವರು ಸೇರಿದ್ದಾರೆ. ಸ್ವಾಮಿಯು ವಸ್ತ್ರಾಲಂಕಾರ, ಚಂದನ ತಾಂಬೂಲಾದಿಗಳಿಂದ ಅನಂತಾಳ್ವಾರರನ್ನು ಸತ್ಕರಿಸಿದ್ದಾನೆ.



ಹೀಗೆ ಪ್ರತಿಸಂವತ್ಸವರೂ ಆಡಿಮಾಸ (ಕರ್ಕಾಟಕ ಮಾಸ)ದಲ್ಲಿ ಪೂರ್ವಫಲ್ಗುನಿ ನಕ್ಷತ್ರ ತಿರುವಾಯಿ (ಡಿ) ಪುರಂ" ಉತ್ಸವದಂದು ಶ್ರೀನಿವಾಸ ಸ್ವಾಮಿಯು ಶ್ರೀದೇವಿ ಭೂದೇವಿಯವರೊಂದಿಗೆ ಕೂಡಿ ಆಲಯಕ್ಕೆ ಪ್ರದಕ್ಷಿಣಾಕಾರವಾಗಿ ಮೆರವಣಿಗೆ ಹೊರಟು ತೋಟವನ್ನು ತಲುಪಿ ಯಥಾಪ್ರಕಾರ ಪೂಜೆಗಳನ್ನು ಸ್ವೀಕರಿಸಿದ ನಂತರ ಪುಷ್ಪಾಹಾರ, ಶಠಾರಿಗಳಿಂದ ಅನಂತಾ ಚಾರ್ಯರ ಬೃಂದಾವನದಲ್ಲಿರುವ ಬಕುಳ ಮರಕ್ಕೆ ಸತ್ಕರಿಸಿದ ಬಳಿಕ ಪ್ರದಕ್ಷಿಣಾಕಾರವಾಗಿ ಮೆರವಣಿಗೆಯೊಂದಿಗೆ ಆಲಯವನ್ನು ಪ್ರವೇಶಿಸುತ್ತಾರೆ.

ಈ ದಿನದಂದೇ ಅನಂತಾಳ್ವಾರರು ಪರಮ ಪದ ಹೊಂದಿದ ದಿನವೆಂದೂ ಆ ಬೃಂದಾವನದಲ್ಲಿರುವ ಬಕುಳ ವೃಕ್ಷ ವಾಗಿ ಅನಂತಾರ್ಯರೇ ಉದ್ಭವಿಸಿದ್ದಾರೆಂದೂ ಹಿರಿಯರ ಮಾತು. ಈ ದಿನವೇ ಗೋದಾದೇವಿ ಹುಟ್ಟಿದ ದಿನವಾದ ತಿರುವಾಡಿಪ್ಪೂರಂನ ದಿನವಾದುದುದೆಂದೂ ವಿಶೇಷವಾಗಿ ಹೇಳಬಹುದು.


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್, ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ




74 ನೆಯ ಶಾಸನವು ವೆಂಕಟೇಶನಿಗೆಂದು ಮಾಡುವ ಚಿತ್ತಿರೈ, ಪುರಟ್ಟಾಸಿ ಉತ್ಸವಗಳಲ್ಲಿ ಆಂಡಾಳ್ ಹಾಡಿದ ತಿರುಪ್ಪಾವೈ ಪಾಶುರಗಳ ಸೇವೆ ನಡೆಯುವಲ್ಲಿ ತಿರುಪ್ಪಾವೈ ಪಡಿಯೆಂಬ ಹೆಸರಿನಲ್ಲಿ ಆಹಾರ ನಿವೇದನೆಯನ್ನು ತಿಳಿಸುವುದು. ವಿಜಯಗಂಡ ಗೋಪಾಲನ ಆಳ್ವಿಕೆಯ 14 ನೇ ಅಥವಾ 24 ನೇ ವರ್ಷದಲ್ಲಿ ಹೊರಬಿದ್ದ (ಕ್ರಿ.ಶ. 1264 ರ ಅಥವಾ 1274 ಹೊತ್ತಿನ) 61 ನೆಯ ಶಾಸನದಲ್ಲಿ ಗೋವಿಂದರಾಜಸ್ವಾಮಿಗೆ ವೈಕಾಸಿ ಉತ್ಸವದಲ್ಲಿ ಪ್ರತಿ ನಿತ್ಯವೂ ತಿರುಮೊಳಿಪ್ಪಡಿ ನಿವೇದನೆಯಾಗುವುದನ್ನು ಈಗಾಗಲೇ ನೋಡಿದ್ದೇವೆ. 74 ನೆಯ ಈ ಶಾಸನದಲ್ಲಿ ತಿರುಪ್ಪಾವೈ ಪಡಿಯ ಏರ್ಪಾಡಿಗೆಂದು ಹಲವು ಗಂಡ ಗೋಪಾಲನ್ ಮಾಡೈಗಳನ್ನು ದಾನವಾಗಿ ನೀಡಿದ್ದನ್ನು ಕಾಣುತ್ತೇವೆ. ಈ ಕಾಲಕ್ಕೆ ನಾಲಾಯಿರ ದಿವ್ಯ ಪ್ರಬಂಧಗಳ ಮೂಲಕ (ವೈಷ್ಣವ ಆಳ್ವಾರರು ರಚಿಸಿದ ಪಾಶುರಗಳು) ವೈಷ್ಣವ ಆಚಾರಗಳು ಸಂಪ್ರದಾಯಗಳು ಆಲಯದಲ್ಲಿ ಮನೆಮಾಡ ತೊಡಗಿದವು ಎಂದು ನಾಚ್ಚಿಯಾರ್ ತಿರುಮೊಳಿಯ, ಕುಲಶೇಖರ ಆಳ್ವಾರ್ ಹಾಗೂ ತಿರುಮಂಗೈ ಆಳ್ವಾರರ ತಿರುಮೊಳಿಗಳ ಪ್ರಾಚುರ್ಯದಿಂದಾಗಿ ತಿಳಿಯ ಬಹುದಾಗಿದೆ.

75 ನೆಯ ಶಾಸನವು ವೆಂಕಟೇಶ್ವರ ಸ್ವಾಮಿಯ ಪುರಟ್ಟಾಸಿ ಹಾಗೂ ಚಿತ್ತಿರೈ ಉತ್ಸವಗಳನ್ನು ತಿಳಿಸುವುದು.

77 ನೇ ಶಾಸನವು ಅಂದಿನ ನಾಣ್ಯವಾದ ಮಾಡೈಯನ್ನು ಹಿಂದಿನ ಹಣದೊಡನೆ ಹೋಲಿಸುವಂತೆ ತೋರುತ್ತದೆ. ಪ್ರಾಯಶಃ ಏಳುವರೆ ವರಾಹ ಪಣಗಳಿಗೆ ಸಮವೆಂದಿರಬೇಕು.

ವಿಜಯ ಗಂಡ ಗೋಪಾಲನ (ಕ್ರಿ.ಶ. 1255) ಆಡಳಿತದ ಐದನೆಯ ವರ್ಷದಲ್ಲಿ ಐದು ಮಾಡೈ ಹಣವನ್ನು ಠೇವಣಿಯನ್ನಾಗಿಟ್ಟು, ತಿರುಮಲೆಯಲ್ಲಿ ನಿರ್ಮಿತವಾಗಿದ್ದಂತಹ ಒಂದಾನೊಂದು ಹೂವಿನ ಮಂಟಪಕ್ಕೆ ಯಾವುದೋ ಉತ್ಸವದ ಮೆರವಣಿಗೆಯಲ್ಲಿ ಉತ್ಸವ ವಿಗ್ರಹಗಳು ಬಂದು ವಿಶ್ರಾಂತಿ ಪಡೆದಾಗ ಒಂದು ಅಪ್ಪಪಡಿಯ ನಿವೇದನೆಯಾಗುವ ಪದ್ಧತಿಯನ್ನು 78 ನೇ ಶಾಸನವು ತಿಳಿಸುವುದು.

79 ನೆಯ ಶಾಸನವು ಆರು ತುಣುಕುಗಳಾಗಿದ್ದ ಇಲ್ಲಿನ ಅಡಿ ಭಾಗದಲ್ಲಿ ಸೌಮ್ಯವರ್ಷ, ರಾಮಾನುಜ, ಎಂಬೆರುಮಾನಾರ್ ಎಂಬ ಪದಗಳ ಗುರುತು ಸಿಗುತ್ತದೆ. ಈ ತ್ರುಟಿತ ಭಾಗಗಳು ಹದಿಮೂರನೆಯ ಶತಮಾನದ ನಾಲ್ಕನೆಯ ಪಾದಕ್ಕೆ ಸೇರಿದ ವಿಜಯಗಂಡ ಗೋಪಾಲನ ಕಾಲಕ್ಕೆ ಸೇರಿದವುಗಳೆಂದು ತಿಳಿದು ಬರುವುದರಿಂದಾಗಿ ರಾಮಾನುಜರ ವಿಗ್ರಹವನ್ನು ತಿರುಮಲೆಯಲ್ಲಿ ಪೂಜಿಸಿದ ವಿಷಯ - ಪ್ರಾಯಶಃ ಆ ವಿಗ್ರಹದ ಪ್ರತಿಷ್ಠಾಪನೆಯಾಯಿತು ಎಂದೋ ಅಥವಾ ಆ ವಿಗ್ರಹದ ನಿವೇದನೆಗೆ ಏರ್ಪಾಡು ಮಾಡಲಾಯಿತು ಎಂದೋ ತಿಳಿಯಬಹುದು. ಭಗವದ್ರಾಮಾನುಜರು ಪರಮಪದಿಸಿದ ಕ್ರಿ.ಶ. 1137 - 38 ಕ್ಕೆ ಇದು ನೂರಹತ್ತು ವರ್ಷ ನಂತರದ ಕಾಲವಾಗುವುದು.

81 ನೆಯ ಶಾಸನವು ತಿರುಕಾಳತ್ತಿ ದೇವಯಾದವ ರಾಯನ (ಕ್ರಿ.ಶ. 1209 - 10) (ಪುಟ - 103 ಸಂಪುಟ -1) ಆಡಳಿತದ ಹತ್ತೊಂಬತ್ತನೆಯ ವರ್ಷದಲ್ಲಿ ತಿರುಮಲೆಯ ಆಲಯದ ಸ್ಥಾನತ್ತಾರರ ಚಿನ್ನಹವನ್ನು ಅವಿಲಾಲಿ ಗ್ರಾಮ ಸಭೆಯು ಪರಿಶೀಲಿಸಿದ ನಂತರ ಈ ಮೊದಲು ದೇವದಾನವಾಗಿದ್ದದ್ದನ್ನು ವಿಸ್ತರಿಸಿ ಇಡೀ ಕುಡವೂರು ನಾಡನ್ನು ಶ್ರೀವೆಂಕಟೇಶ್ವರ ಸ್ವಾಮಿಯ ಪೂಜೆಗೆಂದು ನೀಡಿದುದ್ದನ್ನು ತಿಳಿಸುವುದು. ಇಲ್ಲಿ ಈ ನಾಡುದೇವರ ಸ್ವತ್ತು ಎಂದು ಗುರುತಿಸಲನುವಾಗುವಂತೆ ನಾಡಿನ ಗಡಿ ಭಾಗಗಳಲ್ಲಿ ಚಕ್ರ ಮುದ್ರಾಂಕಿತ ಶಿಲೆಗಳನ್ನು ನೆಟ್ಟು ಸೀಮೆಯನ್ನು ಗುರುತಿಸ ಬೇಕೆಂದು ನಿರ್ದೇಶವಾಯಿತು. ಈ ಹೊತ್ತಿಗೆ ನಿತ್ಯ ನೈವೇದ್ಯಗಳಿಗೆ ಇದ್ದ ಏರ್ಪಾಡುಗಳು ಕಡಿಮೆಯಾದವೆಂದು ತೋರಿ ಬಂದು, ಸ್ಥಾನತ್ತಾರರು ಹೆಚ್ಚಿನ ವಂತಿಗೆಯ ಬಗ್ಗೆ ಬೇಡಿಕೆ ಮಂಡಿ ಸಿರಬೇಕು. ಪಾಂಡ್ಯ ರಾಜನು ನೀಡಿದ ದೇವದಾನ ಮತ್ತು ನಂತರದ ಕಾಲಕ್ಕೆ ಎಂದರೆ ಕ್ರಿ.ಶ. 1254 ಕ್ಕೆ ಸೇರಿದ್ದು.

82 ನೇ ಶಾಸನವು ತಿರುಕಾಳತ್ತಿ ದೇವಯಾದವ ರಾಯನ ಮಗ ವೀರರಾಕ್ಷಸ ಯಾದವರಾಯನು ಚೋಳ ರಾಜನ ಆಡಳಿತದ ಹದಿನೈದನೆಯ ವರ್ಷದಲ್ಲಿ ಪ್ರಾಯಶಃ ಈತ

ಮೂರನೆಯ ಕುಲೋತ್ತುಂಗ ಚೋಳನಾಗಿದ್ದಿರಬೇಕು. ಇದೇ ವರ್ಷದಲ್ಲಿ ಎಂದರೆ ಮೂರನೇ ಕುಲೋತ್ತುಂಗ ಚೋಳನ ಆಡಳಿತದ ಹದಿನೈದನೆಯ ವರ್ಷದಲ್ಲಿ - ಆತನು ಶ್ರೀಕಾಳ ಹಸ್ತೀಶ್ವರನಿಗೆ ಒಂದು ತಿರುಮಂತ್ರ ತಿರುಬ್ಬೋನಕದ ನಿವೇದನೆ ಯನ್ನು (ಪುಟ 104 ಸಂಪುಟ 1 ) ನೀಡಿದಂತೆಯೇ - ಒಂದು ತಿರುಬ್ಬೋನಕದ ಏರ್ಪಾಡನ್ನು ಸೂಚಿಸುವುದು.

84 ನೇ ಶಾಸನವು ಶ್ರೀ ವೆಂಕಟೇಶ್ವರಸ್ವಾಮಿಗೆ ಎರಡು ತುಪ್ಪದ ದೀಪ ಹಚ್ಚಿಡಲು ವೀರನರಸಿಂಗ ಯಾದವರಾಯನ ಆಡಳಿತದ ಹನ್ನೆರಡನೆಯ ವರ್ಷದಲ್ಲಿ (ಕ್ರಿ.ಶ. 1217)ಆತನ ರಾಣಿ ಯಾದವರಾಯ ನಾಚ್ಚಿಯಾರ್ ನೀಡಿದ 64 ಹಸುಗಳು ಹಾಗೂ ಒಂದು ಗೂಳಿಯನ್ನು ಕುರಿತು ಹೇಳಿದರೆ, 85 ನೇ ಶಾಸನವು ದೊರೆಯ ಆಡಳಿತದ ಹದಿನೈದನೆಯ ವರ್ಷದಲ್ಲಿ ಗೋವಿಂದ ರಾಜಸ್ವಾಮಿಗೆ ಒಂದು ತುಪ್ಪದ ದೀಪಕ್ಕೆಂದು 32 ದೊಡ್ಡ ಹಸುಗಳನ್ನೂ - ಒಂದು ಗೂಳಿಯನ್ನು ಕೊಟ್ಟದ್ದನ್ನು ತಿಳಿಸುವುದು.

(ಈ ಮೂರು ಯಾದವರಾಯರ ಕಾಲಸೂಚನೆಯ ಪಟ್ಟಿಯಲ್ಲಿ - ತಿರುಕಾಳತ್ತಿದೇವ, ವೀರರಾಕ್ಷಸ ಮಾದವರಾಯ, ವೀರ ನರಸಿಂಗ ದೇವರುಗಳ ಕಾಲಗಳು ಒಬ್ಬರ ಕಾಲ ಇನ್ನೊಬ್ಬರ ಕಾಲದೊಡನೆ ಬೆರೆತು ಹೋಗುವುದನ್ನು ನೋಡುತ್ತೇವೆ. (ಪುಟ - 103 - 105 ಸಂಪುಟ - 1) ಪ್ರಾಯಶಃ ವೀರರಾಕ್ಷಸನು ತಾರುಣ್ಯದಲ್ಲಿಯೇ ಸೇರಿಕೊಂಡಿರಬೇಕು.ಕಾರಣ ಆತನ ನಂತರದ ಯಾವುದೇ ದಾಖಲೆಗಳೂ ಬೆಳಕಿಗೆ ಬಂದಿಲ್ಲ. ಘಟ್ಟಿ ದೇವ,ರಾಜಮಲ್ಲರಂತೆಯೇ ತಿರುಕಾಳತ್ತಿ ದೇವನು ನೆಲ್ಲೂರು ಮತ್ತಿತರ ಪ್ರಾಂತ್ಯಗಳ ಆಡಳಿತವನ್ನು ನೋಡಿ ಕೊಳ್ಳುತ್ತ ಹಳೆಯ ತೊಂಡಮಂಡಳದ ದಕ್ಷಿಣ ಭಾಗವನ್ನು ವೀರ ನರಸಿಂಗ ದೇವ ಯಾದವರಾಯನು ಸ್ವತಂತ್ರವಾಗಿ ಪಾಲಿಸಲು ಬಿಟ್ಟಿದ್ದಿರಬೇಕು.)

86 ನೆಯ ಶಾಸನವು ಯಾದವರಾಯ ನಾಚ್ಚಿಯು ಗೋವಿಂದರಾಜ ಪೆರುಮಾಳ್‌ಗೆ ಆನಿ ಮಾಸದ ಉತ್ಸವವನ್ನು ಏರ್ಪಡಿಸಿ, ಅದರಲ್ಲಿ ಆಕೆ ತಾನು ಗೋವಿಂದರಾಜನಿಗೆಂದು ಮಾಡಿಸಿ ನೀಡಿದ ನಾಲ್ಕು ಮುಖದ ರಥದ ಕಲಶವನ್ನು ನಿರ್ಮಿಸಲೆಂದೂ, ಮಿಕ್ಕ ವೆಚ್ಚಗಳನ್ನು ಭರಿಸಲೆಂದು, ಪೈಂಡಿಪ್ಪಲ್ಲಿ ಗ್ರಾಮದಲ್ಲಿ ಅರ್ಧಭಾಗವನ್ನು - ಈ ಮುನ್ನವೇ ತನ್ನ ಪತಿಯಾದ ವೀರ ನರಸಿಂಗದೇವ ಯಾದವರಾಯನ ಆಳ್ವಿಕೆಯ 30 ನೇ ವರ್ಷದಲ್ಲಿ ತಿರುವೆಂಕಟ ಮುಡೈಯಾನನ ಶ್ರೀ ಭಂಡಾರಕ್ಕೆ ನೀಡಿದ್ದರಿಂದಾಗಿ ಮಿಕ್ಕಿದ್ದ - ಅರ್ಧಗ್ರಾಮವನ್ನು ಈಗ (ಕ್ರಿ.ಶ. 1235) ನೀಡಿದ ಬಗ್ಗೆ ತಿಳಿಸುವುದು.

88 ನೆಯ ಶಾಸನವು ತನ್ನ ಆಡಳಿತದ ನಲವತ್ತನೆಯ ವರ್ಷದಲ್ಲಿ ವೀರನರಸಿಂಗ ದೇವಯಾದವರಾಯನು (ಕ್ರಿ.ಶ. 1245) ಶ್ರೀ ವೆಂಕಟೇಶ್ವರ ಸ್ವಾಮಿಯ ಆಲಯದ ಸ್ಥಾನತ್ತಾರರಿಗೆ, ಆಲಯದ ಗರ್ಭಗುಡಿಯ ಜೀರ್ಣೋದ್ಧಾರ ಮಾಡಿಸಲು ಹೊರಟಿದ್ದ ದೇಶಾಂತರಿ ತಿರುಪುಳ್ಳಾಣಿ ದಾಸರಿಗೆ ಕೆಲಸ ಕೈಗೆತ್ತಿಕೊಳ್ಳುವ ಮೊದಲು ಗರ್ಭಗುಡಿಯ ಹೊರಗೋಡೆಗಳ ಮೇಲೆ ಕೆತ್ತಲ್ಪಟ್ಟಿದ್ದಂತಹ ಶಾಸನಗಳು ನಕಲು ಮಾಡಿಕೊಂಡು ಉತ್ತರದ ಗೋಡೆಯಲ್ಲಿ ಪುನಃ ಕೆತ್ತಬೇಕೆಂದು ನಿರ್ದೇಶನ ನೀಡಲು ಆಜ್ಞೆ ಮಾಡಿದಂತೆ ತಿಳಿಸುವುದು.ರಾಜಾಜ್ಞೆಯು ತಮಿಳಿನ ಅಲ್ಪಸಿ ತಿಂಗಳಿನಲ್ಲಿ ಹೊರಬಿದ್ದರೆ ಅದೇ ರಾಜನ ಆಡಳಿತದ ನಲ್ವತ್ತನೆಯ ವರ್ಷದ ಚಿತ್ತರೈ ತಿಂಗಳಿನಲ್ಲಿ ಕೆಲಸ ಪೂರ್ತಿಯಾಯಿತು.ಎಂದರೆ ಇಡೀ ಕೆಲಸವು ಆರುತಿಂಗಳ ಕಾಲ ಹಿಡಿಯಿತು. ರಾಜಾಜ್ಞೆಯಂತೆ ನಾಲ್ಕು ಶಾಸನಗಳು 8,9 14,19, ಈ ಶಾಸನಗಳು ಪುನರ್ಲಿಖಿತವಾಗಿವೆ.

89 ನೇ ಶಾಸನವು ತಿರುಪತಿಯ ಗೋವಿಂದರಾಜ ಸ್ವಾಮಿ ಆಲಯದಲ್ಲಿ ಉಪಲಬ್ಧವಾಗಿದ್ದು, ವೀರನರಸಿಂಗ ದೇವ ಯಾದವರಾಯನ ಆಡಳಿತದ ಐವತ್ತನೆಯ ವರ್ಷದ್ದಾಗಿದ್ದು, ಅಲ್ಲಿರುವ ವೈಷ್ಣವ ಆಚಾರ್ಯ ಭಗವದ್ರಾಮಾನುಜರಿಗೆ ಈ ಸಂವತ್ಸರದಿಂದ ಶ್ರೀ ವೈಷ್ಣವರು ದೀಪವನ್ನೂ, ಪೂಜೆಗಾಗಿ ಪುಷ್ಪಗಳನ್ನೂ ನೀಡುವರೆಂದು ತಿಳಿಸುವುದು. ಕ್ರಿ.ಶ. 1248 -49ರ ಸೌಮ್ಯ ಸಂವತ್ಸರದಲ್ಲಿ (79-ಡಿ) ಪ್ರಾಯಶಃ ಪ್ರತಿಷ್ಠಾಪಿತ ವಾದ ಈ ವಿಗ್ರಹಕ್ಕೆ ಆರುವರ್ಷದ ನಂತರ ಕ್ರಿ.ಶ.1255 ರಲ್ಲಿ ಪೂಜೆಗೆ ಹೂಗಳನ್ನೂ,ದೀಪವನ್ನೂ ಏರ್ಪಾಡು ಮಾಡಲಾಯಿತೆಂದು ಹೇಳಬೇಕು.

90 ನೇ ಶಾಸನವು ವೀರ ನರಸಿಂಗ ದೇವ ಯಾದವ ರಾಯನ ಆಡಳಿತದ ಐವತೋತಂದನೆಯ ವರ್ಷದ್ದು. (ಕ್ರಿ.ಶ. 1256) ತಿರುಪತಿಯ ಶ್ರೀ ವೈಷ್ಣವರು ಇದೇ ವರ್ಷ ಆಡಿ ಮಾಸದಲ್ಲಿ ಯಾದವ ನಾರಾಯಣನ ಹೆಸರಿನಲ್ಲಿ ಒಂದು ಪುಷ್ಪವನವನ್ನು ಬೆಳೆಸುವುದೂ,ಗೋವಿಂದರಾಜಸ್ವಾಮಿಗೆ ಸೇರಿದ ಪೆರಿಯ ಮಾಂಬಟ್ಟು ಗ್ರಾಮದಲ್ಲಿ, ತಿರುಪತಿಯ ದೊಡ್ಡ ಕೆರೆಯ ನೀರನ್ನು ಬಳಸಿಕೊಳ್ಳುವಂತೆ ಒಂದು ಕೊಳವನ್ನು ನಿರ್ಮಿಸಿ ತಿರುಮಲೆಯ ವೆಂಕಟೇಶ್ವರ ಸ್ವಾಮಿಯ ಪೂಜೆಗೆಂದು ಕೆಂಪು ಕಮಲಗಳನ್ನು ಬೆಳೆಯಲಾಗುವುದೆಂದೂ ತಿಳಿಸುತ್ತದೆ.

91 ನೆಯ ಶಾಸನವು ಸಂಸ್ಕೃತ ಭಾಷೆಯ ಶ್ಲೋಕಗಳಿಂದ ಕೂಡಿದ್ದು ವೀರನರಸಿಂಹ ದೇವನು (ಯಾದವರಾಯ) ತನ್ನ ಶತ್ರುಗಳನ್ನು ಗೆದ್ದು, ಚಕ್ರವರ್ತಿ ಚಿಹ್ನೆಗಳಾದ ಹಾರ, ಗಜ, ತುರಗ ಶ್ವೇತ ಛತ್ರವೇ ಮುಂತಾದವುಗಳನ್ನು ಹೊಂದಿ ತನ್ನ ತೂಕದ ಚಿನ್ನವನ್ನು ವೆಂಕಟೇಶ್ವರ ಸ್ವಾಮಿ ಆಲಯಕ್ಕೆ ನೀಡಿ ವೆಂಕಟಗಿರಿಯನ್ನು ಸುರಗಿರಿಯ (ಮೇರು ಪರ್ವತ) ಸಮಾನ ವಾಗುವಂತೆ ಮಾಡಿದ ಎನ್ನುವುದು.

93 ನೆಯ ಶಾಸನವು ವೀರನರಸಿಂಗ ದೇವಯಾದವ ರಾಯನ ಆಡಳಿತ ಕಾಲದಲ್ಲಿ ನೆಲ್ಲೂರಿನ ದೇವಪ್ಪೆರುಮಾಳನು ದೇವರ ಮುಂದೆ ಹಚ್ಚಿ ಇಡಲು ಒಂದು ದೀಪವನ್ನು ಏರ್ಪಡಿಸಲು ಬೇಕಾದ ಹಸುಗಳನ್ನೂ ಒಂದು ಗೂಳಿಯನ್ನೂ ನೀಡಿದ ನೆಂಬುದನ್ನು ತಿಳಿಸುವುದು.

- ಸಶೇಷ



# ನಾಗರ ಪಂಚಮಿ ತನ್ನಿಮಿತ್ತ ಸಕಾಲಿಕ ಬರಹ

- ಶ್ರೀಮತಿ. ಕೆ.ವಿ. ಪದ್ಮಾವತಿ

ನಾಗಾರಾಧನೆ ಒಂದರ್ಥದಲ್ಲಿ ಪರಿಶುದ್ಧ ನಿಸರ್ಗಾರಾಧನೆಯೇ ಹೌದು. ಆದರೆ ಇದೇಕೆ ಇಂದಿನ ದಿನಗಳಲ್ಲಿ 'ಹೈಟೆಕ್ ಆಗಿದೆ? ನಾಗಬನಗಳೇಕೆ ನಿರ್ನಾಮವಾಗುತ್ತಿವೆ? ನಾಗಾರಾಧನೆಯ ಕೆಲವೊಂದು ಮುಖ್ಯ ಆಶಯಗಳನ್ನು ವಸ್ತುನಿಷ್ಠವಾಗಿ ಅವಲೋಕಿಸುವ ಜತೆಗೆ ಮುಗ್ಧ ಜನರಲ್ಲಿ ಸೇರಿಕೊಂಡಿರುವ ಅನಗತ್ಯ ಭೀತಿಯನ್ನು ದೂರ ಮಾಡುವ ಉದ್ದೇಶದ ವಿಶೇಷ ಬರಹ ಇದು -

ನಾಗ ಎಂದರೆ ಪ್ರಕೃತಿಗೆ ಹತ್ತಿರವಾಗಿರುವ ಪರಿಕಲ್ಪನೆ. ನಗದಿಂದ ನಾಗ. ನಗವೆಂದರೆ ಪರ್ವತ. ನಗದ ತಪ್ಪಲಿನಲ್ಲಿರುವ ನಾಗ ಎಂಬುದು ಅನ್ವಯಾನುಸಾರ ಅರ್ಥ. ಹಾವು ಎಂಬ ಅರ್ಥದಲ್ಲಿ ಮಾತ್ರವಲ್ಲ, ವಿವಿಧ ಜೀವಜಾತಿಗಳನ್ನೂ ಸಂಬೋಧಿಸಬಹುದಾದ ಪದವಿದು. ಮಹಾಭಾರತದಲ್ಲಿ ನಾಗಗಳೆಂದರೆ ಒಂದು ಜನಾಂಗ. 'ನಾಗರ' ಎಂಬುದು ಒಂದು 'ಜನಾಂಗದವರ' ಎಂಬ ಬಹುವಚನಸೂಚಕ ಪದವೆಂದು ಕೆಲವರು ವಾದಿಸಿದ್ದಿದೆ. ಹಾಗಾಗಿ, ನಾಗಪಂಚಮಿಗಿಂತ ನಾಗರ ಪಂಚಮಿಯೇ ಹೆಚ್ಚು ರೂಢಿಗತ ಪದವಾಗಿ ಬೆಳೆದುಬಂದಿರಬಹುದು. ಕರಾವಳಿಯ ಭಾಗವು ನಾಗ ಎಂಬ ಬುಡಕಟ್ಟು ವಾಸಿಗಳ ತಾಣವಾಗಿತ್ತು ಎಂಬ ಮಾತೂ ಇದೆ. ಆದರೆ, ಕರ್ನಾಟಕ ಕರಾವಳಿಯಲ್ಲಷ್ಟೇ ಅಲ್ಲ, ಜಗತ್ತಿನೆಲ್ಲೆಡೆ ಹಾವುಗಳ ಪೂಜೆಯ ವಾಡಿಕೆಯಿದೆ. ಬುಡಕಟ್ಟುಗಳ ಕಾಲದಿಂದಲೂ ನಿಸರ್ಗವನ್ನೂ ಪೂಜಿಸುವುದು ಸಂಪ್ರದಾಯವಾಗಿದೆ. ಹಾವುಗಳ ರಚನೆ, ಚಲನೆ ಎಲ್ಲವೂ ವಿಶಿಷ್ಟವಾಗಿರುವುದರಿಂದ ಜನ ಅವುಗಳನ್ನು ಕೊಂಚ ಭಯ, ವಿಸ್ಮಯಗಳಿಂದ ಕಂಡಿರಬೇಕು. ಹಾಗಾಗಿ ನಾಗಾರಾಧನೆಯ ಪರಂಪರೆ ಬೆಳೆದು ಬಂದಿರ ಬಹುದೆಂದು ಒಂದು ಊಹೆ.

ಆಫ್ರಿಕಾದಲ್ಲಿ ದಹೋಮಿ ಎಂಬ ಸ್ಥಳವಿದೆ. ಅಲ್ಲಿ ಹಾವುಗಳ ಪೂಜೆಗೆ ವಿಶೇಷ ಪ್ರಾಶಸ್ತ್ಯ. ಮೊದಲು ಹೆಬ್ಬಾವುಗಳನ್ನು ಪೂಜಿಸುತ್ತಿದ್ದ ಅಲ್ಲಿನ ಜನ ಬಳಿಕ ಸರ್ಪಗಳನ್ನು ಆರಾಧಿಸಲು ತೊಡಗಿದರು. ವಯಿದಾ ಎಂಬ ಪಟ್ಟಣದಲ್ಲಿ ಸರ್ಪ ದೇವಾಲಯವಿದೆ. ಅಲ್ಲಿ ಸರ್ಪಗಳನ್ನೂ ಕೊಲ್ಲುವುದು ಶಿಕ್ಷಾರ್ಹ ಅಪರಾಧವಾಗಿದೆ. ಈಜಿಪ್ಟ್‌ನಲ್ಲಿ ಕಾಳಿಂಗ ಸರ್ಪದ ಪೂಜೆಗೆ ವಿಶೇಷ ಮಹತ್ವವಿದೆ.

ಗ್ರೀಕ್‌ನ ಪ್ರಾಚೀನ ನಾಗರೀಕತೆಯಲ್ಲಿ ಸರ್ಪಪೂಜೆಯ ಕುರುಹುಗಳಿವೆ. ಅಲ್ಲಿ ನಿರ್ದಿಷ್ಟ ಸಮುದಾಯದ ಮಂದಿ ತಾವು ಸರೀಸೃಪಗಳ ಮುಂದಿನ ತಲೆಮಾರು ಎಂದು ಭಾವಿಸುತ್ತಾರೆ. ಹಾಗಾಗಿ, ತಮ್ಮ ಪೂರ್ವಜರಾದ ಹಾವುಗಳನ್ನು ಭಕ್ತಿಯಿಂದ ಕಾಣುತ್ತಾರೆ ಇಲ್ಲಿನ ಅನೇಕ ದೇವತೆಗಳ ಕೈಯಲ್ಲಿ ಹಾವುಗಳು ಆಯುಧಗಳಂತೆ ಇರುತ್ತವೆ. ಅಮೇರಿಕ, ಯುರೋಪುಗಳ ಜನಜೀವನ, ಪುರಾಣಗಳಲ್ಲಿ ಹಾವಿನ ಪೂಜೆಯ ಸಂಪ್ರದಾಯವಿರುವ ಕುರುಹುಗಳನ್ನು ಕಾಣಬಹುದಾಗಿದೆ.

ಭಾರತೀಯ ಮಹಾಕಥನವಾದ ಮಹಾಭಾರತದಲ್ಲಿ ನಾಗಗಳನ್ನು ಅರ್ಜುನ ದಮನಿಸಿದ ಉದಾಹರಣೆಯಿದೆ. ಸ್ವತಃ ಕೃಷ್ಣನೇ ನಾಗನೊಬ್ಬನ ಹೆಡೆಯ ಮೆಟ್ಟಿ ಕುಣಿಯಲಿಲ್ಲವೇ? ನಾಗಗಳ ಕುರಿತ ಕಥನಗಳನ್ನು ಆರ್ಯ-ದ್ರಾವಿಡ ಸಂಘರ್ಷದ ಮೂಲಕವೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದವರಿದ್ದಾರೆ. ಅಂತೂ ನಾಗಗಳೆಂದರೆ ಆಯಾ ಪ್ರದೇಶಗಳ ಮೂಲ ನಿವಾಸಿಗಳೆಂಬುದನ್ನು ಕಲ್ಪಿಸಿಕೊಳ್ಳಬಹುದಾಗಿದೆ.

ಹಾಗಾಗಿಯೇ ನಾಗಾರಾಧನೆಯ ಪ್ರದೇಶಗಳಿಗೆ ನಾಗಗಳೇ ಒಡೆಯರು. ಕಾಡುಗಳನ್ನು ಕಡಿದು ಅಲ್ಲಿ ನೆಲವನ್ನು ಸಪಾಟುಗೊಳಿಸುವುದೆಂದರೆ ಅಲ್ಲಿ ಈಗಾಗಲೇ ವಾಸಿಸುತ್ತಿದ್ದ ಸರ್ಪಗಳನ್ನು ಜೀವಿಸುತ್ತಿದ್ದ ಸಾವಿರಾರು ಜೀವಿಗಳ ನೆಲವನ್ನು ಕಸಿದುಕೊಂಡಂತೆ. ನಾಗರಪಂಚಮಿಯ ಮರುದಿನ ಎಂದಿನಂತೆ ಬುಲ್ಡೋಜರ್‌ಗಳ ಚಕ್ರಗಳು ಉರುಳಲಾರಂಭಿಸುತ್ತವೆ. ಅವುಗಳ ಕೋರೆಹಲ್ಲುಗಳಿಗೆ ಎಷ್ಟು ಬಿಲಗಳು ಜರಿದು ಬಿದ್ದಿರ

ಬಹುದು! ಎಷ್ಟು ಹುತ್ತಗಳು ಕಡೆಹಿ ಹೋಗಿರಬಹುದು! ಎಷ್ಟು ಸರೀಸೃಪಗಳ ದೇಹಗಳು ಛಿದ್ರಗೊಂಡಿರಬಹುದು!

ನಾಗರಹಾವು ಮಾತ್ರವಲ್ಲ,ಇನ್ಯಾವ ಹಾವುಗಳಿಗೂ ಸುಗಂಧಪ್ರವ್ಯದ ಪರಿಮಳವನ್ನಾಗಲಿ,ದುರ್ವಾಸನೆಯ ನ್ನಾಗಲಿ ಆಘ್ರಾಣಿಸುವ, ಇಂದ್ರೀಯವೇ ಇಲ್ಲ! ಹಾವೊಂದು ತನ್ನ ಸುತ್ತ ಮುತ್ತ ಇರುವ ಏನೊಂದನ್ನು ಗ್ರಹಿಸಬೇಕಾದರೂ,ಪತ್ತೆ ಹಚ್ಚ ಬೇಕಾದರೂ ಅದಕ್ಕೆ ತನ್ನ ಸೀಳುನಾಲಗೆಯೇ ಮುಖ್ಯಾಂಗ.

## ಹಾವುಗಳು ಮತ್ತು ನಾಗರ ಹಾವು

ನಾಗನೆಂದು ಪೂಜೆಗೊಳ್ಳುವ ಈ ನಾಗರಹಾವು ಸರೀ ಸೃಪಗಳ ಜಾತಿಗೆ ಸೇರಿದ ಪ್ರಾಣಿಯಾಗಿದೆ. ಭಾರತದಲ್ಲಿ ಸುಮಾರು 525 ಕ್ಕೂ ಹೆಚ್ಚು ಸರೀಸೃಪಗಳಿದ್ದು ಅವುಗಳಲ್ಲಿ 3 ವಿಧದ ಮೊಸಳೆ, 34 ವಿಭಿನ್ನ ಆಮೆಗಳು, 200 ಕ್ಕೂ ಹೆಚ್ಚು ಹಲ್ಲಿಗಳು ಮತ್ತು ಸುಮಾರು 280 ಜಾತಿಯ ಹಾವು ಗಳಿವೆ. ನಾಗರಹಾವು ಮತ್ತು ಕಾಳಿಂಗ ಸರ್ಪಗಳೆರಡೂ ವಿಷ ಪೂರಿತ ಹಾವುಗಳಾಗಿದ್ದು, ಅವು ಎಲಾಫಿಡೆ ಕುಟುಂಬಕ್ಕೆ ಸೇರಿವೆ. ಸಾಧಾರಣವಾಗಿ ಭಾರತದಾದ್ಯಂತ ಕಾಣುವ ನಾಗರ ಹಾವಿಗೆ 'ನಾಜ' ಎಂಬ ವೈಜ್ಞಾನಿಕ ಹೆಸರಿದೆ. ಇದನ್ನೇ ಸ್ಪೆಕ್ಟೆ ಕಲ್ಡ್ ಕೋಬ್ರ ಎನ್ನುತ್ತಾರೆ. ಇದಲ್ಲದೆ ಪೂರ್ವ ಮತ್ತು ಈಶಾನ್ಯ ಭಾರತದಲ್ಲಿ ಕಂಡು ಬರುವ ಮೋನೋಕ್ಲೆಡ್ ಕೋಬ್ರ (ನಾಜ ಕೌತಿಯ),ಅಂಡಮಾನ್ ಪ್ರದೇಶಗಳಲ್ಲಿ ಕಂಡು ಬರುವ ಅಂಡ ಮಾನ್ ಕೋಬ್ರ (ನಾಜ ಸ್ಯಾಜಿಟ್ಟಿಫೆರೆ) ಮತ್ತು ಆಗ್ನೇಯ ಭಾರತ ದಲ್ಲಿ ಕಂಡು ಬರುವ ಸೆಂಟ್ರಲ್ ಏಷಿಯನ್ ಕೋಬ್ರ (ನಾಜ ಆಕ್ಸಿಯಾನ) ಗಳನ್ನೂ ನಾಗರ ಹಾವುಗಳೆಂದು ಕರೆಯುತ್ತಾರೆ. ಈ ಎಲ್ಲ ನಾಗರ ಹಾವುಗಳು ವಿಷಯುಕ್ತವಾಗಿದ್ದು, ಇವುಗಳ ವಿಷ ಮನುಷ್ಯನ ದೇಹ ಸೇರಿದರೆ ನರ ಮಂಡಲ ಜೀವ ಕೋಶ ಗಳು ಮತ್ತು ರಕ್ತ ಹೆಪ್ಪು ಗಟ್ಟುವಿಕೆಯ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ.

## ಭಾರತೀಯರು ಮತ್ತು ಪ್ರಾಣಿಪೂಜೆ

ಸಾಧಾರಣವಾಗಿ ಭಾರತೀಯರು ಮಾಡುವ ಅನೇಕ ಪೂಜಾ ಪದ್ಧತಿಗಳನ್ನು ಸಮಾಜ ವಿಜ್ಞಾನಿಗಳು ಅನಿಮಲ್ ವರ್ಷಿಪ್, ಜೂಲಾಟ್ರಿ, ಅನಿಮಿಸಮ್ ಇತ್ಯಾದಿ ಶಬ್ಧಗಳಿಂದ ವಿವರಿಸುತ್ತಾರೆ. ಅನೇಕರು ನಾಗಪೂಜೆಯನ್ನು ಸಂತಾನಾ ಭಿವೃದ್ಧಿ ಫಲವತ್ತತೆ (ಫರ್ಟಿಲಿಟಿ) ಇತ್ಯಾದಿಗಳ ಸಂಕೇತ ಎಂದು ಗುರುತಿಸುತ್ತಾರೆ. ಇನ್ನೂ ಕೆಲವರು ಮೇಲೆ ಹೇಳಿರುವ ಅನೇಕ ಕಥೆಗಳನ್ನು ಹಿಂದೂಯಿಸಂ ತನ್ನ ಐಡಿಯಾಲಜಿಯನ್ನು ಹರಡುವ ಕ್ರಮ ಎಂದೂ ವಿವರಿಸುತ್ತಾರೆ. ಅನೇಕ ಬಾರಿ ಆಚ ರಣೆಗಳನ್ನು ಮಾಡುವ ಜನರಿಗ್ಯಾರಿಗೂ ಈ ವಿವರಣೆಗಳು ಸಮ ರ್ಪಕ ಎಂದಾಗಲಿ, ತಮ್ಮ ಅನುಭವವನ್ನು ಈ ವಿವರಣೆಗಳು ಸರಿಯಾಗಿ ವ್ಯಕ್ತಪಡಿಸುತ್ತಿವೆ ಎಂದಾಗಲಿ ಕಾಣಿಸುವುದಿಲ್ಲ. ಹಾಗೆ ನೋಡಿದರೆ ಭಾರತೀಯ ಆಚರಣೆಗಳನ್ನು ಕುರಿತು ಈ ರೀತಿಯಾಗಿ ಮಾತನಾಡುವ ಕ್ರಮವೇ ನಮ್ಮ ಚರಿತ್ರೆಯಲ್ಲಿ ಕಾಣ ಸಿಗುವುದಿಲ್ಲ.ಈ ಕಥೆಗಳು ಮೊಟ್ಟಮೊದಲು ನಮಗೆ ಸಿಗು ವುದು ಯೂರೋಪಿನ ಚಿಂತಕರ ಭಾರತದ ಕುರಿತ ವಿವರಣೆ ಗಳ ಮೂಲಕ, ಅಥವಾ ಹಿನ್ನೆಲೆಯಲ್ಲಿ ನೋಡಿದಾಗ ಮಾತ್ರ ಪ್ರಾಣಿಪಕ್ಷಿಗಳನ್ನು, ಮರಗಿಡಗಳನ್ನು ಪೂಜಿಸುವುದು ಐಡಿಯೋ ಲಾಜಿ (ಸುಳ್ಳು ದೇವರ ಪ್ರಭಾವದಿಂದ ಒಬ್ಬನು ಮಾಡ ಬಹುದಾದ ಜೀವನವೇ ದಾರಿತಪ್ಪಿದ್ದು) ಎಂದು ಗುರುತಿಸುವುದು ಕಾಣುತ್ತದೆ.

## ಫಲವಂತಿಕೆಯ ಪ್ರತೀಕ?

ನಾಗರಹಾವಿನ ಸಂತಾನೋತ್ಪತ್ತಿ ಪ್ರಕ್ರಿಯೆ, ನಿಸರ್ಗದ ಫಲವಂತಿಕೆಯ ಸಂಕೇತ.ಮಾನವರ ವಂಶೋತ್ಪತ್ತಿ, ಮೈಥುನ ಕ್ರಿಯೆಯಲ್ಲಿ ಕಂಡು ಬರುವಂಥ ಅವಸರ, ಆತಂಕ ಪ್ರವೃತ್ತಿ, ಅತೃಪ್ತಿ ಅಸಹಜ ವರ್ತನೆ ಅಥವಾ ಬಂಜೆತನದಂಥ ಯಾವ ಅಸಂಬದ್ಧ ಸಂಗತಿಗಳೂ ನಾಗರಹಾವುಗಳಲ್ಲಿ ಕಂಡು ಬರು ವುದೇ ಇಲ್ಲ.ಎಲ್ಲಾ ಪ್ರಭೇದದ ಹಾವುಗಳಲ್ಲಿಯೂ ಇದು ಹೀಗೆಯೇ ಇರುತ್ತದೆ. ಆದರೂ ಇತರೆಲ್ಲ ಹಾವುಗಳಿಗಿಂತಲೂ ನಾಗರಹಾವಿನ ವೈಶಿಷ್ಟ್ಯವೆಂದರೆ, ಅದರ ವಾಸ ಮಾನವ ವಾಸಸ್ಥಾನದೊಳಗೆಯೇ ಎಂಬುದರಿಂದ ಹಾಗೆಯೇ ಆರಾ ಧನಾ ಪದ್ಧತಿಯೊಳಗೂ ನಾಗರಹಾವು ಸೇರಲ್ಪಟ್ಟಿರುವುದ ರಿಂದ, ಈ ಹಾವಿನ ಜೀವನಕ್ರಮವನ್ನೇ ಪ್ರಾಚೀನರು ಪ್ರಮುಖ ವಾಗಿ ಗಣನೆಗೆ ತೆಗೆದುಕೊಂಡಿರಲು ಸಾಧ್ಯವಿದೆ.

ಬಹುತೇಕ ಪ್ರಭೇದದ ಹಾವುಗಳು ವರ್ಷದಲ್ಲಿ ಒಂದೇ ಒಂದು ಬಾರಿ ವಂಶೊತ್ಪತ್ತಿಯಲ್ಲಿ ಪಾಲ್ಗೊಳ್ಳುತ್ತವೆ. ಅಷ್ಟರಿಂ ದಲೇ ಸಂಗ ಸುಖದ ಸಂತೃಪ್ತಿಯನ್ನೂ ಸಮೃದ್ಧ ಸಂತಾನ ವನ್ನು ಪಡೆಯುವಂಥ ನೈಸರ್ಗಿಕ ಕ್ರಮ, ವಿಶೇಷ ಧಾರಣ ಶಕ್ತಿ ಯನ್ನು ಹಾವುಗಳಿಗೆ ಪ್ರಕೃತಿ ನೀಡಿದೆ. ಹೆಣ್ಣು ಹಾವೊಂದು, ವರ್ಷದ ನಿರ್ದಿಷ್ಟ ಋತುವಿನಲ್ಲಿ ಮೈಥುನಕ್ಕೆ ಅಣಿಯಾಗುವು ದನ್ನು ತನ್ನದೇ ಪ್ರಭೇದದ ಗಂಡು ಹಾವುಗಳಿಗೆ ಸೂಚಿಸಲು, ಗುದ ದ್ವಾರದೊಳಗಿನ ಗ್ರಂಥಿಗಳಿಂದ ವಾಸನಾ ದ್ರವ್ಯವನ್ನು ಸ್ರವಿಸುತ್ತದೆ. ಗಾಳಿಯಿಂದ ಅದನ್ನು ಗ್ರಹಿಸುವ ಅನೇಕ ಗಂಡು ಹಾವುಗಳು ಹೆಣ್ಣಿರುವಲ್ಲಿಗೆ ಬರುತ್ತವೆ. ಕಾಮೋದ್ರಿಕ್ತ ಗಂಡುಗಳ ನಡುವೆ ಹೆಣ್ಣಿಗಾಗಿ ಕೆಲವೊಮ್ಮೆ ಉಗ್ರ ಹೋರಾಟವೂ ನಡೆಯು ವುದಿದೆ.ನಾಗರಹಾವುಗಳಲ್ಲಿ ಇದನ್ನು ಹೆಚ್ಚಾಗಿ ಕಾಣ ಬಹುದು.ಈ ಸಂದರ್ಭದಲ್ಲಿ ಗಂಡುಹಾವುಗಳು ಒಂದನ್ನೊಂದು ತೀವ್ರವಾಗಿ ಘಾಸಿಗೊಳಿಸುವುದೂ ಕಬಳಿಸುವುದು ನಡೆ ಯುತ್ತದೆ. ಗೆದ್ದ ಗಂಡು ಹಮ್ಮಿನಿಂದ ಹೆಣ್ಣನ್ನು ಕೂಡುತ್ತದೆ. ಈ ಪ್ರಕ್ರಿಯೆ ಒಂದೆರಡು ತಿಂಗಳ ಕಾಲ ನಡೆದು, ಗರ್ಭಧರಿಸುವ ಹೆಣ್ಣು, ಒಂದು ದಿನ ಮೆಲ್ಲನೇ ಗಂಡುಗಳನ್ನು ತೊರೆದು ಹೋಗಿ ಬಿಡುತ್ತದೆ.ಇಲ್ಲವಾದಲ್ಲಿ ತಿಂಗಳುಗಟ್ಟಲೆ ಆಹಾರ,ನೀರು ತೊರೆದು ಮೈಥುನ ನಡೆಸುವ ಗಂಡು ಹಾವುಗಳ ಭುಗಿಲೇಳುವ ಹಸಿವೆಗೆ ಸಂಗಸುಖ ನೀಡಿದ ಹೆಣ್ಣೇ ಕೆಲವೊಮ್ಮೆ ಆಹಾರವಾಗಿ ಬಿಡು ವುದೂ ಇದೆ! ಈ ಸತ್ಯ ಹೆಣ್ಣಿಗೆ ಹುಟ್ಟರಿವಿನಿಂದಲೇ ಬಂದಿರು ತ್ತದೆ. ಹಾಗಾಗಿ ಹೆಣ್ಣು ಹಾವು ದೂರ ಹೋಗಿ ಸೂಕ್ತ ಪ್ರದೇಶ ವನ್ನು ಆಯ್ದು ಮೊಟ್ಟೆಯಿಡುತ್ತದೆ.

ಪೂರ್ಣ ಬೆಳೆದ ಹೆಣ್ಣು ಹಾವೊಂದು ಎರಡು, ಮೂರು ದಿನಗಳಲ್ಲಿ ಇಡುವ ಮೊಟ್ಟೆಗಳ ಸಂಖ್ಯೆ ಎಷ್ಟು ಗೊತ್ತೇ! 40 ರಿಂದ 50 ರಷ್ಟು! ಮತ್ತೆರಡು ತಿಂಗಳ ತಾಯಿಹಾವಿನ ಜತನದ ಕಾಪಾಡುವಿಕೆ, ಅಗತ್ಯವೆನಿಸಿದಾಗ ಸಿಗುವ ಬೆಚ್ಚನೆಯ ಕಾವಿನಿಂದ ಮೊಟ್ಟೆಗಳು ಒಡೆದು ಮರಿಗಳು ಹೊರಬರುತ್ತವೆ. ನಾಗರಹಾವಿನ ಈ ಕ್ರಿಯೆಯಲ್ಲಿ ಪ್ರಾಚೀನರು ಗಮನಿಸಿರಬಹುದಾದ ಮುಖ್ಯ ಅಂಶವೆಂದರೆ ಬಹುಶಃ 'ಆತ್ಯಧಿಕ ಸಂತಾನ ಫಲಾಪೇಕ್ಷೆಯ ಸಂಕೇತ!' ಹುಟ್ಟಿದ ಅಷ್ಟೂ ಮರಿಗಳಲ್ಲಿ ಶೇ. 90 ರಷ್ಟು ಭಕ್ಷಕ ಜೀವಿಗಳು ಹೊಟ್ಟೆಸೇರುವುದು ನಿಸರ್ಗ ನಿಯಮ. ಹುಟ್ಟುತ್ತಲೇ ಶತ್ರುಗಳೊಂದಿಗೆ ನಿರಂತರ ಹೋರಾಟದ ಫಲವಾಗಿ ಶೇ. 10 ರಷ್ಟು ಬಲಿಷ್ಟ ಮರಿಗಳು ಉಳಿದೇ ಉಳಿಯುತ್ತವೆ ಎಂಬುದು, ಈಗಿನ 'ನಾಗಕಟಾಕ್ಷ ವಿದ್ದರೆ ಸಂತಾನ ಭಾಗ್ಯ ನಿಶ್ಚಿತ' ಎಂಬ ನಂಬಿಕೆಗೆ ಇಂಬು ನೀಡುತ್ತದೆ.

ನಾಗರಹಾವುಗಳ ಇಂಥದೊಂದು ನಿಸರ್ಗದತ್ತ, ಆರೋಗ್ಯಪೂರ್ಣ,ಲೈಂಗಿಕ ಕ್ರಿಯೆಯ ಆಧಾರದಿಂದಲೇ ಮನೋವಿಜ್ಞಾನವು'ನಾಗರಹಾವು ಲೈಂಗಿಕತೆಯ ಸಂಕೇತ' ವೆಂದೂ,ಈ ಹಾವು ಕನಸಲ್ಲಿ ಕಾಣಿಸಿಕೊಂಡರೆ, ಅದು 'ಅತೃಪ್ತ ಕಾಮದ ಸೂಚನೆ' ಎಂದೂ ಹೇಳಿರಬಹುದು. ಹೀಗೆ ಸರ್ಪವಂಶಾಭಿವೃದ್ಧಿಕ್ರಿಯೆ ನಮ್ಮ ಕೆಲವು ನಂಬಿಕೆ, ಆಚರಣೆಗಳಿಗೆ ಅರ್ಥವನ್ನು ಕಲ್ಪಿಸುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದ, ಅಧ್ಯಯನಿಸಿದ ಪ್ರಾಚೀನರಿಂದಲೋ ಉತ್ತೇಜನವರಿಂದಲೋ 'ಸರ್ಪವು ಸಂತಾನದೇವತೆ' ಎಂಬ ನಂಬಿಕೆ ಪ್ರಚಲಿತಗೊಳ್ಳಲು ಕಾರಣವಾಗಿರಬಹುದು.

ನಾಗರ ಪಂಚಮಿ ಭಾರತೀಯ ಸಂಪ್ರದಾಯದಲ್ಲಿ ಆಚರಣೆಯಲ್ಲಿರುವ ಪ್ರಮುಖ ಹಬ್ಬಗಳಲ್ಲೊಂದು ಕಾಶ್ಮೀರದಿಂತದ ಕನ್ಯಾಕುಮಾರಿಯವರೆಗೆ ಅನೇಕಾನೇಕ ಜನ ಸಮುದಾಯಗಳು ಬಗೆಬಗೆಯಲ್ಲಿ ಇದನ್ನು ಅಚರಿಸುತ್ತಾರೆ. ಕೆಲವೆಡೆ ಇದು ಊರಿನ ಹಬ್ಬವಾದರೆ, ಇನ್ನು ಹಲವೆಡೆ ಕೆಲವು ಜಾತಿ ಅಥವಾ ಕುಟುಂಬಗಳಿಗೆ ಸೀಮಿತವಾದ ಆಚರಣೆಯಾಗಿ ಕಾಣಿಸುತ್ತದೆ. ಯುಗಾದಿಯ ನಂತರ ಬರುವ ಹಬ್ಬಗಳಲ್ಲಿ ಇದು ಮೊದಲನೆಯದು.ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ನಾಗದೇವತೆಯನ್ನು ಪೂಜಿಸುವ ಮೂಲಕ ನಾಗರ ಪಂಚಮಿಯನ್ನು ಆಚರಿಸುತ್ತಾರೆಂದು ಸರಳವಾಗಿ ಹೇಳಬಹುದು. ಕನ್ನಡ ಜನಪದರು 'ನಾಗರಪಂಚಮಿ ನಾಡಿಗೆ ದೊಡ್ಡದು' ಎಂದು ಹಾಡಿದ್ದಾರೆ. ಸಾಧಾರಣವಾಗಿ ಪೂಜೆಯ ಅಂಗವಾಗಿ ದೇವಸ್ಥಾನ ಹಾಗೂ ಹುತ್ತಗಳಿಗೆ ಭೇಟಿ ನೀಡಿ ಎಲ್ಲ ಕೆಡಕುಗಳಿಂದ ತಮ್ಮನ್ನು ರಕ್ಷಿಸೆಂದು ನಾಗರ ಹಾವನ್ನು ಬೇಡಿಕೊಂಡು ಜನರು ಹಾಲು ಮತ್ತು ಬೆಳ್ಳಿ ಆಭರಣಗಳನ್ನು ಅಥವಾ ತಮ್ಮ ಶಕ್ತಿಯಾನುಸಾರ ಹರಕೆ, ಕಾಣಿಕೆ ಇತ್ಯಾದಿಗಳನ್ನು ಸಮರ್ಪಿಸುತ್ತಾರೆ.ಈ ಹಬ್ಬವು ಅಣ್ಣ-ತಂಗಿ ಹಬ್ಬವೆಂಬ ಪ್ರತೀತಿ ಇದ್ದು,ಅಣ್ಣ ತಂಗಿಯರ ನಾಗರ ಪಂಚಮಿಯಂದು ತನಿ ಎರೆಯುವುದು ಅತ್ಯಂತ ಪ್ರಮುಖ ಆಚರಣೆಯಾಗಿದೆ. ನಾಗ ಪೂಜೆಯಿಂದ ಸಂತಾನ, ಸಂಪತ್ತು ವೃದ್ಧಿಸುತ್ತದೆಂಬ ನಂಬಿಕೆ, ನಾಗರ ಹಾವನ್ನು ದೇವರ ಪ್ರತೀಕವೆಂದೂ ಹಾವುಗಳ ರಾಜನೆಂದೂ ಭಾವಿಸಲಾಗಿದೆ. ಹೀಗಾಗಿ ಇದಕ್ಕೆ ನಾಗರಾಜ, ನಾಗಪ್ಪ ಎಂದೂ ಕರೆಯುತ್ತಾರೆ.

ಸಾಮಾನ್ಯವಾಗಿ ನಾಗರ ಪಂಚಮಿಯ ಆಚರಣೆಗಳು ಅತ್ಯಂತ ನೇಮ, ನಿಷ್ಠೆಯಿಂದ ಕೂಡಿರುತ್ತವೆ. ಬೆಳಗ್ಗೆ ಮಂಗಳ ಸ್ನಾನದಿಂದ ಪ್ರಾರಂಭವಾಗಿ ಮಡಿ ಬಟ್ಟೆಗಳನ್ನು ತೊಟ್ಟು, ಮನೆಯಲ್ಲಿ ಹುತ್ತದ ಮಣ್ಣಿನಿಂದ ಹಾವಿನ ಆಕಾರ ಮಾಡಿ ಹಾವಿನಾಕಾರದ ರಂಗೋಲಿಯನ್ನು ಬರೆಯಲಾಗುತ್ತದೆ. ಇನ್ನು ಕೆಲವೆಡೆ ಊರ ಗಡಿಯಲ್ಲಿ ನಾಗರ ಕಲ್ಲುಗಳಿದ್ದು ಅದಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ನಾಗಪ್ಪನಿಗೆ ಹಾಲು, ನೀರಿನಿಂದ ತನಿ ಎರೆಯುತ್ತಾರೆ. ನೈವೇದಕ್ಕೆ ಚಿಗಳಿ, ತಂಬಿಟ್ಟು ಇತ್ಯಾದಿಗಳನ್ನು ಮಾಡಿ, ಪೂಜೆಯ ನಂತರ ದೇವರ ಮುಂದೆ ಬಡಹುಟ್ಟಿದವರಿಗೆ ಹಾಲು ತನಿ ಎರೆಯುತ್ತಾರೆ. ಅಣ್ಣ ಅಕ್ಕನಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆಯುತ್ತಾರೆ. ಕೆಲವಡೆ ಸಪ್ಪೆ (ಉಪ್ಪು ಬೆರಸದ) ಅಕ್ಕಿ ರೊಟ್ಟಿ ಹಾಗೂ ಇನ್ನಿತರ ತಿನಿಸುಗಳನ್ನು ನೈವೇದ್ಯ ಮಾಡಲಾಗುತ್ತದೆ.

**ಹಿನ್ನೆಲೆ..**

ಹಿಂದೊಮ್ಮೆ ನಾಗರ ಹಾವು ಕಚ್ಚಿ ಸತ್ತು ಹೋದ ಸಹೋದರರನ್ನು ಬದುಕಿಸಲು ತಂಗಿಯೋರ್ವಳು ನಾಗದೇವನನ್ನು ಪೂಜಿಸಿ ಒಲಿಸಿಕೊಂಡು ಸಹೋದರನನ್ನು ಬದುಕಿಸಿಕೊಂಡ ದಿನ ಈ ಹಬ್ಬವೆಂಬ ಕಥೆಯೊಂದಿದೆ. ಕೃಷ್ಣ ಕಾಳಿಂಗನ ಮರ್ದನ ಮಾಡಿ ಗೋಕುಲದ ಜನರಿಗೆ ಶಾಂತಿಯೊದಗಿಸಿದ ದಿನವೇ ಇದೆಂದು ಪ್ರತೀತಿಯಿದೆ. ಹಾಗೆಯೇ ಜನಮೇಜಯ ಮಹಾರಾಜನು ತನ್ನ ತಂದೆಯಾದ ಪರೀಕ್ಷಿತ ಮಹಾರಾಜನನ್ನು ಕೊಂದ ಸರ್ಪಕುಲವನ್ನು ನಾಶಮಾಡಲು ಸರ್ಪಯಜ್ಞಯನ್ನು ಮಾಡುತ್ತಿರುವಾಗ ಸರ್ಪಗಳ ಸಂಬಂಧಿಯಾದ ಆಸ್ತಿಕ ಋಷಿಯ ಕೋರಿಕೆಯನ್ನು ಮನ್ನಿಸಿ ಜನಮೇಜಯನು ಸರ್ಪ ನಾಶವನ್ನು ನಿಲ್ಲಸಿದ ದಿನವೆಂದೂ ಹೇಳಲಾಗುತ್ತದೆ. ಹೀಗೆ ದೇಶದಾದ್ಯಂತ ಪ್ರಚಲಿತವಿರುವ ನಾಗ ಪೂಜೆಯ ಸುತ್ತಲಿನ ಕಥೆಗಳು ಮುಗಿಯಲಾರದಷ್ಟಿವೆ.ಉದಾಹರಣೆಗೆ: ನಾಗ ದೇವತೆಗೆ ಸ್ಕಂದ, ಸುಬ್ರಮ್ಮಣ್ಯ, ಮುರುಗ, ಷಣ್ಮುಖ, ಕಾರ್ತಿಕೇಯ ಇತ್ಯಾದಿ ಹೆಸರುಗಳಿದ್ದು, ಪ್ರತೀ ಹೆಸರಿನ ಜತೆಗೂ ಈ ನಾಗಪಂಚಮಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಥೆಗಳಿವೆ. ಮನುಷ್ಯ ಸಂತತಿಯನ್ನು ಉಳಿಸಿ ಬೆಳೆಸುವ ದೇವತೆ ನಾಗರಾಜ ಎಂದೂ ನಾಗಕುಲವೇ ಭಾರತದ ಜನ ಸಂತತಿಯ ಮೂಲ ಎಂದೂ ಭಾವಿಸಲಾಗಿದೆ. ಈ ಕಾರಣದಿಂದಲೂ ನಾಗಪ್ಪನಿಗೆ ಪೂಜೆಸಲ್ಲುತ್ತದೆ.


# ಚಾರ್ ಧಾಮ್ ಯಾತ್ರೆ

- ಮೂಲ : ವಿದ್ವಾನ್ : ಕೆ.ಸಿ. ನಾಯುಡು

- ಅನುವಾದ ಶ್ರೀಮತಿ. ಪಿ. ಪದ್ಮಜ

ಚಾರ್ ಎಂದರೆ ನಾಲ್ಕು ಎಂದರ್ಥ.ಧಾಮ್ ಎಂದರೆ ಪುಣ್ಯ ಪ್ರದೇಶವೆಂದು ಅರ್ಥ. ಇತ್ತೀಚಿನ ದಿನಗಳಲ್ಲಿ ಭಾರತ ದೇಶದಲ್ಲಿ ಈ ಚಾರ್‌ಧಾಮ್ ಎನ್ನುವುದು ಬಹಳ ಪ್ರಸಿದ್ಧಿ ಗೊಂಡಿದೆ. ಹಜ್ ಯಾತ್ರೆಗೆ ಹೋಗುವವರಿಗೆ ಸರ್ಕಾರ ರಿಯಾಯಿತಿಗಳನ್ನು ನೀಡುವುದು, ಅಮರನಾಥ್ ಯಾತ್ರೆಯ ಮೇಲೆ ಉಗ್ರರ ಗುರಿ, ಮೊದಲಾದ ಕಾರಣಗಳಿಂದ ಹಿಂದೂಗಳಲ್ಲಿ ಈ ಯಾತ್ರೆಗಳ ಮೇಲೆ ಆಸಕ್ತಿ ಹೆಚ್ಚಾಗಿದೆ. ಎಲ್ಲೋ ಪುರಾಣಗಳಲ್ಲಿ ಓದುವ ಈ ಪುಣ್ಯಕ್ಷೇತ್ರಗಳನ್ನು ಪ್ರಸ್ತುತ ಪ್ರತೀ ಸಾಮಾನ್ಯನೂ ಹೋಗಿ ನೋಡಬಲ್ಲವನಾಗಿದ್ದಾನೆ. ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರೀನಾಥ್ ಎಂಬ ನಾಲ್ಕು ಪ್ರದೇಶಗಳೇ ಈ ಚಾರ್‌ಧಾಮ್.

ಭಾರತದೇಶದಲ್ಲಿ ಉತ್ತರಾಂಚಲ್ ರಾಜ್ಯವನ್ನು ವೇದ ಭೂಮಿ,ಸ್ವರ್ಗಭೂಮಿ, ಯೋಗಭೂಮಿ, ಎಂದು ಕರೆಯುತ್ತಾರೆ. ಮನುಜರು ಸಂಸಾರ ಸಾಗರದಿಂದ ಮುಕ್ತಿಯನ್ನು ಪಡೆಯುವುದಕ್ಕೆ ಋಷಿಗಳು,ಮುನಿಗಳು ಸಾಧುಗಳು ಏಕಾಗ್ರತೆಗಾಗಿ ಇಲ್ಲಿಗೆ ಹೋಗುತ್ತಾರೆಂದು ಪ್ರತೀತಿ. ಬ್ರಹ್ಮ, ವಿಷ್ಣು, ಮಹೇಶ್ವರರು ತಮ್ಮ ದೈವಶಕ್ತಿಯನ್ನು ಧ್ಯಾನದ ಮೂಲಕ ತಪಸ್ಸಿನ ಮೂಲಕ ಇಮ್ಮಡಿಗೊಳಿಸಿಕೊಳ್ಳವುದಕ್ಕೆ ಈ ಪ್ರದೇಶಗಳೇ ತಮಗೆ ಅನುಕೂಲವಾದ ಸ್ಥಳವೆಂದು ಭಾವಿಸಿದರು. ಮೇಲಿನ ಪುಣ್ಯಧಾಮಗಳನ್ನು ನೋಡಬೇಕೆಂದರೆ ಹರಿದ್ವಾರದ ಮೂಲಕವೇ ಪ್ರಯಾಣಿಸಬೇಕು.ದೆಹಲಿಯಿಂದ ಹರಿದ್ವಾರ 230 ಕಿ.ಮೀ ದೂರದಲ್ಲಿದೆ.



ತಿರುಪತಿಯ ಹರೇರಾಮ ಹರೇ ಕೃಷ್ಣ ಮಂದಿರದವರು ಏರ್ಪಾಟು ಮಾಡಿರುವ ಯಾತ್ರೆಯಲ್ಲಿ ಸುಮಾರು 116 ಜನರಲ್ಲಿ ನಾನೂ ಒಬ್ಬನಾಗಿದ್ದೆ.

ಯಮುನೋತ್ರಿಗೆ ಹೋಗಬೇಕೆಂದುಕೊಳ್ಳುವರು. ಹರಿದ್ವಾರದಿಂದ ಬಾರ್‌ಕೋಟ್‌ನ ಮೂಲಕ ಜಾನಕೀ ಚೆಟ್ಟಿಯ ವರೆಗೂ 256 ಕಿ.ಮೀ ವಾಹನದಲ್ಲಿ ಪ್ರಯಾಣಿಸಬೇಕು. ಅಲ್ಲಿಂದ 7 ಕಿ.ಮೀ. ಕಾಲುನಡಿಗೆಯಲ್ಲಿ ಅಥವಾ ಕುದುರೆಗಳ ಮೇಲೆ ಅಥವಾ ಡೋಲಿಯಲ್ಲಿ ಪ್ರಯಾಣಿಸಬೇಕು. ಆ ದಾರಿ ಇರುಕಾಗಿದ್ದು ನೇರವಾಗಿರುವ ಮೆಟ್ಟಿಲುಗಳಿಂದ ಕೂಡಿರುತ್ತದೆ. ಇದೇ ಯಮುನಾ ನದಿಯ ಜನ್ಮಸ್ಥಳ. ಹಿಮಾಲಯದಿಂದ ಅತೀ ಶೀತಲವಾದ ಪ್ರವಾಹ ಹರಿಯುತ್ತಿರುತ್ತದೆ. ಯಮ, ಯಮುನೆಯರ ಒಂದು ಚಿಕ್ಕ ಆಲಯವಿದೆ. ಇಲ್ಲಿ ಬಿಸಿನೀರಿನ ಕುಂಡವೊಂದಿದೆ.

ಒಂದು ಬಟ್ಟೆಯಲ್ಲಿ ಸ್ವಲ್ಪ ಅಕ್ಕಿಯನ್ನು ಮೂಟ್ಟೆಕಟ್ಟಿ ಆ ನೀರಿನಲ್ಲಿ ಹಾಕಿ ತೆಗೆದರೆ ಅದು ಅನ್ನವಾಗಿ ಮಾರ್ಪಟ್ಟಿರುತ್ತದೆ. ಅದನ್ನು ಭಕ್ತರು ಪ್ರಸಾದವನ್ನಾಗಿ ಸ್ವೀಕರಿಸುತ್ತಾರೆ.ಅದರ ಪಕ್ಕದಲ್ಲೇ ಬಿಸಿ ನೀರು, ತಣ್ಣೀರು ಸೇರಿದ ಕುಂಡವಿದೆ. ಅದರಲ್ಲಿ ಸ್ನಾನ ಮಾಡಿ ಯಮುನಾದೇವಿಯನ್ನು ದರ್ಶಿಸಿ ತಿರುಗು ಪ್ರಯಾಣ ಮಾಡುತ್ತಾರೆ. ಯಮುನೋತ್ರಿ 10500 ಅಡಿಗಳ ಎತ್ತರದಲ್ಲಿದೆ.ಯಮುನಾ ನದಿ 1328 ಕಿ.ಮೀ. ಪ್ರಯಾಣಿಸಿ ಅಲಹಾಬಾದ್ (ಪ್ರಯಾಗ) ಬಳಿ ಗಂಗಾನದಿಯಲ್ಲಿ ಸಂಗಮವಾಗುತ್ತದೆ.

ಬಾರ್‌ಕೋಟ್‌ನಿಂದ ಉತ್ತರ ಕಾಶಿಯ ಮೂಲಕ ಗಂಗೋತ್ರಿಗೆ 200 ಕಿ.ಮೀ ಪ್ರಯಾಣಿಸಬೇಕು. ಉತ್ತರ ಕಾಶಿಯಲ್ಲಿ ಶಿವಲಿಂಗ ನೇರವಾಗಿಲ್ಲ. ಸ್ವಲ್ಪ ಪಕ್ಕಕ್ಕೆ ವಾಲಿರುತ್ತದೆ. ಉತ್ತರಕಾಶಿ ಅಂದರೆ ಕಲಿಯುಗದ ಅರ್ಧಭಾಗದ ನಂತರ ಅಂದರೆ ಉತ್ತರ ಭಾಗದಲ್ಲಿ ಇದೇ ನಿಜವಾದ ಕಾಶಿಯಾಗಿ ಪ್ರಸಿದ್ಧಿ ಪಡೆಯುತ್ತದೆಂದು ಪುರಾಣ ಹೇಳುತ್ತದೆ. ಈಗಿರುವ ಕಾಶಿ ಕಲಿಯುಗದ ಅರ್ಧಭಾಗದವರೆಗೇ ಇರುತ್ತದೆಂದು ಹೇಳುತ್ತಾರೆ. ಈ ಶಿವಲಿಂಗಕ್ಕೆ ಎದಿರಿನಲ್ಲಿ ಸುಮಾರು 15 ಅಡಿಗಳ ಉದ್ಧವಿರುವ ಭಾರೀ ತ್ರಿಶೂಲ ಪ್ರತಿಷ್ಠಾಪಿಸಲ್ಪಟ್ಟಿದೆ. ಪಾರ್ವತಿ ದೇವಿ ದುರ್ಗಾವತಾರ ತಾಳಿದಾಗ ಈ ತ್ರಿಶೂಲದಿಂದಲೇ ಮಹಿಷಾಸುರ ಮೊದಲಾದ ರಾಕ್ಷಸರನ್ನು ಸಂಹರಿಸಿದಳಂತೆ. ಅಂತಹಾ

ಶಕ್ತಿವಂತವಾದ ತ್ರಿಶೂಲದ ದರ್ಶನ ಪುಣ್ಯಫಲವನ್ನು ನೀಡು ತ್ತದೆ.

ಅಲ್ಲಿಂದ ಗಂಗೋತ್ರಿಗೆ ಪ್ರಯಾಣ. ಅಂದರೆ ಭಗೀರಥನು ಗಂಗೆಗಾಗಿ ತಪಸ್ಸನ್ನು ಆಚರಿಸಿದ ಸ್ಥಳ. ಇಲ್ಲಿ ಪ್ರವಾಹದಲ್ಲಿನ ನೀರು ಧವಳಕಾಂತಿಯಿಂದ ಹೊಳೆಯುತ್ತಾ ಮಂಜಿಗಿಂತಲೂ ತಂಪಾಗಿರುತ್ತದೆ. ಇಲ್ಲಿ ಗಂಗಾ ನದಿಯನ್ನು ಭಾಗೀರಥೀ ಎಂದು ಕರೆಯುತ್ತಾರೆ. ಆ ತಂಪಾದ ನೀರಿನಲ್ಲಿ ಭಕ್ತರು ಸ್ನಾನ ಮಾಡಿ ಭಗೀರಥ ಮತ್ತು ಗಂಗೆಯನ್ನು ದರ್ಶಿಸಿಕೊಳ್ಳುತ್ತಾರೆ. ಇಲ್ಲಿಂದ ಗೋಮುಖ (ಗಂಗೆಯು ಉದ್ಭವಿಸಿದ ಸ್ಥಳ) 18 ಕಿ.ಮೀ. ದೂರ ದಲ್ಲಿದೆ. ಅಲ್ಲಿಗೆ ಕಾಲ್ನಡಿಗೆಯಲ್ಲಿ ಹೋಗಿ ಮರುದಿನ ಬರ ಬೇಕಾ ಗುತ್ತದೆ. ಸಾಹಸಿಗಳು ವಾತಾವರಣ ಅನುಕೂಲಿಸಿದಾಗ ಮಾತ್ರಾ ಹೋಗಿ ಬರುತ್ತಾರೆ. ಗಂಗೋತ್ರಿ 10,300 ಅಡಿಗಳ ಎತ್ತರ ದಲ್ಲಿದೆ. ಗಂಗಾನದಿ 2,525 ಕಿ.ಮೀ. ಪ್ರವಹಿಸಿ ಬಂಗಾಳ ಕೊಲ್ಲಿ ಯೊಂದಿಗೆ ಸಂಗಮವಾಗುತ್ತದೆ.

ಗಂಗೋತ್ರಿಯಿಂದ ಗುಪ್ತಕಾಶಿಯ ಮೂಲಕ ಸೋಮ ಪ್ರಯಾಗದವರೆಗೂ ವಾಹನಗಳು ಓಡಾಡುತ್ತವೆ. ಸೋಮ ಪ್ರಯಾಗದಿಂದ ಗೌರಿಕುಂಡ್‌ದವರೆಗೂ ವಿವಿಧ ರೀತಿಯ ಪ್ರಯಾಣ ಸಾಗುತ್ತದೆ. ಅಲ್ಲಿಂದ ಕುದುರೆ ಅಥವಾ ಕಾಲ್ನಡಿಗೆ ಯಲ್ಲಿ 20 ಕಿ.ಮೀ. ಪ್ರಯಾಣಿಸಿ ಕೇದಾರನಾಥ ಸೇರಬೇಕು. ಡೋಲಿಗಳು ಕಡಿಮೆ ಸಂಖ್ಯೆಯಲ್ಲಿದ್ದೂ ಅವುಗಳನ್ನು ಹಿಂದಿನ ದಿನವೇ ಕಾಯ್ದಿರಿಸಿಕೊಳ್ಳಬೇಕು. ಈ ದಾರಿ ಸ್ವಲ್ಪ ವಿಶಾಲ ವಾಗಿದ್ದರೂ ಕೆಲವು ಕಡೆಗಳಲ್ಲಿ ಮೆಟ್ಟಿಲುಗಳು ನೇರವಾಗಿದ್ದು ಬಾರಿಕೇಡ್ ಸಹಾ ಇರುವುದಿಲ್ಲ. ಮಂದಾಕಿನೀ ನದಿಯ ಸೊಬ ಗನ್ನು ನೋಡುತ್ತಾ ಪ್ರಯಾಣಿಸಬೇಕು. ಜ್ಯೋತಿರ್ಲಿಂಗಗಳಲ್ಲಿ ಒಂದಾದ ಕೇದಾರನಾಥನ ದರ್ಶನದ ಸಮಯ ಬೆಳಗ್ಗೆ 5 ರಿಂದ ರಾತ್ರಿ 10 ಗಂಟೆಯವರೆಗೂ ಇರುತ್ತದೆ. ಕೇದಾರನಾಥ್ 11750 ಅಡಿಗಳ ಎತ್ತರದಲ್ಲಿದೆ. ಈ ಪ್ರಾಂತ್ಯ ಭಾರತ ಸೈನ್ಯದ ಪಹರೆಯಲ್ಲಿದೆ.

ಈ ಗುಡಿಯನ್ನು ಪಾಂಡವರು ನಿರ್ಮಿಸಿದರೆಂದು ಹೇಳು ತ್ತಾರೆ. ಇದನ್ನು ಆದಿಶಂಕರಾಚಾರ್ಯರು ಪ್ರಚಾರಕ್ಕೆ ತಂದ ರಲ್ಲದೇ ಗರ್ಭಾಲಯದ ಎದಿರು ಒಂದು ಮಂದಿರವನ್ನು ನಿರ್ಮಿಸಿ ಅದರಲ್ಲಿ ಪಾಂಡವರ ವಿಗ್ರಹಗಳನ್ನು ಪ್ರತಿಷ್ಠಾ ಪಿಸಿದ್ದಾರೆ. ಈ ಮಂದಿರವು ದಕ್ಷಿಣ ಭಾರತ ದೇವಾಲಯ ಗಳಯ ಶೈಲಿಯಲ್ಲಿ ಹೋಲುತ್ತದೆ. ಜೊತೆಗೆ ದೇವಾಲಯದ ನಿರ್ಮಾಣಕ್ಕೆ ವಿನಿಯೋಗಿಸಿರುವ ಶಿಲೆಗಳನ್ನೂ ದಕ್ಷಿಣ ಭಾರತ ದಿಂದಲೇ ತಂದಿರುವಂತೆ ತಿಳಿದುಬರುತ್ತದೆ. ಗುಪ್ತಕಾಶಿಯಿಂದ ಕೇದಾರನಾಥ್‌ಗೆ ಹೆಲಿಕಾಪ್ಟರ್ ಸೌಕರ್ಯವೂ ಇದೆ.

ಸೋಮಪ್ರಯಾಗದಿಂದ ಬದರೀನಾಥ್‌ಗೆ 160 ಕಿ.ಮೀ ದೂರವಿದೆ. ಬದರೀನಾಥ್‌ಗೆ ಹೋಗುವ ದಾರಿಯಲ್ಲಿ ಹನು ಮಾನ್ ಚಟ್ಟಿ ಇದೆ. ಭೀಮನಿಗೆ ಹನುಮಂತನು ದರ್ಶನ ನೀಡಿದ ಸ್ಥಲವಿದೇ ಎಂದು ಹೇಳುತ್ತಾರೆ. ಬದರೀನಾಥ್‌ನಲ್ಲಿ ಸರಸ್ವತಿ ನದಿ ಹುಟ್ಟುವುದು, ವ್ಯಾಸ ಮಹರ್ಷಿಗುಹೆ, ಪಾಂಡವರ ಸ್ವರ್ಗಾ ರೋಹಣೆಗಾಗಿ ಹೋದ ದಾರಿಯನ್ನು ನೋಡಬಹುದು. ಇಲ್ಲಿ



ರುವ 'ಮಣಾ' ಎಂಬುವುದು ಭಾರತದೇಶದ ಕೊನೆಯ ಸರಿ ಹದ್ದು ಗ್ರಾಮ. ನರ, ನಾರಾಯಣರು ತಪಸ್ಸನ್ನು ಆಚರಿಸಿದ ಸ್ಥಳವೇ ಬದರೀನಾಥ್. ಬದರೀನಾಥ್ 10350 ಅಡಿಗಳ ಎತ್ತರದಲ್ಲಿದೆ. ಈ ದೇವಾಲಯದ ಮುಂದೆ ಇರುವ ಅಲಕಾನದಿ ಯಲ್ಲಿ ಅಥವಾ ಬಿಸಿನೀರಿನ ಕುಂಡದಲ್ಲಿ ಸ್ನಾನವನ್ನು ಆಚರಿಸಿ ಬದರೀನಾಥನನ್ನು ಮತ್ತು ಅಲ್ಲಿರುವ ಅಖಂಡ ಜ್ಯೋತಿಯನ್ನು ದರ್ಶಿಸಬೇಕು.

ಬದರೀನಾಥ್‌ನಲ್ಲಿನ ಬ್ರಹ್ಮಕಪಾಲದಲ್ಲಿ ಮಾಡುವ ಸ್ನಾನ, ದಾನ, ಹೋಮ ಯಾಗಗಳು ಅತ್ಯಂತ ಶುಭ ಫಲವನ್ನು ನೀಡುತ್ತವೆ. ಬ್ರಹ್ಮ ಕಪಾಲದಲ್ಲಿ ಧ್ಯಾನಪೂರ್ವಕವಾಗಿ ನೀಡುವ ಪಿಂಡಪ್ರಧಾನ, ದಾನ ಮಾಡಿದವರ ಪಿತೃದೇವತೆಗಳು ಪರಮ ಸದ್ಗತಿಯನ್ನು ಪಡೆಯುತ್ತಾರೆಂದು ಪ್ರತೀತಿ. ಪ್ರತೀ ವ್ಯಕ್ತಿಯ ಪಿತೃಗಳು ತಮ್ಮ ವಂಶಜನನ್ನು ಬದರಿಯಲ್ಲಾಗಲೀ, ಬ್ರಹ್ಮ ಕಪಾ ಲದಲ್ಲಾಗಲೀ ನೋಡಲು ಬಯಸುತ್ತಾರೆ. ಅಲ್ಲಿ ಶ್ರದ್ಧೆಯಿಂದ ಅಶ್ರದ್ಧೆಯಿಂದಾಗಲೀ, ಭಕ್ತಿಯಿಂದಾಗಲೀ ಅಭಕ್ತಿಯಿಂದಾಗಲೀ ಪಿಂಡ ಪ್ರಧಾನ ಮಾಡಿ ತರ್ಪಣವನ್ನು ಬಿಟ್ಟರೆ ಆತನು ನರಕ ದಲ್ಲಿರುವ ಪಿತೃಗಳನ್ನು ಉದ್ಧರಿಸಿದವನಾಗುತ್ತಾನೆ. ಪಿತೃಗಳನ್ನು ಉದ್ಧರಿಸುವುದಕ್ಕೆ ಬ್ರಹ್ಮಕ ಪಾಲದಂತಹಾ ಸರ್ವೋತ್ತಮವಾದ ತೀರ್ಥ ಮತ್ತೊಂದಿಲ್ಲವೆಂದು ಶಿವನು ಸ್ಕಂಧ ಪುರಾಣದಲ್ಲಿ ತಿಳಿ ಸಿದ್ದಾನೆ.

ಬದರಿನಾಥ್‌ನಿಂದ ಹರಿದ್ವಾರ್‌ಗೆ 220 ಕಿ.ಮೀ. ದೂರವಿದೆ.

ನಾವು ಮನೆಯಿಂದ ಹೊರಡುವಾಗ ಇದನ್ನು ತೀರ್ಥಯಾತ್ರೆಯೆಂದು ಭಾವಿಸುತ್ತೇವೆ. ಆದರೆ ನಾವು ಪುನಃ ಮನೆ ಸೇರುವಷ್ಟರಲ್ಲಿ ಇದು ಸಾಹಸ ಯಾತ್ರೆಯಾಗಿರುತ್ತದೆ. ಪ್ರತೀದಾರಿಯು ಒಂದು ಕಡೆ ಎತ್ತರವಾದ ಬೆಟ್ಟಗಳಿಂದ ಮತ್ತೊಂದು ಕಡೆ ತಲೆಸುತ್ತಿ ಬರುವಂತಹಾ ಆಳವಾದ ಪ್ರಪಾತ ಗಳಿಂದ ಕೂಡಿರುತ್ತದೆ. ಚಾರ್‌ಧಾಮ್ ಯಾತ್ರೆ ಮಾಡಿದವರು ಅವರ ಜನ್ಮ ಧನ್ಯವಾದಂತೆ ಭಾವಿಸುತ್ತಾರೆ. ಈ ಯಾತ್ರೆ ಜೀವನ ದುದ್ದಕ್ಕೂ ನೆನಪಿನಲ್ಲಿರಿಸಿಕೊಳ್ಳುವಂತಹಾ ಅದ್ಭುತ ಅನು ಭವವನ್ನು ನೀಡುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

# ಶ್ರೀ ಕೃಷ್ಣನ ಅವತಾರದ ಹಿನ್ನೆಲೆ

- ಶ್ರೀಮತಿ. ಸುಧಾಮಧುಸೂದನ್

ದೇವಾದಿದೇವನೂ, ಜಗನ್ನಾಥನೂ, ಪರಮ ಭಾಗವತನೂ, ಪುರುಷೋತ್ತಮನೂ, ಪುರುಷಶ್ರೇಷ್ಠನೂ ಆದ ಶ್ರೀಮನ್ನಾರಾಯಣನು ಆದಿಯಲ್ಲಿ ತನನ್ನು ಸೃಷ್ಟಿಸಿಕೊಂಡು (ಅವ್ಯಕ್ತದಲ್ಲಿ) ತನ್ನಿಂದಲೇ ಪುರುಷ ಪ್ರಕೃತಿಗಳನ್ನು ಸೃಷ್ಟಿಸಿ ಪ್ರಕೃತಿಯಿಂದಲೇ ಅದರ ಸಂಪನ್ಮೂಲಗಳು ಆದ 24 ತತ್ವಗಳಿಂದಲೇ ಅವುಗಳಿಗೆ ಪರಿವರ್ತನೆಗೊಳಿಸಿ ಸಮಸ್ತ ಚರಾಚರ ಜೀವಕೋಟಿಗೂ ಬೇಕಾದ ಸೂಕ್ತ ಶರೀರವನ್ನು ಅದಕ್ಕನುಸಾರವಾಗಿ ಪಂಚಕೋಶ ಸೃಷ್ಟಿಸಿ, ಕ್ರಿಯಾಶಕ್ತಿ, ಜೀವಾತ್ಮವನ್ನು ಅವಿಭಾಜ್ಯ ಅಂಗವಾಗಿ ಸೇರಿಸಿದನು. ಪೃಥ್ವಿ, ಜಲ, ಆಕಾಶ, ಪಂಚಭೂತಗಳನ್ನು (ಆಕಾಶ, ವಾಯು, ತೇಜಸ್ಸು, ನೀರು ಪೃಥ್ವಿಯನ್ನು ಸೃಷ್ಟಿಸಿಕೊಂಡನು. ಸಮಸ್ತ ಜೀವಕೋಟಿಯ ಜನ್ಮ ಸ್ಥಳವನ್ನಾಗಿಸಿದನು ಶ್ರೀಮನ್ನಾರಾಯಣನು.

ಪ್ರಯಳದ ನಂತರ ಶ್ರೀವದ್‌ನಾರಾಯಣನೇ ವ್ಯೂಹಾವತಾರದಲ್ಲಿ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ನಾರಾಯಣನಾಗಿ ಸಂಕರ್ಷಣರನ್ನು ಮಹತ್ ತತ್ವ ಅಧಿಪತಿಯಾಗಿ ಪ್ರದ್ಯುಮ್ನನನ್ನು ಅಹಂಕಾರ ತತ್ವದಲೂ, ಅನಿರುದ್ಧ ನಾರಾಯಣರು ಭೂಮಂಡಲದಲ್ಲೂ ಅವರಿಗೆ ಸಂಪೂರ್ಣ ಆಡಳಿತದ ಜವಾಬ್ದಾರಿಯನ್ನು ವಹಿಸಿದನು. ಪಾಲ್ಗಡಲಲ್ಲಿ ಸಮಸ್ತ ಪರಿವಾರದೊಂದಿಗೆ ಮಲಗಿದ ಶೇಷಶಾಯಿಯಾದ ನಾರಾಯಣನು ತನ್ನ ನಾಭಿಯಿಂದ ಚರ್ತುಮುಖನನ್ನು ಕಮಲದ ಮುಖೇಣ ಸೃಷ್ಟಿಸಿಕೊಂಡನು. ಬ್ರಹ್ಮನ ಮುಖೇನ ಸಮಸ್ತ ಸೃಷ್ಟಿ ಮಾಡಲಿಕ್ಕಾಗಿ ಪ್ರಕೃತಿ ಅನುಕೂಲಗಳನ್ನು ಮಾಡಿದನು. (ಸೂಕ್ತ ಶರೀರ, ಪಂಚಕೋಶ ಇತ್ಯಾದಿ). ಅದರೂಡನೆ ತನ್ನ ಅಧ್ದ ಸಮಸ್ತ ಜೀವಕೋಟಿಯನ್ನು ಸೃಷ್ಟಿಸಿದನು. ನಂತರ ತಮ್ಮ ತಮ್ಮ ಹಿಂದಿನ ಜನ್ಮಕ್ಕೆ ಅನುಗುಣವಾಗಿ ಬ್ರಹ್ಮಾಂಡದ ನಿರ್ವಹಣೆಗೆ ಬೇಕಾದ ಅನುಕೂಲಗಳನ್ನೂ, ಬ್ರಹ್ಮಾಂಡದ ರಚನೆಯೂ, ಅದರ ನಿರ್ವಹಣೆಗೆ ಬೇಕಾದ ಸಕಲ ಸಲಕರಣೆಗಳೂ ಆದವೂ ಸೂರ್ಯ ಚಂದ್ರ, ಇತರರ ಸೃಷ್ಟಿಸಿದನು, ಚರಾ, ಅಚರಾ ವಸ್ತು ರಚನೆಯಾಯಿತು.

ಇತ್ತ ಸರೋಜದಳದಲ್ಲಿ ಜನಿಸಿದ ಚರ್ತುಮುಖನು ಸಪ್ತ ಋಷಿಗಳನ್ನೂ ಬ್ರಹ್ಮಾಂಡದ ನಿರ್ವಹಣೆಗಾಗಿ ಮನುಗಳನ್ನು, ಅದಕ್ಕೆ ಬೇಕಾದ ಸಿಬ್ಬಂದಿ ವರ್ಗಗಳನ್ನು ನಿರ್ಮಿಸಿದನು.

ಪರಮಾತ್ಮನ ಆಣತಿಯಂತೆ ತಾನೇ ಈ ಇಭಾಗವಾಗಿ ಗಂಡು ಮತ್ತು ಹೆಣ್ಣಾದನು. ಹೀಗೆ ಸಮಸ್ತ ಜನ್ಮ ಕೋಟಿಯೂ ಮಿಥುನ ರೂಪದಲ್ಲಿ ಸೃಷ್ಟಿಯಾಯಿತು, ಪ್ರಾಂಭವಾಯಿತು. ಹೀಗೇ ಸಂಪೂರ್ಣ ಬ್ರಹ್ಮಾಂಡದ ಆಡಳಿತವು ನಿತ್ಯ ನಿಯಾಮಕನಾದ ಶ್ರೀಮನ್ನಾರಾಯಣನ ಅಧೀನದಲ್ಲಿ ಮುಂದಾಳತ್ವದಲ್ಲಿ ನಡೆಯಿತು.

ಬ್ರಹ್ಮಲೋಕವನ್ನು ಜನೋಲೋಕ ತಪೋಲೋಕ ಸತ್ಯಲೋಕ ಎಲ್ಲವೂ ಸೇರಿದವು.

ಬ್ರಹ್ಮಾಂಡದಲ್ಲಿ ಜನಿಸಿದ ಸಕಲ ಜೀವರಾಶಿಗಳೂ ತ್ರಿಗುಣಗಳ ಪ್ರಭಾವದಿಂದ ಪೂರ್ವಜನ್ಮಕ್ಕೆ ವಿಧವಿಧವಾಗಿ ಜನ್ಮ ಕೊಳಗೊಂಡಿರುತ್ತದೆ.

ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಂ

ಎನ್ನುವಂತೆ ಪುನಃಸಾವು, ಪುನಃ ಹುಟ್ಟು, ಪುನಃ ತಾಯಿಯ ಗರ್ಭದಲ್ಲಿ ವಾಸ, ಹೀಗೆ ಪ್ರಕೃತಿಯ ವಿಸ್ತಾರವಾಯಿತು.

ಈ ಜನ್ಮ, ಮೃತ್ಯುರ್ ಎಂಬುದು ಎಲ್ಲಿಯವರೆಗೆ ಪರಮಾತ್ಮನ ಜ್ಞಾನ ಮತ್ತು ವಿಜ್ಞಾನಾಂಶವೂ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಮಾತ್ರ. ಒಮ್ಮೆ ಪರಮಾತ್ಮನ ಅನುಗ್ರಹದಿಂದ ಪ್ರೇರಣೆಯಿಂದ ಜೀವಿಯು ಭಕ್ತಿ ಧ್ಯಾನ, ಪ್ರಪತ್ತಿ

ಮಾರ್ಗದಿಂದ ಮುಂದುವರೆಯುವುದರಿಂದ ಮೋಕ್ಷ ಸಾಧ್ಯವಾಗುತ್ತದೆ ಮುಕ್ತಿ ಹೊಂದುತ್ತಾನೆ. ಈ ಸ್ಥೂಲ ಶರೀರವು ಗತಿಸಿ ಶ್ರೀಮನ್ನಾರಾಯಣನ ದಿವ್ಯಚರಣವನ್ನು ಆಶ್ರಯಿಸುವಂತೆ ಆ ಲೀಲಾವಿನೋದನ ಅನವರತ ಧ್ಯಾನದಿಂದ ಸಾಧ್ಯವಾಗುತ್ತದೆ.



ದುಷ್ಟ ಶಿಕ್ಷಣ ಶಿಷ್ಟರಕ್ಷಣಾ ಎನ್ನುವಂತೆ ಈ ಭೂಮಂಡಲದಲ್ಲಿ ಅನೇಕ ರೀತಿಯಲ್ಲಿ ತನಿಷ್ಟದಂತೆಯೇ ಜನ್ಮವೆತ್ತಿ, ಧರ್ಮಪರಿಪಾಲನೆ ಮಾಡುತ್ತಾನೆ. ಇದೇ ವಿಭವಾವತಾರ.ಇಲ್ಲಿ ಜನ್ಮವೆತ್ತಿ ಸಕಲ ಧ್ಯೇಯವನ್ನು ಸಂಪೂರ್ಣಗೊಳಿಸಿ ಎಲ್ಲಾ ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ರಕ್ಷಿಸಿ, ಧರ್ಮ ಪರಿಪಾಲನೆ ಮಾಡಿ ಧರ್ಮವು ಸ್ಥಾಪಿತವಾಗಲಿಕ್ಕಾಗಿ ಅವತಾರ ಎತ್ತಿದ ಮಹಾಪುರುಷ, ಅಂತ್ಯರಹಿತವಾದ ಲೀಲಾವಿನೋದಿಯಾದ ಶ್ರೀ ಕೃಷ್ಣನ ಅವತಾರವನ್ನು ಅದರ ಅನುಭವವನ್ನು ನಾವು ಅನುಭವಿಸೋಣ.

ಧರ್ಮಗ್ರಂಥಗಳು ಶ್ರೀ ಕೃಷ್ಣನ ವಿಭವಾತಾರವನ್ನು ಶ್ರೀಮನ್ನಾರಾಯಣನ ಪೂರ್ಣ ಅಂಶಗಳುಳ್ಳ ಅವತಾರವು ಎನ್ನುತ್ತದೆ. ಭಗವದ್ಗೀತೆಯಲೂ ಇದನ್ನೇ ಹೇಳಿದೆ ಪರಮಾತ್ಮನ 'ಅರ್ಚಾರವತಾರವು'ಮತ್ತೊಂದು ಅವತಾರವೆನ್ನುತ್ತಾರೆ. ಕಲಿಯುಗದಲ್ಲಿ ಎಲ್ಲಾ ಮನೆಗಳಲ್ಲಿ ದೇವಸ್ಥಾನಗಳಲ್ಲಿ ಸ್ವಾಮಿಯ ಅರ್ಚಾಮೂರ್ತಿಯನ್ನು ಪೂಜಿಸುತ್ತಾರೆ. ದೇವೋತ್ತಮನಾದ ಕೃಷ್ಣನ ನಿವಾಸವನ್ನು ಬ್ರಹ್ಮ ಸಂಹಿತೆಯಲ್ಲಿ ಚಿಂತಾಮಣಿಯ ಆವಾಸಸ್ಥಾನ ಎಂದು ವರ್ಣಿಸಿದ್ದಾರೆ.

ಶ್ರೀ ಕೃಷ್ಣನೇ ಭಗವದ್ಗೀತೆಯಲ್ಲಿ ಹೇಳಿರುವಂತೆ ಮನುಷ್ಯನ ಧಾರ್ಮಿಕ ತತ್ವದಲ್ಲಿ ಅಧರ್ಮ ಕೃತ್ಯಗಳು ಹೆಚ್ಚಾದಾಗ ಭೂಭಾರ ಜಾಸ್ತಿಯಾಗುತ್ತದೆ. ಆ ಭಾರವನ್ನು ಇಳಿಸಲಿಕ್ಕಾಗಿ ಶ್ರೀ ಕೃಷ್ಣನು ಅವತರಿಸಿದ್ದಾನೆ ಈ ವಿಶ್ವದ ಪಾಪಕರ್ಮಗಳ ಹೊರೆಯನ್ನು ಕಡಿಮೆ ಮಾಡುವ ಅಗತ್ಯವಿದ್ದು ಭೌತಿಕ ಸೃಷ್ಟಿಯ ಆಗು ಹೋಗುಗಳು ಕೃಷ್ಣನ ಪರಿಪೂರ್ಣ ಭಾಗವಾದ ಶ್ರೀ ಮಹಾವಿಷ್ಣುವಿನ ಕೈಯಲ್ಲಿದೆ.

ದಶಾವತಾರದಲ್ಲಿ ಎಂಟನೇ ಅವತಾರಿಯಾಗಿ, ದೇವಕಿಯ ಎಂಟನೇ ಗರ್ಭದಲ್ಲಿ,ಎಂಟನೆಯ ದಿನದಂದು ಅಷ್ಟಮಿಯಂದು ಕೃಷ್ಣನೇ ಹೇಳಿದ ವೃತ್ತಾಂತವನ್ನು ಕೃಷ್ಣಕಥೆ ಎಂದರೆ ಕೃಷ್ಣನ ವಿಷಯವಾದ ವೃತ್ತಾಂತ.

ಕೃಷ್ಣನೇ ಹೇಳಿದ ವೇದಾಂತ ಅಥವಾ ಪರಮಾತ್ಮನ ವಿಜ್ಞಾನವೇ ಭಗವದ್ಗೀತೆ, ಸ್ವತಃ ಶ್ರೀ ಕೃಷ್ಣನೇ ಹೇಳಿದ ಗೀತೆ.

ಶ್ರೀ ಮದ್ಭಾಗವತವು ಕೃಷ್ಣನ ಚಟುವಟಿಕೆಗಳು ಮತ್ತು ಆಲೌಕಿಕ ಲೀಲೆಗಳ ವೃತ್ತಾಂತ ಈ ಗೀತೆಯ ಪಠಣದಿಂದ ಜನರು ಭವ ಬಂಧನದಿಂದ ಮುಕ್ತರಾಗಬಹುದು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ಹೇಳಿರುವಂತೆ 'ಆತ್ಮದಲ್ಲಿ ದೃಢವಾಗಿದ್ದು ಎಲ್ಲಾ ಭೌತಿಕ ಕಲ್ಮಶ ಸೋಂಕಿನಿಂದ ಮುಕ್ತನಾಗಿ ಯೋಗಿಯು ಪರಮ ಪ್ರಭುವಿನೊಡನೆ ಸಂಪರ್ಕ ಮಾಡಿ (ಶ್ರೀ ಕೃಷ್ಣನ) ಸಂತೋಷದ ಅತ್ಯುನ್ನತ ಹಂತವನ್ನು ಸಾಧಿಸುತ್ತಾನೆ.

ದೇವರ ಸಾಕ್ಷಾತ್ಕಾರಕ್ಕೆ ಒಂದು ವೈಜ್ಞಾನಿಕ ವಿಧಾನವಾದ ಯೋಗವು ನಮ್ಮ ಪ್ರಜ್ಞೆಯನ್ನು ಶುದ್ಧಿಗೊಳಿಸಿ ಇನ್ನಷ್ಟು ಮಲಿನವಾಗುವುದನ್ನು ತಡೆದು ಪರಿಪೂರ್ಣಜ್ಞಾನ, ಆನಂದ, ಸಂತೋಷ ಸಿದ್ಧಿಯನ್ನು ಪಡೆಯುತ್ತೇವೆ.

ಯೋಗಗಳಾದ ರಾಜಯೋಗ,ಜ್ಞಾನಯೋಗ ಹಠಯೋಗ, ಕ್ರಿಯಾಯೋಗದ ಭಕ್ತಿಯೋಗ ಹೀಗೆ ಯೋಗ ಮಾರ್ಗಗಳನ್ನು ನಮಗೆ ಒಂದೊಂದೆ ಪದ್ಧತಿಯನ್ನು ಕೂಲಂಕುಷವಾಗಿ ಹೇಳಿದ ಪರಮ ಪುರುಷನೂ ಶ್ರೀ ಮನ್ನಾರಾಯಣನ್ನೂ ಆದ ಶ್ರೀ ಕೃಷ್ಣನು ತನ್ನಿಂದಲೇ ಹೇಳಲ್ಪಟ್ಟಿರುವನು. ದೇವರ ಸಾಕ್ಷಾತ್ಕಾರವನ್ನು ಈ ವಿಧಾನವಾದ ಯೋಗದಿಂದ ಹೊಂದುತ್ತಾನೆ.

ಈ ಕೃಷ್ಣನ ಲೀಲೆಗಳು ಕುರಿತು ಕೇಳುವುದು ಮತ್ತು ಸಂಕೀರ್ತನೆ ಮಾಡುವುದು ಎಷ್ಟು ವೃತ್ತಿಕರ ಎಂದರೆ ಇದರಲ್ಲಿ ಭಾಗವಹಿಸುವ ಮೂರು ಬಗೆಯ ಜನರು ಪರಿಶುದ್ಧರಾಗುತ್ತಾರೆ.

ಕೃಷ್ಣನ ವಿಷಯವಾಗಿ ವಾಚನ ಮಾಡುವರು, ಕೃಷ್ಣನ ವಿಷಯವಾಗಿ ಕೇಳುವರು, ಕೃಷ್ಣನ ವಿಷಯವಾಗಿ ಸಂಕೀರ್ತನೆ ಮಾಡುವವರು ಈ ಕಲಿಯುಗದಲ್ಲಿ ಸಕಲ ಸಂಪತ್ತು ಆಯು ಆರೋಗ್ಯ ಹೊಂದಿ ಹೇಗೆ ಬರೀ ಒಂದು ಬಿಂದು ಗಂಗೋದಕವು ವಿಷ್ಣುವಿನ ಕಾಲ ಬೆರಳಿನಿಂದ ಹರಿದು ಪತ್ರಿಗೊಳಿಸುವುದೋ ಹಾಗೇ ಪರಿಶುದ್ಧಗೊಳಿಸುತ್ತದೆ ಶ್ರೀಕೃಷ್ಣ ಧ್ಯಾನ.

ವಸುದೇವ ಸುತಂದೇವಂ ಕಂಸಚಾಣೂರ ಮರ್ಧನಂ।।
ದೇವಕಿ ಪರಮಾನಂದಂ ಕೃಷ್ಣಂ ವಂದೆ ಜಗದ್ಗುರುಂ।।

**ಆಧಾರಗ್ರಂಥಗಳು:-**

**1) ಶ್ರೀ ಕೃಷ್ಣಲೀಲೆ - ಎ.ಎಸ್. ನಾರಾಯಣ ಐಯ್ಯಂಗಾರ್**

**2) ಕೃಷ್ಣ-ಭಕ್ತ ವೇದಾಂತ - ಸ್ವಾಮಿ ಪ್ರಭುಪಾದ**

ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಅನ್ನದಾನ ಟ್ರಸ್ಟ್



ತಿರುಮಲೆ, ತಿರುಚಾನೂರಿನಲ್ಲಿ ಸಾವಿರಾರು ಭಕ್ತರಿಗೆ ನಿತ್ಯವೂ ಅನ್ನ ಪ್ರಸಾದ ವಿತರಣೆಯ ವಿಷಯವು ಭಕ್ತರಿಗೆ ತಿಳಿದಿದೆ! ಈಗ ತಿ.ತಿ.ದೇ. ಅನ್ನಪ್ರಸಾದ ಟ್ರಸ್ಟ್‌ಗೆ ಭಕ್ತರು, ದಾತರು ವಿರಾಳವನ್ನು ನೀಡಲು ಅವಕಾಶವನ್ನು ತಿ.ತಿ.ದೇ. ಕಲ್ಪಿಸುತ್ತಿದೆ. ಅದಕ್ಕೆ ಒಂದು ದಿನದ ವಿರಾಳ ಪಥಕ ಪ್ರವೇಶಿಸಲಾಗಿದೆ.




**ಅದು ಹೇಗೆಂದರೆ, ಒಂದು ದಿನಕ್ಕೆ ಆಗುವ ಖರ್ಚು**

| | | |
|---|---|---|
| 1) ಅಲ್ಪಾಹಾರ | - | 07 ಲಕ್ಷಗಳು |
| 2) ಮಧ್ಯಾಹ್ನ ಭೋಜನ | - | 11.50 ಲಕ್ಷಗಳು |
| 3) ರಾತ್ರಿ ಭೋಜನ | - | 11.50 ಲಕ್ಷಗಳು |
| ಮೊತ್ತ | - | 30 ಲಕ್ಷಗಳು |



ಈ ಮೊತ್ತವನ್ನು ದಾತರಿಂದ ಸಂಗ್ರಹಿಸಲು ಸಿದ್ಧವಾಗುತ್ತಿದೆ ತಿರುಮಲೆ ತಿರುಪತಿ ದೇವಸ್ಥಾನಗಳ ಅನ್ನಪ್ರಸಾದ ಟ್ರಸ್ಟ್.



ದಾತರು - ವ್ಯಕ್ತಿಗಳು / ಕಂಪನಿಗಳು/ ಸಂಸ್ಥೆಗಳು/ ಟ್ರಸ್ಟ್‌ಗಳು/ ಸಂಯುಕ್ತವಾಗಿಯೂ ಸಹ ಇರಬಹುದು.

ನೀವುಗಳು ಒಂದು ದಿನದ ಮೊತ್ತ ರೂ.30 ಲಕ್ಷಗಳಾಗಲಿ / ಅಲ್ಪಾಹಾರ- 07 ಲಕ್ಷಗಳಾಗಲಿ /ಮಧ್ಯಾಹ್ನ ಭೋಜನ - 11.50 ಲಕ್ಷಗಳಾಗಲಿ/ ರಾತ್ರಿ ಭೋಜನ- 11.50 ಲಕ್ಷಗಳಾಗಲಿ ನೀಡಬಹುದು.



**ಮತ್ತಷ್ಟು ವಿವರಗಳಿಗೆ ಸಂಪ್ರದಿಸಿ :-**

ಸ್ಪೆಷಲ್ ಆಫೀಸರ್, ಶ್ರೀ ವೇಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್,

ತಿ.ತಿ.ದೇ, ಆಡಳಿತ ಭವನ, ಕೆ.ಟಿ. ರೋಡ್, ತಿರುಪತಿ.



ದೂರವಾಣಿ ಸಂಖ್ಯೆ 0877-2264258,2264375,2264237


( **www.tirumala.org** ಈ ವೆಬ್‌ಸೈಟ್‌ನಲ್ಲಿ ಕೂಡ ವಿವರಗಳನ್ನು ಪಡೆಯಬಹುದು)



ಭಾಗವತ ಕಥಾಸಾಗರ

# ಧ್ರುವವಂಶ ಚರಿತ್ರೆ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್




ಭಾಗವತೋತ್ತಮನಾದ ಧ್ರುವನು ರಾಜ್ಯವನ್ನು ತ್ಯಜಿಸಿ ವನಕ್ಕೆ ಹೊರಟುನಿಂತಾಗ ಆತನ ಪುತ್ರನಾದ ಉತ್ಕಲನು ವೈಭವೋಪೇತವಾದ ರಾಜ್ಯ ಸಿಂಹಾಸನವನ್ನು ಸ್ವೀಕರಿಸಲು ಸಮ್ಮತಿಸಲಿಲ್ಲ.ವಾಸ್ತವದಲ್ಲಿ ಆತನು ಹುಟ್ಟಿನಿಂದಲೇ ಪರಮ ಸಂತುಷ್ಟನಾಗಿರುವಂಥವನು. ಆತನು ಜನರಿಗೆಲ್ಲಾ ಜಡಭರತನಂತೆ,ಗುಂಡುಕಲ್ಲಿನಂತೆ,ಮೂಕಪ್ರೇಕ್ಷಕನಂತೆ, ಉನ್ಮತ್ತನಂತೆ, ಕಾಣುವವನು. ಆದರೂ ಮಿತ್ರರೂ ಮನೆಯ ಹಿರಿಯರು ಆತನನ್ನು ಬುದ್ಧಿಹೀನನೆಂದು ಪರಿಗಣಿಸಿ ಆತನ ಸೋದರನಾದ ವತ್ಸರನಿಗೆ ರಾಜ ಸಿಂಹಾಸನವನ್ನು ಪಟ್ಟ ಕಟ್ಟಿದ್ದಾರೆ. ಧ್ರುವನ ಮಡದಿ ಇಳೆಗೆ ಜನ್ಮಿಸಿದವನು ಈ ಉತ್ಕಲ; ಧ್ರುವನ ಪತ್ನಿ ಭ್ರಮೆಗೆ ಜನಿಸಿದವನು ವತ್ಸರನು.ಈ ರೀತಿಯಲ್ಲಿ ವತ್ಸರನು ಈ ಭೂ ಮಂಡಲಕ್ಕೇ ಚಕ್ರವರ್ತಿಯಾಗಿದ್ದಾನೆ.

ವತ್ಸರನ ಪತ್ನಿ ಸ್ವರ್ವೀಥಿ. ಆಕೆಗೆ ಪುಷ್ಪಾರ್ಣ,ತಿಗ್ಮ ಕೇತು, ಇಷ, ಊರ್ಜ, ವಸು, ಜಯರೆಂಬ ಆರುಮಂದಿ ಪುತ್ರರು ಜನಿಸಿದ್ದಾರೆ. ಪುಷ್ಪಾರ್ಣನಿಗೆ ಪ್ರಭ, ದೋಷ ಎಂಬ ಇಬ್ಬರು ಸತಿಯರು, ಅವರ ವಂಶದಲ್ಲಿ ಚಾಕ್ಷುಷಮನುವು ಜನ್ಮಿಸಿದ್ದಾನೆ. ಆತನ ವಂಶದಲ್ಲಿ ಅಂಗಮಹಾರಾಜನು ಜನ್ಮಿಸಿದ್ದಾನೆ. ಅಂಗನ ಪತ್ನಿ ಸುನೀಥ 'ವೇನ' ನೆಂಬ ವಕ್ರ ಬುದ್ಧಿ ಹೊಂದಿದ ಪುತ್ರನಿಗೆ ಜನ್ಮ ನೀಡಿದ್ದಾಳೆ. ಅದರ ವಿವರಣೆಗಳು ಈ ರೀತಿ ಇವೆ.

ಒಮ್ಮೆ ಅಂಗ ಮಹಾರಾಜ ಅಶ್ವಮೇಧಯಾಗವನ್ನು ಮಾಡಬೇಕೆಂದು ಏರ್ಪಾಟುಗಳನ್ನು ಮಾಡಿಕೊಂಡಿದ್ದಾನೆ.ಯಜ್ಞ ನಿರ್ವಹಣೆಗೆ ಸಹಾಯಕರಾದ ಋಷಿಗಳು,ದೇವತೆ ಎಷ್ಟೇ ಸಮರ್ಥರಾಗಿದ್ದರೂ ದೇವತೆಗಳನ್ನು ಯಜ್ಞಭಾಗವನ್ನು ಸ್ವೀಕರಿಸಲು ಆಹ್ವಾನಿಸುವಲ್ಲಿ ಅಶಕ್ತರಾಗಿದ್ದಾರೆ. ಅಂಗರಾಜನ ಶ್ರದ್ಧೆ-ಭಕ್ತಿಗಳಗಲ್ಲೇನೂ ಲೋಪ ಕಾಣಿಸಲಿಲ್ಲ.ಯಜ್ಞ ಚರಣೆಯಲ್ಲೂ ಸಹಾಕಲ್ಮಶವಿಲ್ಲ.ಋತ್ವಿಕರೆಲ್ಲರೂ ದಕ್ಷತೆಯನ್ನು ಪಡೆದವರೇ, ಮಂತ್ರೋಚ್ಚಾರಣೆಯಲ್ಲೂ ಸಹಾ ಯಾವುದೇ ದೋಷವಿಲ್ಲವಾದರೂ ಯಜ್ಞಹುತಿಯನ್ನು ಸ್ವೀಕರಿಸಲು ಯಾವುದೇ ದೇವತೆಗಳು ಮುಂಬರಲಿಲ್ಲ.ಇದನ್ನು ಕಂಡ ಅಂಗರಾಜ ಕ್ಷೋಭಿತನಾಗಿದ್ದಾನೆ.ಋತ್ವಿಕರ ಅನುಮತಿಯೊಂದಿಗೆ ಆತನು ಮೌನವ್ರತವನ್ನು ತೊರೆದು ಯಜ್ಞಸ್ಥಳದಲ್ಲಿ ಉಪಸ್ಥಿತರಾದ ಸದಸ್ಯರನ್ನು ಆ ಕುರಿತು ಪ್ರಶ್ನಿಸಿದ್ದಾನೆ.ತ್ರಿಕಾಲಜ್ಞರಾದ ಆ ಮಹಾತ್ಮರು ಅಂಗನು ಪ್ರಸ್ತುತ ಜನ್ಮದಲ್ಲಿ ಯಾವುದೇ ಪಾಪವೆಸ ಗಿಲ್ಲವೆಂದೂ ಮನಸ್ಸಿನಲ್ಲೂ ಸಹಾ ಯಾವುದೇ ದುರಾ ಲೋಚನೆ ಮಾಡಿಲ್ಲವೆಂದೂ ಆದರೂ ಪೂರ್ವಜನ್ಮದ ಪಾಪ ಕೃತ್ಯದಿಂದಾಗಿ ಪುತ್ರ ಹೀನನಾಗಿದ್ದಾನೆಂದು ತಿಳಿಸಿದ್ದಾರೆ. ಪುತ್ರಾರ್ಥಿಯಾದ ಆತನು ಶ್ರೀ ಹರಿಯ ಕುರಿತು ಯಜ್ಞವನ್ನು ಮಾಡಿದಲ್ಲಿ ಆ ದೇವದೇವನ ಸಮೇತ ಎಲ್ಲಾ ದೇವತೆಗಳು ಬಂದು ತಮ್ಮ ಯಜ್ಞಾಹುತಿಯನ್ನು ಸ್ವೀಕರಿಸಬಲ್ಲರೆಂದು ಸಲಹೆಯನ್ನಿತ್ತಿದ್ದಾರೆ.ಆ ಸಲಹೆಯ ಮೇರೆಗೆ ಅಂಗರಾಜನು ವಿಷ್ಣು ಪ್ರೀತ್ಯರ್ಥವಾದ ಒಂದು ಯಜ್ಞವನ್ನು ಮಾಡಿದ್ದಾನೆ. ಆ ಯಜ್ಞದ ಫಲವಾಗಿ ಶ್ವೇತವಸ್ತ್ರಧಾರಿಯಾದ ಪುರುಷನೊಬ್ಬನು ಆ ಯಜ್ಞಕುಂಡದಿಂದ ಹೊರಬಂದು ಪಾಯಸದ ಪಾತ್ರೆಯೊಂದನ್ನು ಕೊಟ್ಟಿದ್ದಾನೆ.ಪಾಯಸ ಪಾತ್ರೆಯಲ್ಲಿದ್ದ ಪರಮಾನ್ನವನ್ನು ಅಂಗರಾಜನು ದೊನ್ನೆಯಲ್ಲಿ ತೆಗೆದುಕೊಂಡು ಅದನ್ನೊಮ್ಮೆ ಆ ಘ್ರಾಣಿಸಿ ತನ್ನ ಮಡದಿಗೆ ಕೊಟ್ಟಿದ್ದಾನೆ ತತ್ಪ್ರಸಾದ ಫಲಿತವಾಗಿ ರಾಣಿಯು ಗರ್ಭವತಿಯಾಗಿ ಕಾಲ ಕ್ರಮಾನುಸಾರ ಪುತ್ರನಿಗೆ ಜನ್ಮವಿತ್ತಿದ್ದಾಳೆ. ಆದರೆ ಆ ಬಾಲಕನು ತಾಯಿಯ ಕಡೆಯಿಂದ ಅಧರ್ಮ ವಂಶಕ್ಕೆ ಸೇರಿದವ ನಾದ್ದರಿಂದ ಧರ್ಮಹೀನನಾಗಿದ್ದಾನೆ.ಏಕೆಂದರೆ ಮೃತ್ಯುವೇ ಆತನ ಪಿತಾಮಹನಾಗಿದ್ದನು.ಆ ಬಾಲಕನು ತನ್ನ ತಾತನನ್ನೇ

ಅನುಸರಿಸಿ ಧರ್ಮಭ್ರಷ್ಟನಾಗಿದ್ದಾನೆ.ಸ್ಮೃತಿ ಶಾಸ್ತ್ರಗಳ ಪ್ರಕಾರ ಸಹಾ ಬಾಲಕನು ತನ್ನ ಸೋದರಮಾವನ ಮನೆಯ ಹವ್ಯಾಸಗಳನ್ನೇ ಮೈಗೂಡಿಸಿ ಕೊಂಡು ಬೆಳೆದಿದ್ದಾನೆ. ಇದನ್ನೇ 'ನರಾಣಾಂ ಮಾತಲಕರ್ಮ' ಎನ್ನುತ್ತಾರೆ.

ಈ ಬಾಲಕನ ಹೆಸರು ವೇನ. ಕ್ರೂರಿಯಾದ ವೇನನು ಚಿಕ್ಕಂದಿನಿಂದಲೇ ತನ್ನ ಕ್ರೂರಸ್ವಭಾವವನ್ನು ಪ್ರದರ್ಶಿಸಲು ಮೊದಲಿಟ್ಟಿದ್ದಾನೆ. ಬೇಟೆಗಾಗಿ ಅರಣ್ಯಕ್ಕೆ ತೆರಳುವಾಗ ಆತನು ಅನಾವಶ್ಯಕವಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದನು.ಬರೀ ಪ್ರಾಣಿಗಳನ್ನೊಂದೇ ಅಲ್ಲದೇ ಆಡುತ್ತಿರುವ ಚಿಕ್ಕ ಮಕ್ಕಳನ್ನು ಸಹಾ ಕ್ರೂರವಾಗಿ ಕೊಲ್ಲುತ್ತಿದ್ದನು.ವೇನನ ಈ ವಿಚಿತ್ರವಾದ ಕ್ರೂರ ಸ್ವಭಾವವನ್ನು ಅಂಗ ಮಹಾರಾಜ ಎಷ್ಟೋ ವಿಚಾರಿಸಿ ಸರಿತ್ತಿದ್ದಲು ಬಹಳಾ ಯತ್ನಿಸಿದ್ದಾನೆ. ಹಲವಾರು ವಿಧವಾಗಿ ಶಿಕ್ಷಿಸಿದ್ದಾನೆ. ಆದರೂ ವೇನನಲ್ಲಿ ಪರಿವರ್ತನೆ ಕಂಡು ಬರಲಿಲ್ಲ. ಇದರಲ್ಲೇ ಮಹಾರಾಜನು ವಿಚಾರಮಗ್ನನಾಗಿದ್ದಾನೆ. ಒಂದು ದಿನ ರಾತ್ರಿ ರಾಜ ಅದೇ ಆಲೋಚನೆಯಲ್ಲಿ ನಿರತನಾಗಿ ಕಡೆಗೆ ಗೃಹಸ್ಥ ಜೀವನದಲ್ಲಿ ವಿರಕ್ತಿ ಹೊಂದಿದವನಾಗಿದ್ದಾನೆ. ಅಷ್ಟೇ! ರಾತ್ರೋ ರಾತ್ರಿ ಆತನು ಯಾರಿಗೂ ಹೇಳದಂತೆ ರಾಜ್ಯವನ್ನು ಬಿಟ್ಟು ಅಡವಿಗೆ ಹೊರಟು ಹೋಗಿದ್ದಾನೆ.ಆತ ಹೊರಟು ಹೋಗುವ ವಿಷಯ ಆತನ ಮಡದಿಗೂ ತಿಳಿದು ಬಂದಿಲ್ಲ. ವಿರಕ್ತನಾದ ರಾಜ ರಾಜ್ಯವನ್ನು ತೊರೆದ ವಿಷಯವನ್ನು ಕೇಳಿ ಪ್ರಜೆಗಳು, ಪುರೋಹಿತರು, ಬಂಧುಗಳು, ಪರಿಪರಿಯಾಗಿ ದುಃಖಿಸಿದ್ದಾರೆ. ಅವರೆಲ್ಲರೂ ರಾಜನಿಗಾಗಿ ಎಷ್ಟು ಹುಡಕಿದರೂ ಫಲವುಂಟಾಗಲಿಲ್ಲ.ಆಗ ಭೃಗ್ವಾದಿ ಮುನಿಗಳು ಸಮಾಲೋಚಿಸಿ ಮಂತ್ರಿಗಳು ಸಮ್ಮತಿಸದಿದ್ದರೂ ವೇನನಿಗೆ ರಾಜ್ಯಾಭಿಷೇಕ ಮಾಡಿದ್ದಾರೆ.

ಸಿಂಹಾಸನವನ್ನು ಗ್ರಹಿಸುತ್ತಲೇ ವೇನನು ಗರ್ವಿಷ್ಠನಾಗಿದ್ದಾನೆ. ಮಿಥ್ಯಾಹಂಕಾರಕ್ಕೆ ಬಲಿಯಾಗಿ ತಾನೇ ಶ್ರೇಷ್ಠನೆಂದು ಬೀಗುತ್ತಾ ಮಹಾತ್ಮರನ್ನೆಲ್ಲಾ ಅವಮಾನಿಸಲು ಆರಂಭಿಸಿದ್ದಾನೆ. ಆದರೂ ವೇನನ ಕ್ರೂರತ್ವವನ್ನು ತಿಳಿದ ಕಳ್ಳಕಾಕರು ಸರ್ಪ ಅಟ್ಟಿಸಿಕೊಂಡು ಬಂದ ಇಲಿಗಳ ಹಾಗೆ ಎಲ್ಲಿಯವರಲ್ಲಿ ಬಚ್ಚಿಟ್ಟುಕೊಂಡಿದ್ದಾರೆ. ವೇನನ ಸ್ಥಿತಿ ಅಂಕುಶವಿರದ ಮದಗಜದಂತಾಗಿದೆ.ದ್ವಿಜರು ಇನ್ನು ಮುಂದೆ ಯಜ್ಞಗಳನ್ನು ಮಾಡಬಾರದೆಂದೂ, ಯಾರಿಗೂ ದಾನ ಕೊಡಕೂಡದೆಂದೂ ಪೂಜೆ ಪುನಸ್ಕಾರಗಳನ್ನು ನಿಲ್ಲಿಸಬೇಕೆಂದು ಆತನು ರಾಜ್ಯದಲ್ಲೆಲ್ಲಾ ಡಂಗುರ ಹೊಡೆಸಿದ್ದಾನೆ. ಇದನ್ನು ಕಂಡು ಬೇಸರಗೊಂಡ ಮುನಿ ವೃಂದವು ಆತನಿಗೆ ಸ್ವಲ್ಪ ಉಪದೇಶವನ್ನು ಮಾಡಬೇಕೆಂದು ನಿರ್ಣಯಿಸಿದ್ದಾರೆ. ಪ್ರಜಾರಕ್ಷಣೆಗಾಗಿ ಆತನನ್ನು ತಾವೇ ರಾಜನನ್ನಾಗಿ ಮಾಡಿದ್ದರಿಂದ ಯಾವಾಗ ಆತನು ಧರ್ಮಭ್ರಷ್ಟನಾಗುತ್ತಾನೋ ಆಗ ಆತನನ್ನು ಸರಿಯಾದ ದಾರಿಯಲ್ಲಿ ತರುವುದು ತಮ್ಮ ಕರ್ತವ್ಯವೆಂದು ಅರಿತಿದ್ದಾರೆ. ಆದ್ದರಿಂದ ಎಲ್ಲರೂ ವೇನನ ಬಳಿ ಸೇರಿ ಹಿತೋಪದೇಶವನ್ನು ಮಾಡಿ ಯಜ್ಞಗಳನ್ನು ನಿಲ್ಲಿಸಿ ದೇವತೆಗಳನ್ನು ಅಗೌರವಿಸುವುದು ಉಚಿತವಾದುದಲ್ಲವೆಂದು ತಿಳಿಹೇಳಿದ್ದಾರೆ.

ಮುನಿವೃಂದದವರ ಮಾತನ್ನು ಕೇಳಿದ ವೇನನಿಗೆ ಕೋಪವುಂಟಾಗಿದೆ. ಅವರಿಗೇ ಆತನು ಹಿತಬೋಧನೆಯನ್ನು ಮಾಡಲು ಆರಂಭಿಸಿದ್ದಾನೆ. ತಮ್ಮ ಮಾತುಗಳು ಫಲಿಸದೇ ಹೋದುದರಿಂದ ಮುನಿಗಳು ಕ್ರುದ್ಧರಾಗಿ ಯಾವುದೇ ಆಯುಧಗಳಿಲ್ಲದೇ ಕೇವಲ ಹೊಂಕಾರದಿಂದಲೇ ಆತನನ್ನು ವಧಿಸಿದ್ದಾರೆ.

ಈ ವಿಧವಾಗಿ ವೇನವಧೆಯನ್ನು ಪೂರ್ಣಗೊಳಿಸಿ ತಂತಮ್ಮ ಆಶ್ರಮಗಳಿಗೆ ತೆರಳಿದ್ದಾರೆ. ಆಗ ವೇನನ ತಾಯಿ ಸುನೀಥ ಮಿಗಿಲಾಗಿ ದುಃಖಿಸಿ ತನ್ನ ಮಗನ ದೇಹವನ್ನು ತೈಲ ಪಾತ್ರೆಯೊಂದರಲ್ಲಿ ಭದ್ರವಾಗಿರಿಸಿದ್ದಾಳೇ.

ವೇನನು ಮರಣಿಸುತ್ತಲೇ ದುರ್ಮಾರ್ಗರು,ದುಷ್ಟರು ಕಳ್ಳಕಾಕರು ವಿಜೃಂಭಿಸಿದ್ದಾರೆ.ರಾಜನನ್ನೇ ಸಂಹರಿಸಬಲ್ಲ ಸಾಮರ್ಥ್ಯವುಳ್ಳ ಋಷಿವೃಂದವು ಈ ದುಷ್ಟರ ಉಪದ್ರವವನ್ನು ತಡೆಯಲಿಲ್ಲ. ಏಕೆಂದರೆ ಆ ಕಾರ್ಯವನ್ನು ಮಾಡಬೇಕಾದವನು ರಾಜ. ಆದರೂ ಈ ರೀತಿ ಈ ವಿಷಯವನ್ನು ಉಪೇಕ್ಷಿಸುವುದೂ ಸಹಾ ಒಳ್ಳೆಯದಲ್ಲ. ಅಂತಹ ಉತ್ಪ್ರೇಕ್ಷೆಯೊಂದು ಅವರ ಬ್ರಾಹ್ಮಣತ್ವವನ್ನೇ ನಾಶಗೊಳಿಸಬಹುದು. ರಾಜರ್ಷಿಯಾದ ಅಂಗರಾಜನ ವಂಶವು ನಿಂತು ಹೋಗಬಾರದೆಂದು ಅವರೆಲ್ಲಾ ಸಂಕಲ್ಪಿಸಿ ವೇನನ ಮೃತ ಶರೀರದಿಂದ ತೊಡೆಯ ಭಾಗವನ್ನು ಒಂದು ಪ್ರತ್ಯೇಕ ರೀತಿಯಲ್ಲಿ ಅತಿವೇಗದಲ್ಲಿ ಮಥಿಸಿದ್ದಾರೆ. ತತ್ಫಲಿತವಾಗಿ ಒಂದು ಕುಬ್ಜವಾದ ಆಕಾರವೇನನ ಶರೀರದಿಂದ ಹೊರ ಹೊಮ್ಮಿದೆ. ವೇನನ ತೊಡೆಯಿಂದ ಹುಟ್ಟಿದ ಈ ಕಾಗೆಯಷ್ಟು ಕಪ್ಪು ವ್ಯಕ್ತಿಯ ಹೆಸರು ಬಾಹುಕ. ದೇಹದ ಅಂಗಾಂಗಗಳು, ಬಾಹುಗಳು, ಪಾದಗಳು ಕುರೂಪವಾಗಿದ್ದುದರಿಂದ, ದವಡೆಗಳು ಅಗಲವಾಗಿಯೂ ನಾಸಿಕವು ದೊಡ್ಡಯಾಗಿಯೂ ಕುಳ್ಳಗೆ ಕೆಂಪೆಗೆ ಕೂದಲು ರಾಗಿ ಬಣ್ಣದ್ದಾಗಿದ್ದಾಗಿದ್ದ ಕುಬ್ಜದೇಹಿ ವಿನಮ್ರನಾಗಿ ನಮಸ್ಕರಿಸಿ ಮುನಿಗಳೊಂದಿಗೆ "ಸ್ವಾಮಿ! ನಾನೇನು ಮಾಡಬೇಕೆಂದು ಹೇಳಿ" ಎಂದಿದ್ದಾನೆ. ಆಗ ಮುನಿವೃಂದವು ಆತನಿಗೆ "ಕುಳಿತುಕೋ" (ನಿಷೀದ) ಎಂದು ಹೇಳಿದ್ದಾರೆ. ಈ ರೀತಿಯಾಗಿ ನಿಷಾದನಾಗಿದ್ದಾನೆ.ಆ ನಿಷಾದನು ವೇನನ ಸಮಸ್ತ ಪಾಪಗಳನ್ನು ಸ್ವೀಕರಿಸಿದ್ದಾನೆ. ಆದ್ದರಿಂದಲೇ ನಿಷಾದ ಜಾತಿ ಕಳ್ಳತನ, ಅಪಹರಣ, ಬೇಟೆಯೆಂಬ ಪಾಪಕರ್ಮಗಳಲ್ಲಿಯೇ ಯಾವಾಗಲೂ ನಿರತರಾಗಿರುತ್ತದೆ.ಈ ರೀತಿಯಾಗಿ ಅವರು ಯಾವಾಗಲೂ ಬೆಟ್ಟ ಗುಡ್ಡಗಾಡುಗಳಲ್ಲೇ ನೆಲೆಸಿರುತ್ತಾರೆ.

ತದನಂತರ ಬ್ರಾಹ್ಮಣರು, ಮುನಿಗಳು ಮತ್ತೆ ವೇನನ ಮೃತ ದೇಹದಲ್ಲಿದ್ದ ಎರಡು ಬಾಹುಗಳನ್ನು ಮಥಿಸಿದ್ದಾರೆ. ಅಲ್ಲಿಂದ ಸ್ತ್ರೀಪುರುಷರ ಜೋಡಿಯೊಂದು ಉದ್ಭವಿಸಿದೆ. ವೇದಜ್ಞಾನ ಪಾರಂಗತವಾದ ಮುನಿವೃಂದವು ಆ ಜೋಡಿಯು ಸಾಕ್ಷಾತ್ ವಿಷ್ಣು ಅಂಶ ಸಂಭೂತರೆಂದು ತಿಳಿದುಕೊಂಡು ಆನಂದಪಟ್ಟಿದ್ದಾರೆ.ಸಮಸ್ತ ಲೋಕವನ್ನು ಪೋಷಿಸುವ ವಿಷ್ಣುದೇವನ ಶಕ್ತ್ಯಾಂಶವೇ ಪುರುಷನು, ಭಗವಂತನು ಎಡೆ ಬಿಡದೆ ಜೊತೆಗಿರುವ ವನಿತೆಯೇ ಆ ಮಹಾಲಕ್ಷ್ಮಿ ಸಂಭೂತೆ.ಈ ಸಂದರ್ಭದಲ್ಲಿ "ಪುರುಷನ್ಯಾಸಪಾಯಿನಿ' ಎಂದು ಭಾಗವತದಲ್ಲಿ ಹೇಳಲಾಗಿದೆ. ದಿವ್ಯತೇಜ ಸಂಪನ್ನನಾದ ಆ ಪುರುಷನನ್ನು ನೋಡಿ ಮಹರ್ಷಿಗಳು ಈ ರೀತಿಯಾಗಿ ಸ್ತುತಿಸಿದ್ದಾರೆ "ಈ ಇಬ್ಬರಲ್ಲಿ ಪುರುಷನು ತನ್ನ ಯಶಸ್ಸನ್ನು ಪ್ರಪಂಚಕ್ಕೆಲ್ಲಾ ವ್ಯಾಪಿಸುತ್ತಾನೆ. 'ಪೃಥು' ಎಂಬ ನಾಮಧೇಯದಿಂದ ಪ್ರಸಿದ್ಧಿ ಪಡೆಯುತ್ತಾನೆ. ಸರ್ವಾಂಗ ಸುಂದರಿಯಾದ ಈಕೆ 'ಅರ್ಚಿ' ಎಂಬ ನಾಮದಿಂದ ಪ್ರಸಿದ್ಧಿ ಹೊಂದಿ ಪೃಥುವನ್ನು ಪತಿಯಾಗಿ ಸ್ವೀಕರಿಸುತ್ತಾಳೆ.ಭಗವಂತನೇ ತನ್ನ ಶಕ್ತ್ಯಾಂಶದಿಂದ ಪೃಥುವಾಗಿ ಆವಿರ್ಭವಿಸಿದರೆ ಲಕ್ಷ್ಮಿದೇವಿ ಭಗವಂತನ ನಿತ್ಯ ಸಹಚರಿಯಾಗಿ ತನ್ನ ಅಂಶದ ಮೂಲಕ ಅರ್ಚಿಯಾಗಿ ಆವಿರ್ಭವಿಸಿದ್ದಾಳೆ"



# ಸಂಸ್ಕಾರ ಸಮನ್ವಿತ ಜೀವನವೃತ್ತಿ

ಆರ್.ಎನ್.ಎನ್. ಮೂರ್ತಿ

ಪುರಾಣಗಳ ರೀತ್ಯ ನದಿಗಳಂತೆಯೇ ಪರ್ವತಗಳೂ ಸಹ ಪೂಜ್ಯ ಹಾಗೂ ಆದರಣೀಯವೆಂದು ತಿಳಿಯಲ್ಪಟ್ಟಿದೆ. ದಕ್ಷಿಣ ಭಾರತದ ವೆಂಕಟಗಿರಿ (ತಿರುಪತಿ) ಮತ್ತು ಶ್ರೀ ಶೈಲವನ್ನು ಸಾಕ್ಷಾತ್ ನಾರಾಯಣ ರೂಪ ಎಂದು ತಿಳಿದಿದ್ದಾರೆ. ಸ್ಕಂದ ಪುರಾಣದಲ್ಲಿ ನಾರಾಯಣ ಗಿರಿ ಶಾಲಗ್ರಾಮ ಪರ್ವತ, ಅರುಣಾಚಲ, ಸಿಂಹಾಚಲ, ಸುಮೇರು, ಮಂದರ, ಹಿಮವಾನ್, ವಿಂದ್ಯಾಚಲ,ಚಿತ್ರಕೂಟ,ಪಾರಿಜಾತ, ಅಂಜನಗಿರಿ ಮುಂತಾದವುಗಳೆಲ್ಲವನ್ನೂ ಭಗವಂತನ ರೂಪವೆಂದು ನಿರೂಪಿಸಿದ್ದಾರೆ.ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಪರ್ವತಗಳ ಪೂಜಾ ವಿಷಯವಾಗಿ ಸಂಪೂರ್ಣಸಾಮಾಗ್ರಿಗಳು ಕೊಡಲ್ಪಟ್ಟಿದೆ. ಸ್ಕಂದ ಪುರಾಣದಲ್ಲಿ ಅರುಣಾಚಲ ಪರ್ವತವನ್ನು ಸಾಕ್ಷಾತ್ ಶಿವನರೂಪವೆಂದು ಹೇಳಿದೆ.

'ತತ್ರ ದೇವಃ ಸ್ವಯಂ ಶಂಭುಃ ಪರ್ವತಾಕಾರತಾಂ ಗತಃ।'

ವ್ರಜದಲ್ಲಿ ಗಿರಿರಾಜ ಪರ್ವತದ ಮಹತ್ವವೂ ಸಹ ಸರ್ವವಿದಿತವಾಗಿದೆ. ಇದರ ಪೂಜೆಯನ್ನು ಸ್ವತಃ ಭಗವಾನ್ ಶ್ರೀ ಕೃಷ್ಣನೇ ವ್ರಜವಾಸಿಗಳೊಂದಿಗೆ ಮಾಡಿದ್ದ.ಅಲ್ಲದೆ ಸ್ವತಃ ಗಿರಿರಾಜ ರೂಪವನ್ನು ಧರಿಸಿದ್ದ. ಇಂದಿಗೂ ಸಹಸ್ರಾರು ಸ್ತ್ರೀ ಪುರುಷರು ಗಿರಿರಾಜ ಪರ್ವತವನ್ನು ಸಾಕ್ಷಾತ್ ಭಗವದ್ ರೂಪವೆಂದು ತಿಳಿದು ಪ್ರದಕ್ಷಿಣೆ ಪೂಜೆಮಾಡುತ್ತಾರೆ. ಈ ರೀತಿ ಪರ್ವತಗಳ ದೇವತಾರೂಪ ಅಥವಾ ಭಗವಂತನರೂಪ ಸಿದ್ಧಿಸಲ್ಪಟ್ಟಿದೆ. ಅವುಗಳ ಪೂಜೆಯ ಪ್ರಾರಂಭವೂ ಸಹ ಸೃಷ್ಟಿಯ ಆರಂಭದಿಂದಲೇ ನಡೆದುಕೊಂಡು ಬಂದಿದೆ.ಹಿಮಾಲಯ, ವಿಂಧ್ಯಾಚಲ, ಪಾರಿಜಾತ, ಮಲಯಗಿರಿ, ಮಹೇಂದ್ರಾಚಲ, ಶುಕ್ತಿಮಾನ್, ಚಿತ್ರಕೂಟ ಋಕ್ಷವಾನ್ ಸಹ್ಯಾ ಚಲ, ಋಷ್ಯಮೂಕ, ಶ್ರೀಶೈಲ, ಅರುಣಾಚಲ ಕಾಮಗಿರಿ, ಗೋವರ್ಧನ ಮುಂತಾದವು ಇಲ್ಲಿಯ ಪ್ರಮುಖ ಪರ್ವತಗಳು. ಶಾಸ್ತ್ರಗಳಲ್ಲಿ ಇವುಗಳ ವಿಶೇಷ ಮಹಿಮೆಯನ್ನು ಕೊಂಡಾಡಿದ್ದಾರೆ.ಈ ಪರ್ವತಗಳಲ್ಲದೇ ಭಾರತದಲ್ಲಿ ಬೇರೆ ಮಂಗಳ ಪ್ರಸ್ಥ, ಋಷಭಗಿರಿ, ಕೂಟಗಿರಿ, ಕೋಲಾಚಲ, ವಾರಿಧಾರ, ಕಕುಬ್ ಗಿರಿ, ನೀಲಗಿರಿ ಮುಂತಾದ ಸಾವಿರಾರು ಪರ್ವತಗಳಿವೆ. ಇವೂ ಸಹ ಪವಿತ್ರವೂ ಹಾಗೂ ಸ್ಮರಣೀಯವೂ ಅಹುದು.

ಶಾಸ್ತ್ರಗಳಲ್ಲಿ ಮುಕ್ತಿಗೆ ಮುಖ್ಯವಾದ ಮೂರು ಕಾರಣಗಳನ್ನು ತಿಳಿಸಿದೆ. ಇದರಲ್ಲಿ ಬ್ರಹ್ಮಜ್ಞಾನ ಮೊದಲಿನದು. ಎರಡನೆಯದು, ಭಕ್ತಿಯ ಮೂಲಕ ಭಗವತ್ಪ್ರಾಪ್ತಿಯನ್ನು ಹೊಂದುವುದು. ಇನ್ನು ಮೂರನೆಯದು-ತಮ್ಮ ಮಕ್ಕಳು ಮೊಮ್ಮಕ್ಕಳು,ಗೋತ್ರಜರು, ಕುಟುಂಬದವರು ಹಾಗೂ ಬೇರೆ ವ್ಯಕ್ತಿಗಳ ಮೂಲಕ ಗಯೆ ಮುಂತಾದ ಪುಣ್ಯ ಕ್ಷೇತ್ರಗಳಲ್ಲಿ ಸಂಪಾದಿತ ಶ್ರಾದ್ಧ ಕರ್ಮ ಕೈಗೊಳ್ಳುವುದು. ನಾಲ್ಕನೆಯದು ಧರ್ಮಯುದ್ಧ ಹಾಗೂ ಗೋರಕ್ಷಣೆ ಮುಂತಾದವುಗಳಲ್ಲಿ ಮೃತ್ಯು. ಕುರುಕ್ಷೇತ್ರ ಮುಂತಾದ ಪ್ರಮುಖ ಪುಣ್ಯ ಸ್ಥಳಗಳು ಮತ್ತು ಏಳು ಪ್ರಧಾನ ಮೋಕ್ಷದಾಯಿನಿ ಕ್ಷೇತ್ರ (ಊರು)ಗಳಲ್ಲಿ ವಾಸ ಮಾಡುತ್ತಾ ಶರೀರ ತ್ಯಾಗ ಮಾಡುವುದು ಐದನೆಯದು. ಶಾಸ್ತ್ರಗಳಲ್ಲಿ ಪುಣ್ಯಸ್ಥಳಗಳ ಮಹಾತ್ಮೈಯನ್ನು ವಿಸ್ತಾರವಾಗಿ ತಿಳಿಸಿದ್ದಾರೆ.ಎಲ್ಲ ಕ್ಷೇತ್ರಗಳು ಉತ್ತಮ ಫಲ ಕೊಡುವ ಹಾಗೂ ಸೇವ್ಯ ಸ್ಥಳಗಳಾಗಿದ್ದರೂ ತಮ್ಮ ವೈಶಿಷ್ಟ್ಯದಿಂದ ಈ ಊರುಗಳು (ಪುರಿಗಳು) ಹೆಚ್ಚು ಪ್ರಸಿದ್ಧಿ ಹೊಂದಿವೆ. ಅಯೋಧ್ಯೆ, ಮಥುರಾ,ಮಾಯಾ (ಹರಿದ್ವಾರ), ಕಾಶೀ, ಕಾಂಚೀ, ಅವಂತಿಕಾ ದ್ವಾರಾವತೀ,- ಇವು ಏಳು ಸ್ಥಳಗಳು ಮೋಕ್ಷ ಪ್ರಧಾನಕ್ಷೇತ್ರಗಳಾಗಿವೆ. ಆದ್ದರಿಂದಲೇ ಗರುಡ ಪುರಾಣದಲ್ಲಿ :-

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ।
ಪುರೀ ದ್ವಾರಾವತೀ ಜ್ಞೇಯಾಃ ಸಪ್ತೈತಾ ಮೋಕ್ಷದಾಯಿಕಾಃ ॥

ಎಂದು ಹೇಳಿದೆ. ಭರತ ಖಂಡದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಧಾಮಗಳು ಇವೆ. ಉತ್ತರದಲ್ಲಿ ಬದರೀನಾಥ, ದಕ್ಷಿಣದಲ್ಲಿ ರಾಮೇಶ್ವರಮ್, ಪೂರ್ವದಲ್ಲಿ ಜಗನ್ನಾಥಪುರೀ ಹಾಗೂ ಪಶ್ಚಿಮದಲ್ಲಿ ದ್ವಾರಕಾಪುರೀ, ಈ ನಾಲ್ಕು ಧಾಮಗಳ ಯಾತ್ರೆಯಾದ ನಂತರವಷ್ಟೇ ತೀರ್ಥಯಾತ್ರೆ ಪೂರ್ಣಗೊಂಡಿತೆಂದು ಹೇಳುತ್ತಾರೆ.

ಒಮ್ಮೆ ಅಗಸ್ತ್ಯರು ಲೋಪಾಮುದ್ರೆಗೆ - ನಿಷ್ಪಾಪೆ!

ಯಾವ ಪುಣ್ಯ ಸ್ಥಳಗಳಿಗೆ ಸ್ನಾನ ಮಾಡುವುದರಿಂದ ಮನುಷ್ಯನಿಗೆ ಪರಮಗತಿ ಪ್ರಾಪ್ತವಾಗುತ್ತದೋ ಅಂತಹ ಮಾನಸ ತೀರ್ಥಗಳನ್ನು ವರ್ಣಿಸುತ್ತೇನೆ ಕೇಳು. ಯಾವ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಮನುಷ್ಯ ಪರಮಗತಿಯನ್ನು ಹೊಂದುತ್ತಾನೆಂಬುದನ್ನು ತಿಳಿದುಕೋ. ಸತ್ಯ, ಸಂಯಮ, ಕ್ಷಮೆ, ಎಲ್ಲ ಜೀವಿಗಳ ಬಗೆಗಿನ ದಯೆ, ಸರಳತೆ, ದಾನ, ಮನಸ್ಸಿನ ದಮನ, ಸಂತೋಷ, ಬ್ರಹ್ಮಚರ್ಯ, ಪ್ರಿಯಾಭಾಷಣ, ಜ್ಞಾನ,ದೃತಿ ಮತ್ತು ತಪಸ್ಸು ಇವು ಪ್ರತಿಯೊಂದು ಒಂದೊಂದು ಪುಣ್ಯ ತೀರ್ಥಗಳೇ, ಇವುಗಳಲ್ಲಿ ಬ್ರಹ್ಮಚರ್ಯ ಪರಮ ತೀರ್ಥ. ಮನಸ್ಸಿನ ಪರಮವಿಶುದ್ಧಿ ತೀರ್ಥಗಳಿಗೂ ಸಹ ತೀರ್ಥ. ನೀರಿನಲ್ಲಿ ಮುಳುಗೇಳುವುದು ಸ್ನಾನವಲ್ಲ. ಯಾರು ಇಂದ್ರೀಯ ಸಂಯಮ ರೂಪಿ ಸ್ನಾನ ಮಾಡಿದ್ದಾನೋ ಅವನೇ ಸ್ನಾತ, ಯಾರು ಚಿತ್ತಶುದ್ಧವಾಗಿದೆಯೋ ಅವನೇ ಪವಿತ್ರ.

ಯಾರು ದುರಾಸೆಉಳ್ಳವನೋ,ಕಳ್ಳ ಮೈಗಳ್ಳನೋ, ನಿರ್ದಯಿಯೋ ಮೋಸಗಾರನೋ,ವಿಷಯಾಸಕ್ತನೋ ಅವರು ಎಲ್ಲ ಪುಣ್ಯ ಕ್ಷೇತ್ರಗಳಲ್ಲಿ ಚೆನ್ನಾಗಿ ಸ್ನಾನ ಮಾಡಿದರೂ ಸಹ ಪಾಪಿಯೋ ಮತ್ತು ಕೊಳಕನೇ, ಶರೀರದ ಕೊಳಕನ್ನು ಕಳೆಯುವುದರಿಂದ ಮನುಷ್ಯ ಶುದ್ಧನಾಗುವುದಿಲ್ಲ. ಮನಸ್ಸಿನ ಕೊಳಕನ್ನು ಹೋಗಲಾಡಿಸಿಕೊಂಡ ಮೇಲೆಯೇ ಒಳಗಿನ ನಿರ್ಮಲತೆ ಉಂಟಾಗುತ್ತದೆ. ಜಲಚರಗಳು (ಜಂತುಗಳು) ನೀರಿನಲ್ಲಿಯೇ ಹುಟ್ಟಿ ನೀರಿನಲ್ಲಿಯೇ ಸಾಯುತ್ತವೆ. ಆದರೆ ಅವು ಸ್ವರ್ಗಕ್ಕೆ ಹೋಗುವುದಿಲ್ಲ. ಅವುಗಳ ಮನಸ್ಸಿನ ಮಲಿನತೆ ತೊಳೆದಿರುವುದಿಲ್ಲ. ವಿಷಯಗಳಲ್ಲಿ ಅತ್ಯಂತ ಪ್ರೀತಿಯೋ ಮನಸ್ಸಿನ ಮಲ (ಕೊಳಕು) ವಿಷಯಗಳಿಂದ ವೈರಾಗ್ಯವೇ ನಿರ್ಮಲತೆ. ಚಿತ್ತ ಒಳಗಿನ ವಸ್ತು, ಅದು ಕೊಳಕಾಗಿದ್ದಾಗ ಕೇವಲ ಪುಣ್ಯಸ್ನಾನದಿಂದ ಶುದ್ಧವಾಗಲಾರದು. ಇದು ಮದ್ಯದ (ಹೆಂಡ) ಗಡಿಗೆಯನ್ನು ನೂರು ಸಲ ತೊಳೆದರೂ ಅದು ಅಪವಿತ್ರವಾದಂತೆಯೇ. ಅದರಂತೆ ಮನಸ್ಸಿನ ಭಾವ ಶುದ್ಧವಾಗುವವರೆಗೆ ಅವನಿಗೆ ದಾನ, ಯಜ್ಞ, ಶೌಚ, ತಪಸ್ಸು, ತೀರ್ಥ ಸೇವನೆ ಮತ್ತು ಸ್ವಾಧ್ಯಾಯ ಮುಂತಾದುವೆಲ್ಲವೂ ಅತೀರ್ಥವೇ-ಅಪವಿತ್ರವೇ. ಇಂದ್ರೀಯಗಳ ಸಂಯಮಿಯಾದವನು ಎಲ್ಲಿ ಇದ್ದರೂ ಅದು ಅವನಿಗೆ ಕುರುಕ್ಷೇತ್ರ, ನೈಮಿಷಾರಣ್ಯ ಮತ್ತು ಪುಷ್ಕರದಿಂದ ಪುಣ್ಯ ಕ್ಷೇತ್ರಗಳೇ, ಧ್ಯಾನದಿಂದ ವಿಶುದ್ಧನಾಗಿ, ರಾಗದ್ವೇಷಾಧಿ ಕೊಳಕನ್ನು ನಾಶ ಮಾಡುವ ಜ್ಞಾನ ಜಲದಲ್ಲಿ ಸ್ನಾನ ಮಾಡುವವನು ಪರಮಪಾವನ ಗತಿಯನ್ನು ಹೊಂದುತ್ತಾನೆ.

ಶೃಣು ತೀರ್ಥಾನಿ ಗದತೋ ಮಾನಸಾನಿ ಮ ಮಾನಘೇ।
ಮೇಷು ಸಮ್ಯಜನರಃ ಸ್ನಾತ್ವಾ ಪ್ರಯಾತಿ ಪರಮಾಂ ಗತಿಮ್॥
ಸಾತ್ಯಂ ತೀರ್ಥಂ ಕ್ಷಮಾತೀರ್ಥಂ ತೀರ್ಥ ಮಿಂದ್ರಿಯನಿಗ್ರಹಃ।
ಸರ್ವಭೂತದಯಾ ತೀರ್ಥಂ ತೀರ್ಥಮಾರ್ಜವಮೇವ ಚ ॥
ದಾನಂ ತೀರ್ಥಂ ದಮಸ್ತೀರ್ಥಂ ಸಂತೋಷ ಸ್ತೀರ್ಥಮುಚ್ಯತೇ।
ಬ್ರಹ್ಮ ಚರ್ಯಂ ಪರಂ ತೀರ್ಥಂ ತೀರ್ಥಂಚ ಪ್ರಿಯವಾದಿತಾ ॥
ಜ್ಞಾನಂ ತೀರ್ಥಂ ಧೃತಿ ಸ್ತೀರ್ಥಂ ತಪಸ್ತೀರ್ಥಮುದಾಹೃತಮ್।
ತೀರ್ಥಾನಾಮಾಪಿ ತತ್ತೀರ್ಥಂ ವಿಶುದ್ಧಿ ರ್ಮನಸಃಪರಾ॥

...................................................................................

...................................................................................

ನಿಗ್ರಹೀತೇಂದ್ರಿಯಗ್ರಾಮೋ ಯತ್ರೈವ ಚ ವಸೇನ್ನರಃ
ತತ್ರ ತಸ್ಯ ಕುರುಕ್ಷೇತ್ರಂ ನೈಮಿಷಂ ಪುಷ್ಕರಾಣಿಚ ॥
ಧ್ಯಾನಪೂತೇ ಜ್ಞಾನ ಜಲೇ ರಾಗದ್ವೇಷ ಮಲಾಪಹೇ।
ಯಃ ಸ್ನಾನತಿ ಮಾನಸೇ ತೀರ್ಥೆ ಸಯಾತಿ ಪರಮಾಂ ಗತಿಮ್॥

ವೇದ ಪುರಾಣಗಳು ಮತ್ತು ಧರ್ಮಶಾಸ್ತ್ರಗಳಲ್ಲಿ ಸಂಸ್ಕಾರಗಳ ಅವಶ್ಯಕತೆಯನ್ನು ತಿಳಿಸಲ್ಪಟ್ಟಿದೆ. ಗಣಿಯಿಂದ ಚಿನ್ನ, ಬೆಳ್ಳಿ, ವಜ್ರ ಮುಂತಾದವನ್ನು ತೆಗೆದು ಮೇಲೆ ಅವು ಹೊಳೆಯಲು, ಪಳಗುಟ್ಟಲು ಹಾಗೂ ಸೌಂದರ್ಯಕ್ಕಾಗಿ ಅವುಗಳನ್ನು ಬೆಂಕಿಯಲ್ಲಿ ಕಾಯಿಸಿ - ಕುಟ್ಟಿ ಕೊಳೆಯನ್ನು ತೆಗೆದು ಕಾಂತಿಯುಕ್ತವಾಗಿ ಮಾಡಬೇಕೋ ಅದರಂತೆಯೇ ಮನುಷ್ಯನಲ್ಲಿ ಮಾನವೀಯ ಶಕ್ತಿ ಸ್ಫುರಿಸಲು (ಹೆಪ್ಪುಗಟ್ಟಲು) ಅವನು ಸುಸಂಸ್ಕೃತನಾಗುವುದು ಅವಶ್ಯ, ಅಂದರೆ, ಅವನನ್ನು ಸಂಪೂರ್ಣವಾಗಿ ವಿಧಿಪೂರ್ವಕ ಸಂಸ್ಕಾರ ಸಂಪನ್ನನಾಗುವಂತೆ ಮಾಡಬೇಕು. ವಾಸ್ತವವಾಗಿ ವಿಧಿಪೂರ್ವಕ ಸಂಸ್ಕಾರ ಸಾಧನಗಳಿಂದ ದಿವ್ಯ ಜ್ಞಾನವನ್ನುಂಟು ಮಾಡಿ ಆತ್ಮವನ್ನು ಪರ ಮಾತ್ಮನ ರೂಪದಲ್ಲಿ ಪ್ರತಿಷ್ಠಾಪಿಸುವುದೇ ಮುಖ್ಯ ಸಂಸ್ಕಾರ. ಮನುಷ್ಯ ಜೀವನವನ್ನು ಹೊಂದಿದ ಸಾರ್ಥಕತೆಯೂ ಸಹ ಇದರಲ್ಲಿಯೇ ಇದೆ.

ಸಂಸ್ಕಾರಗಳಿಂದ ಆತ್ಮ - ಅಂತಃಕರಣ ಶುದ್ಧವಾಗುತ್ತದೆ. ಸಂಸ್ಕಾರ ಮನುಷ್ಯನನ್ನು ಪಾಪ ಮತ್ತು ಅಜ್ಞಾನದಿಂದ ದೂರವಿರಿಸಿ ಆಚಾರ-ವಿಚಾರ ಮತ್ತು ಜ್ಞಾನ - ವಿಜ್ಞಾನದಿಂದ ಬೆಸೆಯುತ್ತದೆ. ಪ್ರಮುಖವಾಗಿ ಎರಡು ರೀತಿಯ ಸಂಸ್ಕಾರಗಳಿವೆ. 1)ಮಲಾಪನಯನ ಮತ್ತು 2)ಅತಿಶಯಾಧಾನ, ಯಾವುದೇ ಕನ್ನಡಿ (ಗಾಜು) ಮುಂತಾದವುಗಳ ಮೇಲೆ ಬಿದ್ದ ಧೂಳು,ಸಾಮಾನ್ಯ ಕೊಳೆಯನ್ನು ವಸ್ತ್ರ ಇತ್ಯಾದಿಗಳಿಂದ ಒರೆಸುವುದು, ಸ್ವಚ್ಛಗೊಳಿಸುವುದನ್ನು ಮಲಾಪನಯನ ಎಂದೆನ್ನುತ್ತಾರೆ.

ಯಾವುದೇ ಬಣ್ಣ ಅಥವಾ ಕಾಂತಿಯುಳ್ಳ ಪದಾರ್ಥಗಳ ಮೂಲಕ ಅದೇ ಗಾಜು / ಕನ್ನಡಿಯನ್ನು ವಿಶೇಷವಾಗಿ ಹೊಳೆಯುವಂತೆ ಪ್ರಕಾಶಿಸುವಂತೆ) ಮಾಡುವುದೇ ಅತಿಶಯಾಧಾನ ಎನಿಸಿಕೊಳ್ಳುತ್ತದೆ. ಬೇರೆ ಮಾತುಗಳಲ್ಲಿ ಇದನ್ನು ಹೇಳುವುದಾದರೆ ಭಾವನೆ, ಪ್ರತಿ ಯತ್ನ ಅಥವಾ ಗುಣಾಧಾನ ಸಂಸ್ಕಾರ ಎನ್ನಬಹುದು. ಸಂಸ್ಕಾರಗಳೆಷ್ಟು ಎನ್ನುವ ಬಗ್ಗೆ ವಿದ್ವಾಂಸರಲ್ಲಿ ಮೊದಲಿನಿಂದಲೂ ಭಿನ್ನಾಭಿಪ್ರಾಯಗಳಿವೆ. ಗೌತಮಸ್ಮೃತಿಯಲ್ಲಿ 48 ಸಂಸ್ಕಾರಗಳನ್ನು ಹೇಳುತ್ತಾರೆ. ಮಹರ್ಷಿ ಗೌತಮ ಸ್ಮೃತಿಯಲ್ಲಿ 48 ಸಂಸ್ಕಾರಗಳನ್ನು ಹೇಳುತ್ತಾರೆ. ಮಹರ್ಷಿ ಅಂಗೀರಸರು 25 ಸಂಸ್ಕಾರಗಳನ್ನು ನಿರ್ದೇಶಿಸಿದ್ದಾರೆ. ಪುರಾಣಗಳಲ್ಲಿಯೂ ಸಹ ಬೇರೇ ಸಂಸ್ಕಾರಗಳ ಉಲ್ಲೇಖಗಳಿವೆ. ಆದರೆ ಅವುಗಳಲ್ಲಿ ಪ್ರಧಾನವಾಗಿ ಷೋಡಶ ಸಂಸ್ಕಾರಗಳನ್ನು ಪ್ರಮುಖವಾಗಿ ಆಚರಿಸುತ್ತಾರೆ. ಮಹರ್ಷಿ ವ್ಯಾಸರ ಮೂಲಕ ಪ್ರತಿಪಾದಿತವಾದ ಪ್ರಧಾನ ಷೋಡಶ ಸಂಸ್ಕಾರಗಳು ಇಂತಿವೆ:

ಗರ್ಭಾದಾನಂ ಪುಂಸವನಂ ಸೀಮಂತೋ ಜಾತ ಕರ್ಮ ಚ।
ನಾಮ ಕ್ರಿಯಾನಿಷ್ಕ್ರಮಣೇನ್ನಾಶನಂ ವಪನ ಕ್ರಿಯಾಃ॥
ಕರ್ಣವೇಧೋ ವ್ರತಾದೇಶೋ ವೇದಾರಂಭ ಕ್ರಿಯಾವಿಧಿಃ।
ಕೇಶಾಂತಃ ಸ್ನಾನಮುದ್ವಾಹೋ ವಿವಾಹಾಗ್ನಿ ಪರಿಗ್ರಹಃ;
ತ್ರೇತಾಗ್ನಿಸಂಗ್ರಹಶ್ಚೇತಿ ಸಂಸ್ಕಾರಾಃ ಷೋಡಶ ಸ್ಮೃತಾಃ॥

ಗರ್ಭಾದಾನ,ಪುಂಸವನ,ಸೀಮಂತೋನ್ನಯನ, ಜಾತ ಕರ್ಮ, ನಾಮಕರಣ, ನಿಷ್ಕ್ರಮಣ,ಅನ್ನಪ್ರಾಶನ ವಪನ ಕ್ರಿಯೆ (ಚೂಡಾಕರನ),ಕರ್ಣವೇಧ,ವ್ರತಾದೇಶ (ಉಪನಯನ), ವೇದಾರಂಭ, ಕೇಶಾಂತ (ಗೋದಾನ), ವೇದಸ್ನಾನ (ಸಮಾವರ್ತನ), ವಿವಾಹ, ವಿವಾಹಾಗ್ನಿ ಪರಿಗ್ರಹ, ತ್ರೇತಾಗ್ನಿ ಸಂಗ್ರಹ. ಇವುಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳಬಹುದು. ಇದರ ಪ್ರಾರಂಭ ಹುಟ್ಟುವ ಮೊದಲಿನಿಂದಲೇ ಆರಂಭವಾಗುತ್ತದೆ. ಇನ್ನು ಹೆಚ್ಚಿನ ತಿಳುವಳಿಕೆಗೆ ನಾವು ಗೃಹ್ಯಸೂತ್ರಗಳು, ಮನು ಮುಂತಾದ ಸ್ಮೃತಿಗಳೊಂದಿಗೆ ಪುರಾಣಗಳನ್ನು ಸಹ ಗಂಭೀರವಾಗಿ ಅವಲೋಕನ, ಅಧ್ಯಯನಮಾಡಬೇಕು.

ವಿಧಿಪೂರ್ವಕ ಸಂಸ್ಕಾರದಿಂದ ಕೂಡಿದ ಗರ್ಭಾದಾನದಿಂದ ಒಳ್ಳೆಯ ಮತ್ತು ಯೋಗ್ಯ ಸಂತಾನ ಪ್ರಾಪ್ತಿಯಾಗುತ್ತದೆ. ಈ ಸಂಸ್ಕಾರದಿಂದ ವೀರ್ಯಸಂಬಂಧಿತ ಹಾಗೂ ಗರ್ಭ ಸಂಬಂಧಿತ ಪಾಪಗಳು ಕಳೆಯುತ್ತವೆ. ದೋಷಮಾರ್ಜನ ಮತ್ತು ಕ್ಷೇತ್ರ ಸಂಸ್ಕಾರವಾಗುತ್ತದೆ. ಇದೇ ಗರ್ಭಾದಾನ ಸಂಸ್ಕಾರದ ಫಲ -

- (ಸಶೇಷ)

ತಿರುಮಲ ತಿರುಪತಿ ದೇವಸ್ಥಾನಗಳು

'ಸಪ್ತಗಿರಿ' ಸ್ವರ್ಣೋತ್ಸವ ಸಂಚಿಕೆಯ ವ್ಯಾಸಗಳಿಗೆ ಆಹ್ವಾನ!!





ತಿರುಮಲೆ ತಿರುಪತಿ ದೇವಸ್ಥಾನವು ಆಧ್ಯಾತ್ಮಿಕ ಸಚಿತ್ರಮಾಸ ಪತ್ರಿಕೆ "ಸಪ್ತಗಿರಿ". ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೇಂಕಟೇಶ್ವರ ಸ್ವಾಮಿಯ ವೈಭವವನ್ನು, ತಿರುಮಲೆ ಕ್ಷೇತ್ರದ ದಿವ್ಯತ್ವವನ್ನು ಪ್ರತಿ ತಿಂಗಳು ಪಾಠಕರಿಗಾಗಿ "ಸಪ್ತಗಿರಿ"ಯು ನೀಡುತ್ತಿದೆ. ಆರು ಭಾಷೆಗಳಲ್ಲಿ ಪ್ರಚುರಣೆಗೊಳ್ಳುತ್ತಿರುವ ಆಧ್ಯಾತ್ಮಿಕ ಧಾರ್ಮಿಕ ಪತ್ರಿಕೆಗಳಲ್ಲಿ ಒಂದಾಗಿದೆ. ಈ ಪತ್ರಿಕೆಯು ಜಿಜ್ಞಾಸೆಯುಳ್ಳವರಿಗೆ,ಮಹಿಳೆಯರಿಗೆ, ಬಾಲರರಿಗೆ... ಹೀಗೆ ತಾರತಮ್ಯವಿಲ್ಲದೆ ಎಲ್ಲರಿಗೂ ಉಪಯುಕ್ತವಿರುವ ಪತ್ರಿಕೆ ಇದು. "ಸಪ್ತಗಿರಿ" ಪಾಠಕರೆಲ್ಲರ ಗೌರವವನ್ನು ಪಡೆದಿದೆ. ಕಾಲ ಪ್ರವಾಹದಲ್ಲಿ ಪುರೋಭಿವೃದ್ಧಿಯ ಕಡೆಗೆ ಕಾಲಿಡುತ್ತಿದೆ. ಈ ಸಂದರ್ಭವಾಗಿ "ಸಪ್ತಗಿರಿ" ಮಾಸಪತ್ರಿಕೆಯನ್ನು ಸ್ವರ್ಣೋತ್ಸವ ಪ್ರತ್ಯೇಕ ಸಂಚಿಕೆಯಾಗಿ ಪ್ರಚುರಿಸಬೇಕೆಂದುಕೊಳ್ಳುತ್ತಿದೆ ಸಪ್ತಗಿರಿ. ಪಾಠಕರಿಂದ ಸಪ್ತಗಿರಿ ಮಾಸಪತ್ರಿಕೆಯ ಬಗ್ಗೆ ತಮ್ಮ ಅನುಭೂತಿಯನ್ನು ತಮ್ಮ ರಚನೆಗಳ ರೂಪದಲ್ಲಿ ಕಳಿಸಬೇಕಾಗಿ ಕೋರಲಾಗಿದೆ. ಅದನ್ನು ಪರಿಶೀಲಿಸಿ "ಸಪ್ತಗಿರಿ"ಯಲ್ಲಿ ಪ್ರಚುರಿಸಲಾಗುತ್ತದೆ.

**ನಿಮ್ಮ ರಚನೆಗಳನ್ನು ಅಂಚೆ ಮೂಲಕ ಕಳುಹಿಸಬೇಕಾದ ವಿಳಾಸ :**

ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್ ಕಾಂಪೌಂಡ್, ಕೆ.ಟಿ. ರಸ್ತೆ , ತಿರುಪತಿ - 517507.

ಕನ್ನಡದಲ್ಲಿ ಡಿ.ಟಿ.ಪಿ. ಮಾಡಿ ಮೇಯಿಲ್ ಮುಖಾಂತರ ಕಳುಹಿಸುವವರು ಅನು ಫಾಂಟ್ಸ್( ಅಥವಾ) ಎಂ.ಎಸ್. ವರ್ಡ್‌ನಲ್ಲಿ ಯೂನೀಕೋಡ್ ಫಾಂಟ್‌ನಲ್ಲಿ ಟೈಪ್ ಮಾಡಿದ ಫೈಲ್ ಅನ್ನು ಪಿ.ಡಿ.ಎಫ್.ಮಾಡಿ **kannadasapthagiri 50 years @ gmail.com** ಎನ್ನುವ ಮೇಯಿಲ್‌ಗೆ ಕಳುಹಿಸಬೇಕಾಗಿ ಕೋರಲಾಗಿದೆ.

# ಮಾಂಡೂಕ್ಯೋಪನಿಷತ್

- ಶ್ರೀಮತಿ. ಎ. ಗೀತ ವೀರರಾಘವನ್

ಮಾಂಡೂಕ್ಯೋಪನಿಷತ್ ಬಹಳ ಚಿಕ್ಕದು. ಇದರಲ್ಲಿ ಹನ್ನೆರಡು ಮಂತ್ರಗಳು ಮಾತ್ರ ಇವೆ. ಈ ಉಪನಿಷತ್ತು ಅಥರ್ವ ವೇದಕ್ಕೆ ಸೇರಿದೆ. ಈ ಉಪನಿಷತ್ತನ್ನು ಸಾಕ್ಷಾತ್ಕರಿಸಿರುವವರು ಮಂಡೂಕ ಮಹರ್ಷಿಗಳ ಸುಪುತ್ರರು. ಈ ಉಪನಿಷತ್ತಿನಲ್ಲಿ ಜಾಗೃತ,ಸ್ವಪ್ನ, ಸುಷುಪ್ತಿ ಮತ್ತು ತುರೀಯ ಎಂಬ ನಾಲ್ಕು ಅವಸ್ಥೆಗಳು ಆತ್ಮಕ್ಕೆ ಉಂಟೆಂದು ಪ್ರತಿಪಾದಿಸಿದೆ. ಈ ನಾಲ್ಕು ಅವಸ್ಥೆಗಳ ವರ್ಣನೆ ಒಂದೇ ಕಡೆ ಬರುವುದು ಈ ಉಪನಿಷತ್ತಿನಲ್ಲಿ ಮಾತ್ರವೇ. ಈ ನಾಲ್ಕು ಅವಸ್ಥೆಗಳು ನಾಲ್ಕು ವ್ಯೂಹಗಳಾದ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ. ಇವುಗಳಿಗೆ ಸಂವಾದಿಯಾಗಿವೆ.ಈ ಉಪನಿಷತ್ತಿನಲ್ಲಿ ಈ ಲೋಕದಲ್ಲಿರುವ ಸಮಸ್ತವೂ ಓಂಕಾರವೇ ಎಂದು ಪ್ರತಿಪಾದಿಸಿದೆ. ಪ್ರಣವವು ಚೇತನ ಮತ್ತು ಅಚೇತನಗಳನ್ನುಳ್ಳ ಸಮಸ್ತ ಜಗತ್ತಾಗಿದೆ. ಶ್ರೀರಂಗರಾಮಾನುಜ ಮುನಿಗಳ ವ್ಯಾಖ್ಯಾನದ ಪ್ರಕಾರ ಈ ಉಪನಿಷತ್ತಿನ ೧೨ ಮಂತ್ರಗಳನ್ನು ನಾಲ್ಕು ಖಂಡಗಳು ಅಥವಾ ಭಾಗಗಳಾಗಿ ವಿಭಾಗ ಮಾಡಲಾಗಿದೆ. ಈ ಉಪನಿಷತ್ತಿನಲ್ಲಿ ಹೇಳಿರುವ ತತ್ವ ವಿಚಾರವನ್ನು ಗೌಡ ಪಾದರು ತಮ್ಮ ಕಾರಿಕೆಗಳಲ್ಲಿ ವರ್ಣಿಸಿದ್ದಾರೆ. ಈ ಉಪನಿಷತ್ತಿನಲ್ಲಿ ಪರಬ್ರಹ್ಮನನ್ನು ಎಲ್ಲಕ್ಕೂ ಈಶ್ವರನು, ಎಲ್ಲವನ್ನೂ ತಿಳಿದವನು, ಎಲ್ಲರ ಒಳಗೂ ಅಂತರ್ಯಾಮಿಯಾಗಿರುವವನು,ಇಲ್ಲಿರುವ ಸಮಸ್ತಕ್ಕೂ ಕಾರಣನು.ಸಮಸ್ತ ಪ್ರಾಣಿಗಳ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯಗಳಿಗೆ ಕಾರಣನೆಂದು ನಿರೂಪಿಸಿದೆ.

ಮೊದಲನೆಯ ಪಾದದಲ್ಲಿ ವೈಶ್ವಾನರನು ಜಾಗೃತ್ ಅವಸ್ಥೆಯ ನಿರ್ವಾಹಕನೆಂದು ನಿರೂಪಿಸಿದೆ.ಎರಡನೆಯ ಪಾದ ತೈಜಸ.ಇಲ್ಲಿ ಸ್ವಪ್ನಾವಸ್ಥೆಯ ನಿರೂಪಣೆ ಇದೆ. ಸ್ವಪ್ನಾವಸ್ಥೆಯಲ್ಲಿ ಕಂಡು ಬರುವ ಪದಾರ್ಥಗಳು ಬೇರೆಯವರಾನುಭವಕ್ಕೆ ಬರುವುದಿಲ್ಲ. ಈ ಸ್ವಪ್ನಾವಸ್ಥೆಯ ಅನುಭವವನ್ನು ನಿರ್ವಾಹ ಮಾಡುವವನು ಪ್ರದ್ಯುಮ್ನ,ಸ್ವಪ್ನಾಸ್ಥೆಯ ಪದಾರ್ಥಗಳನ್ನು ಭಗವಂತನು ಆ ಸ್ವಪ್ನ ಕಾಲದಲ್ಲಿ ಮಾತ್ರ ಇರುವಂತೆ ಸೃಷ್ಟಿಸುತ್ತಾನೆ.ಈ ಸ್ವಪ್ನ ಪದಾರ್ಥಗಳನ್ನೂ ಆಯಾ ಜೀವಾತ್ಮರು ಸ್ವಪ್ನ ಕಾಲದಲ್ಲಿ ಮಾತ್ರ ಅನುಭವಿಸುತ್ತಾರೆ.

ಮೂರನೆಯ ಪಾದ ಸುಷುಪ್ತಿಯ ಅವಸ್ಥೆ. ಈ ಅವಸ್ಥೆಯಲ್ಲಿ ಜೀವಾತ್ಮನು ಗಾಢವಾದ ನಿದ್ರೆಯಲ್ಲಿರುತ್ತಾನೆ. ಯಾವುದೇ ಪದಾರ್ಥವನ್ನು ಇಚ್ಛಿಸುವುದಿಲ್ಲ ಮತ್ತು ಯಾವುದೇ ಸ್ವಪ್ನವನ್ನೂ ಕಾಣುವುದಿಲ್ಲ. ಈ ಅವಸ್ಥೆಯಲ್ಲಿ ಜೀವಾತ್ಮನು ಭಗವಂತನನ್ನು ಸೇರುತ್ತಾನೆ.ಆ ಭಗವಂತನು ಜೀವಾತ್ಮನಿಗೆ ಗಾಢನಿದ್ದೆಯ ಆನಂದವನ್ನು ಅನುಭವಿಸುವಂತೆ ಮಾಡುತ್ತಾನೆ. ಶುದ್ಧವಾದ ಮನಸ್ಸಿಗೆ ಗ್ರಾಹ್ಯನಾಗುವ ಪರಮಾತ್ಮನನ್ನು ಸೇರುತ್ತಾನೆ. ಪರಮಾತ್ಮನೇ ಸುಷುಪ್ತಾವಸ್ಥೆಯಲ್ಲಿ ಇರುತ್ತಾನೆ. ಈ ಸುಷುಪ್ತಿ ಕಾಲದಲ್ಲಿ ಜೀವಾತ್ಮನು ಲೋಕದಲ್ಲಿ ಸೃಷ್ಟಿ, ಪ್ರಳಯಗಳನ್ನು ನಡೆಸುವ ಪರಮಾತ್ಮನನ್ನು ಸೇರುತ್ತಾನೆ.ಈ ಸುಷುಪ್ತಿ ಅವಸ್ಥೆಯಲ್ಲಿ ಭಗವಂತನು ಜೀವಾತ್ಮನನ್ನು ತನ್ನೊಡನೆ ಸೇರಿಸಿಕೊಂಡು ಆನಂದಾನುಭವವನ್ನು ಕೊಡುತ್ತಾನೆ. ಜೀವಾತ್ಮನು ತಾನು ಬಹಳ ಸುಖವಾಗಿದ್ದನೆಂದು ಹೇಳುತ್ತಾನೆ. ಆದರೆ ತಾನು ಭಗವಂತನೊಡನಿದ್ದನೆಂದು ತಿಳಿಯುವುದಿಲ್ಲ. ತಾನು ಎಲ್ಲಿಗೆ ಹೋಗಿದ್ದೆ ಎಲ್ಲಿಂದ ಬಂದೆ ಎಂದು ತಿಳಿಯುವುದಿಲ್ಲ. ಆ ಸುಷುಪ್ತಿ ಸ್ಥಾನ ಭಗವಂತನ ಸ್ಥಾನ. ಇದನ್ನು ಪ್ರಾಜ್ಞನೆನ್ನುತ್ತಾರೆ.

ಈ ಮೂರು ಅವಸ್ಥೆಗಳು ಜಾಗೃತ್ (ವಿಶ್ವ), ಸ್ವಪ್ನ (ತೇಜಸ), ಸುಷುಪ್ತಿ (ಪ್ರಾಜ್ಞ) ಭಗವಂತನ ಮೂರು ವ್ಯೂಹಗಳಾಗಿವೆ. (ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ).

ನಾಲ್ಕನೆಯ ಅವಸ್ಥೆಯು ಆತ್ಮನನ್ನೇ ಹೇಳುತ್ತದೆ. ಆತ್ಮನು ಇಂದ್ರಿಯ ಗೋಚರನಲ್ಲ.ಈ ವ್ಯೂಹ ವಾಸುದೇವನನ್ನು ಉಪಾಸನೆ ಮಾಡಬೇಕಾದರೆ ಪರವಾಸುದೇವನ್ನೇ ಸಮಸ್ತ ಪ್ರಣವದ ರೂಪವಾಗಿ ಉಪಾಸಿಸಬೇಕು.

ಈ ವ್ಯೂಹಗಳ ವಿಷಯದಲ್ಲಿ ಎರಡು ಅಭಿಪ್ರಾಯವಿದೆ. ಕೆಲವರು ಮೂರು ವ್ಯೂಹಗಳೆನ್ನುತ್ತಾರೆ.ಕೆಲವರು ನಾಲ್ಕು ವ್ಯೂಹಗಳೆನ್ನುತ್ತಾರೆ.ವ್ಯೂಹವಾಸುದೇವನಿಗೂ ಪರವಾಸುದೇವನಿಗೂ ಅಂತರ ಬಹಳ ಕಡಿಮೆ ಇರುವುದರಿಂದ ಈ ರೀತಿ ಹೇಳುತ್ತಾರೆ.

ಈ ಉಪಾಸನೆಯ ಫಲವನ್ನು ಪರಮಾತ್ಮನ ಅನುಗ್ರಹದಿಂದ ಅವನನ್ನೇ ಪಡೆಯುವುದೇ ಈ ಉಪಾಸನೆಯ ಉದ್ದೇಶವಾಗಿರುವುದರಿಂದ ಪರಮಾತ್ಮನನ್ನೇ ಪಡೆಯುತ್ತಾನೆ ಎಂದು ಹೇಳಿದೆ.

ಹನ್ನೆರಡು ಮಂತ್ರಗಳನ್ನೊಳಗೊಂಡ ಈ ಉಪನಿಷತ್ತಿನಲ್ಲಿ ನಾಲ್ಕು ವ್ಯೂಹಗಳ ವರ್ಣನೆಗಳು,ಅವುಗಳು ಯಾವ ಯಾವ ಅವಸ್ಥೆಗಳಿಗೆ ಸಂಬಂಧಿಸಿದೆ ಮತ್ತು ಈ ನಾಲ್ಕು ಅವಸ್ಥೆಗಳಿಗೆ ಸಂಬಂಧಿಸಿದಂತೆ ಪರಮಾತ್ಮನಲ್ಲಿ ಮಾಡುವ ಉಪಾಸನೆಗಳು ಮತ್ತು ಅದರಿಂದ ಮಾನವರು ಪಡೆಯುವ ಮಹತ್ ಫಲವನ್ನು ಬಹಳ ಪ್ರಭಾವಕಾರಿಯಾಗಿ ವರ್ಣಿಸಲಾಗಿದೆ.


ತಿರುಮಲ ತಿರುಪತಿ ದೇವಸ್ಥಾನಗಳು
ತಿರುಮಲೆ
ಸ್ವಾಮಿಯವರ ಪವಿತ್ರೋತ್ಸವಗಳು
11-08-2019
ರಿಂದ
13-08-2019
ರ ವರೆಗೆ

# ತಿರುಮಲ ಸ್ವಾಮಿಯವರಿಗೆ 2019 ಜೂನ್ 14 ರಿಂದ 16 ರ ವರೆಗೆ ಅತ್ಯಂತ ವೈಭವವಾಗಿ ನಡೆದ ಜ್ಯೇಷ್ಠಾಭಿಷೇಕ ಮಹೋತ್ಸವ ದೃಶ್ಯಗಳು



## 2019 ಜೂನ್ 12 ರಿಂದ 16 ರ ವರೆಗೆ ಶ್ರೀನಿವಾಸ ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ತಿ.ತಿ.ದೇ. ನಿರ್ವಹಿಸಿದ ಬಾಲಾಲಯ, ಅಷ್ಟಬಂಧನ, ಮಹಾಸಂಪ್ರೋಕ್ಷಣ ದೃಶ್ಯಗಳು



ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರಿಗೆ, ಉಭಯದೇವಿಯರಿಗೆ ಸ್ನಪನ ತಿರುಮಂಜನ



ಅಷ್ಟಬಂಧನ ಲೇಪ್ಯವನ್ನು ಒನಕೆಯೊಂದಿಗೆ ಕುಟ್ಟಿ ಸಿದ್ಧಗೊಳಿಸುತ್ತಿರುವ ದೃಶ್ಯ



ಪವಿತ್ರ ಜಲಗಳೊಂದಿಗೆ ತಿ.ತಿ.ದೇ. ಅರ್ಚಕ ವೃಂದ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ



ಮಹಾಶಾಂತಿ ಅಭಿಷೇಕ



ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಗರ್ಭಾಲಯ ಶಿಖರ ಮಹಾಸಂಪ್ರೋಕ್ಷಣ ಕಾರ್ಯಕ್ರಮ



ಮಹಾಪೂರ್ಣಾಹುತಿ



ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯ
ಶ್ರೀನಿವಾಸ ಮಂಗಾಪುರಂ

# ಅಪ್ಪಲಾಯಿಗುಂಟದಲ್ಲಿ 13-06-2019 ರಿಂದ 21-06-2019 ರ ವರೆಗೆ ನಡೆದ ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವ ದೃಶ್ಯಗಳು



ಧ್ವಜಾರೋಹಣ



ಮುತ್ತಿನಚಪ್ಪರ ವಾಹನದಲ್ಲಿ ಉಭಯದೇವಿಯರೊಂದಿಗೆ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರು



ಕಲ್ಪವೃಕ್ಷ ವಾಹನದಲ್ಲಿ ಉಭಯ ದೇವಿಯರೊಂದಿಗೆ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರು



ಸರ್ವಭೂಪಾಲ ವಾಹನದಲ್ಲಿ ಶ್ರೀ ಪ್ರಸನ್ನವೆಂಕಟೇಶ್ವರ ಸ್ವಾಮಿಯವರು




ಹಂಸವಾಹನದಲ್ಲಿ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರು



ಸೂರ್ಯಪ್ರಭ ವಾಹನದಲ್ಲಿ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರು



ಅಪ್ಪಲಾಯಿಗುಂಟ ಪುರಬೀದಿಗಳಲ್ಲಿ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ರಥೋತ್ಸವ



# ಶ್ರೀ ಕೃಷ್ಣ ಜನ್ಮಾಷ್ಟಮಿ ತದಂಗವಾಗಿ ಈ ಚಿಂತನ ಬರಹ

- ಡಾ|| ಗುರುರಾಜ ಪೋಶೆಟ್ಟಿಪಳ್ಳಿ

ಶ್ರೀ ಕೃಷ್ಣ ಎಂದರೆ ಭಾರತೀಯ ಸಂಸ್ಕೃತಿಯ ಪೂರ್ಣ ರೂಪ. ಭಾರತೀಯ ಸಂಸ್ಕೃತಿಯ ಎಲ್ಲ ಆಯಾಮಗಳನ್ನೂ ಶ್ರೀ ಕೃಷ್ಣನ ತತ್ತ್ವ ಪ್ರಭಾವಿಸಿದೆ; ಸಾಹಿತ್ಯ - ಸಂಗೀತ - ಶಿಲ್ಪ ನೃತ್ಯ - ಚಿತ್ರ ರಾಜಕಾರಣ ತತ್ತ್ವಶಾಸ್ತ್ರ - ಹೀಗೆ ಭಾರತೀಯ ಜೀವನದ ಎಲ್ಲ ಆಯಾಮಗಳನ್ನು ಅವನಷ್ಟು ಸಮೃದ್ಧಗೊಳಿಸಿದವರು ಬೇರೊಬ್ಬರಿಲ್ಲ. ಶ್ರೀ ಕೃಷ್ಣ ಯುದ್ಧ ಭೂಮಿಯಲ್ಲಿ ಉಪದೇಶಿಸಿದ ಗೀತೆ ನಮ್ಮ ದೇಶದ ಆಧ್ಯಾತ್ಮಿಕತೆಗೇ ಬುನಾದಿಯಂತಿದೆ. ತಾಯಂದಿರು ಮಕ್ಕಳಿಗೆ ಹೇಳುವ ಕಥೆ ಕೃಷ್ಣನದೇ ಬಾಲ್ಯದ ಯಾವುದಾದರೊಂದು ಸಂಗತಿಗೆ ತಳುಕು ಹಾಕಿಕೊಂಡಿರುತ್ತದೆ; ಮಾತ್ರವಲ್ಲ, ಅವರ ಮಕ್ಕಳನ್ನು ಕೃಷ್ಣನನ್ನಾಗಿಯೂ ಭಾವಿಸಿಕೊಳ್ಳುತ್ತಾರೆ. ಎಲ್ಲ ತರುಣಿಯರ ಆದರ್ಶ ಪ್ರೇಮಿಯಾಗಿ ಕೃಷ್ಣನು ಕಂಡರೆ ಅಚ್ಚರಿಪಡಬೇಕಿಲ್ಲ; ಹಾಗೆಯೇ, ಸಂಕಷ್ಟದಲ್ಲಿರುವ ಸ್ತ್ರೀಯರ ರಕ್ಷಕನಾಗಿಯೂ ಅವನೇ ಕಾಣುತ್ತಾನೆ. ಮಿತ್ರನೊಬ್ಬನಿದ್ದರೆ ಕೃಷ್ಣನಂತೆ ಇರಬೇಕು; ನಮಗೆ ಬೆಳಕಾಗಬಲ್ಲ ಗುರುವೂ ಅವನೇ ಎಂದೂ ಅನಿಸದಿರದು.ರಾಜನೀತಿಯಲ್ಲಿ ಅವನಂಥ ಚತುರತೆ ದಕ್ಕಬೇಕೆಂದು ಯಾವ ರಾಜಕಾರಣಿ ತಾನೆ ಬಯಸದಿದ್ದಾನು? ಯೋಗಿಗಳಿಗೆ ಪರಮಯೋಗಿಯೂ, ಭೋಗಿಗಳಿಗೆ ಪರಮಸಖನಾಗಿಯೂ ಏಕಕಾಲದಲ್ಲಿ ಕಾಣಿಸಿಕೊಳ್ಳಬಲ್ಲವನು ಶ್ರೀಕೃಷ್ಣ. ಇಟ್ಟಿನಲ್ಲಿ ನಮ್ಮ ಜೀವನದ ಎಲ್ಲ ರೂಪ ಸ್ವರೂಪಗಳನ್ನು ಆವರಿಸಿರುವವನು ಅವನು.

## ಕೃಷ್ಣಕಥೆಗಳ ಮೂಲ

ಶ್ರೀ ಕೃಷ್ಣಕಥೆಯ ಮೂಲ ಆಕರಗಳೆಂದರೆ ಮಹಾಭಾರತ, ಭಾಗವತ ಮತ್ತು ಹರಿವಂಶ. ಈ ಮೂರು ಮಹಾಕೃತಿಗಳ ಕರ್ತೃ ವ್ಯಾಸಮಹರ್ಷಿಗಳು. ಭಾಗವತ ಮತ್ತು ಹರಿವಂಶಗಳಲ್ಲಿ ಪ್ರಧಾನವಾಗಿ ಶ್ರೀಕೃಷ್ಣನ ಬಾಲ್ಯದ ಘಟನೆಗಳು ನಿರೂಪಿತವಾಗಿವೆ; ಮಹಾಭಾರತದಲ್ಲಿ ಪ್ರೌಢಕೃಷ್ಣನನ್ನು ಕಾಣುತ್ತೇವೆ; ಅಲ್ಲಿ ಅವನು ರಾಜನೀತಿಜ್ಞನಾಗಿ, ಸಖನಾಗಿ, ಲೋಕಗುರುವಾಗಿ ಕಾಣಿಸಿಕೊಳ್ಳುತ್ತಾನೆ. ಶ್ರೀಕೃಷ್ಣನ ವಿಶ್ವರೂಪದರ್ಶನವಾಗಿರುವುದು ಮಹಾಭಾರತದಲ್ಲಿಯೇ, ಮಹಾಭಾರತದ ಭೀಷ್ಮಪರ್ವತದಲ್ಲಿ ಬಂದಿರುವ ಗೀತೆಯಂತೂ ಕೃಷ್ಣಜೀವನದ ಸೂತ್ರಗಳ ಸಂಗ್ರಹದಂತಿವೆ. ಜಗತ್ತಿನ ಚಿಂತನಪ್ರಸ್ಥಾನಕ್ಕೆ ಅದ್ಭುತ ಉಪದೇಶ ಸಂಗ್ರಹ. ಈ ಮಹಾಕೃತಿಯ ಬಗ್ಗೆ ಅಂದಿನಿಂದ ಇಂದಿನವರೆಗೂ ನೂರಾರು ಭಾಷ್ಯ-ವ್ಯಾಖ್ಯಾನಗಳು ಬಂದಿವೆ,ಬರುತ್ತಿವೆ. ಇದು ಕೃಷ್ಣ ಎನ್ನುವುದು ಶಾಶ್ವತ ಪ್ರಜ್ಞಾಪ್ರವಾಹದಂತಿದೆ ಎನ್ನುವುದಕ್ಕೆ ಸಾಕ್ಷ್ಯವಾಗಿದೆ. ಈ ಮೂರು ಕೃತಿಗಳ ಅನಂತರದಲ್ಲಿ ಬಂದ ಹತ್ತು ಹಲವು ಕೃತಿಗಳು ಕೃಷ್ಣತತ್ತ್ವದ ಹಲವು ರೂಪಗಳನ್ನು ಕಂಡರಿಸಿವೆ. ಗೀತಗೋವಿಂದ, ಶ್ರೀಕೃಷ್ಣ ಕರ್ಣಾಮೃತ, ದಾಸರ ಕೀರ್ತನೆಗಳು, ವಾಗ್ಗೇಯಕಾರರ ಕೃತಿಗಳಲ್ಲಿ ಕೃಷ್ಣನ ವ್ಯಕ್ತಿತ್ವ ಹರಳುಗಟ್ಟಿದೆ.

ಶ್ರೀಕೃಷ್ಣ ಹುಟ್ಟಿದ್ದು ರಾಜಮನೆತನದಲ್ಲಾದರೂ ಗೊಲ್ಲರ ಕೇರಿಯಲ್ಲಿ ಗೊಲ್ಲನಂತೆ ಬದುಕಬೇಕಾಯಿತು. ತಾನು ರಾಜಕುಮಾರ ಎಂದು ಅರಿತಿದ್ದರೂ ಕೃಷ್ಣನಿಗೆ ಗೊಲ್ಲರ ಕೇರಿಯಲ್ಲೆ ಇರುವುದು ಏನು ಕಷ್ಟ ಎನಿಸಲ್ಲಿ. ಗೊಲ್ಲಗೊಲ್ಲತಿಯರ ನಿರ್ಮಲ ಮುಗ್ಧ ಸ್ನೇಹಾಶ್ರಯದಲ್ಲಿ ಆನಂದವನ್ನು ಕಂಡುಕೊಂಡ. ಅವರಿಗೆ ಕಷ್ಟಕಾಲದ ಆಪದ್ಬಾಂಧವಣಾದ, ಸುಖದಲ್ಲಿ ಸರಸಗೆಳೆಯನಾದ, ಗಂಭೀರ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮಂತ್ರಿಯಾದ,'ವೇಣುಗೋಪಾಲ'ನಾಗಿ ಸರಸಸಂಗೀತದ ಹೊಳೆಯನ್ನೇ ಹರಿಯಿಸಿದ, ಗೋಪಗೋಪಿಯರ ಹೃದಯಗಳನ್ನು ಗೆದ್ದ, ಹಸು-ನವಿಲು-ಚರಾಚರಗಳನ್ನೆಲ್ಲ ಮುಟ್ರ ಮುಗ್ಧಗೊಳಿಸಿದ, ರಾಸನೃತ್ಯದ ಲೋಕೋತ್ತರ ಆನಂದವನ್ನು ಸೃಜಿಸಿದ.

ಯುದ್ಧ ಪೂರ್ವದಲ್ಲಿ ಸಂಧಾನದ ಯತ್ನವನ್ನೂ ಕೃಷ್ಣ ಮಾಡಿಸಿದ. ಆದರೆ ದುರ್ಯೋಧನನ ಆಗ್ರಹದಿಂದ ಯುದ್ಧ ನಿಶ್ಚಯವಾದಾಗ ಯುದ್ಧವಿಜಯದ ಹಾದಿಯಲ್ಲಿ ಪಾಂಡವರಿಗೆ ದಾರಿದೀಪವಾದ.ಯತ್ರ ಯೋಗೇಶ್ವರೋ ಕೃಷ್ಣ...ತತ್ರಶ್ರೀಃ ವಿಜಯಃ. ಎನ್ನುವ ವಿವೇಕವನ್ನು ಕಳೆದು ಕೊಂಡಿದ್ದ ದುರ್ಯೋ



ಧನನು ಕೃಷ್ಣನ ಸೇನಾ ಬಲವನ್ನಷ್ಟೇ ಕೋರಿಕೊಂಡಾಗ ಅದನ್ನು ಅವನಿಗೆ ಕೊಟ್ಟ.

ಆದರೆ ಕೇವಲ ಕೃಷ್ಣನ ಸಾಂಗತ್ಯವನ್ನಷ್ಟೇ ಬಯಸಿದ ಪಾಂಡವರಿಗೆ ಜೊತೆಗಾರನಾಗಿ, ಅರ್ಜುನನ ಸಾರಥಿಯಾಗಿ, ಯುದ್ಧದಲ್ಲಿ ಶಸ್ತ್ರವನ್ನೇ ಧರಿಸದೆಯೇ ಅದ್ವಿತೀಯ ಯಶಸೂತ್ರವಾಗಿ ಪಾಂಡವರಿಗೆ ಜಯವನ್ನು ದಕ್ಕಿಸಿಕೊಟ್ಟ! ಪಾಂಡವ ಸೈನ್ಯವು ಸಂಖ್ಯೆಯಲ್ಲಿ ದುರ್ಬಲವಾಗಿದ್ದರೂ ಬಲವತ್ತರವಾದ ಕೌರವ ಸೇನೆಯನ್ನು ನಾಶಮಾಡಲು ಕೃಷ್ಣನ ಸಮಯೋಚಿತ ಸಲಹೆ,ಮಾರ್ಗದರ್ಶನ ಹಾಗೂ ನಿರ್ಣಯಗಳೇ ಕಾರಣ. 'ಸಂಪನ್ಮೂಲಗಳಿಗಿಂತಲೂ ಕೌಶಲ - ಪರಿಶ್ರಮಗಳೇ ಹೆಚ್ಚು ಪರಿಣಾಮಕಾರಿ. ಎನ್ನುವ ಕೃಷ್ಣನ ದಕ್ಷ ನಾಯಕತ್ವ ಸಾರುತ್ತದೆ. ಹೀಗೆ ಯುದ್ಧವಾಗಲಿ ಸಂಧಾನವಾಗಲಿ ರಾಜ ತಂತ್ರವನ್ನರಿತು ಅಸಾಧಾರಣ ಜಾಣ್ಮೆಯನ್ನು ಮೆರೆದ ಅಪ್ರತಿಮ ರಾಜನೀತಿಜ್ಞ ಶ್ರೀ ಕೃಷ್ಣ!

ಕರ್ತವ್ಯ, ಮಾನವೀಯತೆ, ಧರ್ಮ ಸ್ಥಾಪನಾದೀಕ್ಷೆ, ದುಷ್ಟನಿಗ್ರಹ,ವಿದ್ವತ್ಪ್ರೀತಿ,ಸರ್ವಜನಾನುರಾಗ,ಸರಸ ಸಂತೋಷ ಭಾವ, ಗೀತನೃತ್ಯ ವಿನೋದ, ಮುನಿಜನಸ್ನೇಹ, ಉನ್ನತ ತತ್ವ ಚಿಂತನೆ..ಹೀಗೆ ನಾನಾ ಜೀವನ ಧರ್ಮರಂಗಗಳನ್ನು ಸಾರ್ಥಕವಾಗಿ ನಿರ್ವಹಿಸಿ ಆದರ್ಶಪ್ರಾಯ ಈ ಯಶೋಧಾಸುತ, ಶ್ರೀಕೃಷ್ಣ.

ಶ್ರೀ ಕೃಷ್ಣನೆಂಬ ದೇವರು, ಹಾಡುಕುಣಿತಗಳೊಂದಿಗೆ ಇಳಿದು ಬಂದವನಿರಬೇಕು. ಈ ಪರಿಯ ಸೊಬಗು ಬೇರಾವ ದೇವರಲಿ ಕಾಣೆ.ಗೋಪಿಕೆಯರೊಡನೆ ಉತ್ಕಟವಾಗಿ ರಸ ಸಮಾಧಿಯನ್ನು ಅನುಭವಿಸುತ್ತಿರುವವನೆಂಬಂತೆ ರಾಸನೃತ್ಯ ವಾಡಿದ. ಒಂದು ಹಂತದಲ್ಲಿ ಗೋಪಿಕೆಯರಿಗೆ, ಇವನು ನಮ್ಮ ಕೈಗೆ ಸಿಕ್ಕಿದ, ಇನ್ನು ಬೇಕಾದಂತೆ ಇವನನ್ನು ಕುಣಿಸಬಲ್ಲೆವು ಅನಿಸಿತು. ಇದರಿಂದ ಅದುವರೆಗಿನ ಅಹಂಕಾರವನ್ನೆಲ್ಲ ಮೀರಿ ನಿಂತ ನೃತ್ಯ ಸಂದರ್ಭಕ್ಕೇ ಅಪಚಾರವಾಯಿತು. ಕೃಷ್ಣ ಅದೃಶ್ಯನಾಗಿಬಿಟ್ಟ. ತತ್‌ಕ್ಷಣ ಗೋಪಿಕೆಯರಿಗೆ ತಮ್ಮ ತಪ್ಪು ಅರಿವಾಯಿತು. ಪಶ್ಚಾತ್ತಾಪ, ವಿರಹ ತೀವ್ರವಾಗಿ ಅವರನ್ನು ಕಾಡಿತು. ಬದುಕೇ ಬೇಡವಾಯಿತು. ಆದರೆ ಇಂಥ ವಿರಹಾನುಭವವೂ ಆಳದಲ್ಲಿ ಒಂದು ರಸಸ್ಥಿತಿ. ಭಗವಂತನ ವಿರಹವೂ ಭಗವಂತನ ಅನುಭವವೇ...

ಶ್ರೀ ಕೃಷ್ಣನನ್ನು ನೆನೆದರೆ ಕಷ್ಟ ಒಂದಿಷ್ಟಿಲ್ಲ. ಹೌದು ಆತನ ನೆನಪೇ ಮಧುರ, ಅಮರ, ತುಂಟನಾಗಿ, ಪ್ರೇಮಿಯಾಗಿ ರಕ್ಕಸರ ಪಾಲಿಗೆ ಯಮನಾಗಿ ಭಕ್ತರ ಪಾಲಿಗೆ ಆರಾಧ್ಯ ದೈವನಾಗಿ, ಕಾವ್ಯ ಪ್ರಿಯರಿಗೆ ವರದಾನವಾಗಿ,ಭಕ್ತರ ಪಾಲಿಗೆ ರಕ್ಷಕನಾಗಿ ಭೂಮಂಡಲದ ಅಧಿಪತಿಯಾದವನೇ ಶ್ರೀಕೃಷ್ಣ. ವರಾಹ, ಕೂರ್ಮ, ಮತ್ಸ್ಯ, ವಾಮನ, ಪರಶುರಾಮ, ನರಸಿಂಹ, ರಾಮ, ಬುದ್ಧ, ಕಲ್ಕಿ ಎಂಬ ದಶಾವತಾರ ತಾಳಿ ವಾಸುದೇವ, ಮುರಾರಿ, ಮಾಧವ, ಗೋಪಿಲೋಲ ಎಂದೆಲ್ಲ ಸಹಸ್ರನಾಮಾವಳಿಯಿಂದ ಕರೆಸಿಕೊಳ್ಳುವ ಕೃಷ್ಣನನ್ನು ಆರಾಧಿಸದ ಹಿಂದೂಗಳಿಲ್ಲ. ಭಕ್ತ ಕನಕ, ಪುರಂದರ, ಮೀರಾ, ಕಬೀರ ಮುಂತಾದ ಕವಿವರ್ಯರ ನಾಲಿಗೆಯಲ್ಲಿ ಪುಂಕಾನುಪುಂಖನಾಗಿ ಕಾವ್ಯಧಾರೆಯನ್ನು ಹರಿಸಿ ವಿಶ್ವದೆಲ್ಲೆಡೆ ಕೃಷ್ಣನಾಮ ಸ್ಮರಣೆ ಮನೆಮಾತಾಗುವಂತಾದದ್ದು ಇಂದಿನ ಪೀಳಿಗೆಗೆ ವರದಾನವೇ ಸರಿ.

### ಕೃಷ್ಣನೆಂದರೆ ಒಗಟು

'ಕೃಷ್ಣ' ಎಂದರೆ ಕಪ್ಪು ಎಂದರ್ಥ. ಇದು ರಹಸ್ಯಕ್ಕೆ ಸಂಕೇತ. ಶ್ರೀಕೃಷ್ಣನ ವ್ಯಕ್ತಿತ್ವವನ್ನು ನಾವು ಸುಲಭವಾಗಿ ಅರ್ಥ ಮಾಡಿ ಕೊಳ್ಳಲಾರೆವು. ಆದುದರಿಂದ ಅವನು 'ರಹಸ್ಯ' 'ಕೃಷ್ಣ' ನೆಂದರೆ ಆಕರ್ಷಣೆ, ಸೆಳೆತ, ಉಜ್ಜುವಿಕೆ ಎಂದೂ ಅರ್ಥವಿದೆ. ಅವನು ನಮ್ಮನ್ನು ಅವನ ಗುಣಗಳಿಂದ ಸೆಳೆಯುತ್ತಾನೆ; ನಮ್ಮ ಕಲ್ಮಷಗಳನ್ನು ಉಜ್ಜಿ ತೆಗೆದುಹಾಕಿ ಶುದ್ಧಗೊಳಿಸುತ್ತಾನೆ.



### ದುಷ್ಟಶಿಕ್ಷಕ

ಯದುವಂಶದ ರಾಜ ಉಗ್ರಸೇನ; ಮಥುರೆಯನ್ನು ಆಳುತ್ತಿದ್ದ. ಇವನ ಮಗನೇ ಕಂಸ; ಹುಟ್ಟಿನಿಂದಲೇ ದುಷ್ಟ. ತಂದೆಯನ್ನೇ ಸೆರೆಯಲ್ಲಿಟ್ಟು ಸಿಂಹಾಸನವನ್ನು ಏರಿದ. ಅವನ ತಂಗಿಯಾದ ದೇವಕಿಯಲ್ಲಿ ಹುಟ್ಟುವ ಮಗುವಿನಿಂದಲೇ ಅವನಿಗೆ ಸಾವು ಎಂದು ಅಶರೀರವಾಣಿಯಾಯಿತು. ದೇವಕಿ - ವಸುದೇವ ದಂಪತಿಗಳನ್ನು ಸೆರೆಯಲ್ಲಿಟ್ಟ. ಅವರ ಕೂಸುಗಳನ್ನು ಅವು ಹುಟ್ಟಿದ ಕೂಡಲೇ ಸಂಹರಿಸುತ್ತ ಬಂದ.



### ಗೋಕುಲದಲ್ಲಿ ಕೃಷ್ಣ

ದೇವಕಿ - ವಸುದೇವರ ಎಂಟನೇಯ ಮಗುವೇ ಶ್ರೀಕೃಷ್ಣ. ಅವನು ಹುಟ್ಟಿದ ಕೂಡಲೇ ವಸುದೇವನು ಶಿಶುರೂಪಿ ಕೃಷ್ಣನನ್ನು ನಂದಗೋಕುಲದಲ್ಲಿದ್ದ ನಂದನ ಪತ್ನಿಯಾದ ಯಶೋದೆಯ ಬಳಿಯಲ್ಲಿಟ್ಟು, ಅವರ ಹೆಣ್ಣು ಗೂಸನ್ನು ದೇವಕಿಯ ಬಳಿ ತಂದಿಟ್ಟ.ಆ ಸಂದರ್ಭದಲ್ಲಿ, ಕೃಷ್ಣನ ಅನುಗ್ರಹದಿಂದಲೇ ಸೆರೆಮನೆಯ ಬಾಗಿಲುಗಳು ತೆರೆದುಕೊಂಡವು; ನೀರಿನ ಹರಿವೂ ದಾರಿಯನ್ನು ಬಿಟ್ಟು ಕೊಟ್ಟಿತು.

### ಶತ್ರುಸಂಹಾರಕ

ಎಂಟನೆಯ ಮಗುವನ್ನು ಕೊಲ್ಲಲು ಕಂಸ ಖಡ್ಗವನ್ನು ಎತ್ತಿದ ಕೂಡಲೇ 'ನಿನ್ನನ್ನು ಕೊಲ್ಲುವವನು ನಂದಗೋಕುಲದಲ್ಲಿ ಬೆಳೆಯುತ್ತಿದ್ದಾನೆ,ಎಂದು ಹೇಳಿ ಅದು ಮಾಯವಾಯಿತು. ಕಂಸನಿಗೆ ಈ ಮಾತು ಕೇಳೀ ಮತ್ತಷ್ಟು ಭಯ ಹೆಚ್ಚಾಯಿತು. ಪೂತನಿ, ಶಕಟಾಸುರ, ಧೇನುಕ, ಯಮಲಾರ್ಜುನ ಮುಂತಾದ ರಾಕ್ಷಸರನ್ನು ಬಾಲಕೃಷ್ಣನನ್ನು ಕೊಲ್ಲಲು ಕಳುಹಿಸಿದ; ಆದರೆ ಕೊಲ್ಲಲಾಗದೆ ಸೋತ.

### ಲೋಕೋತ್ತರ ಬಾಲಕೃಷ್ಣ

ಪೂತನಿ ಎಂಬ ರಕ್ಕಸಿಯನ್ನು ಕೃಷ್ಣನನು ಕೊಲ್ಲಲ್ಲು ಕಂಸ ಕಳುಹಿಸಿದ; ಹಾಲೂಡಿಸುವ ನೆವದಲ್ಲಿ ಬಾಲಕೃಷ್ಣನನ್ನು ಕೊಲ್ಲುವುದು ಅವನ ಯೋಜನೆ.ಆದರೆ ಕೃಷ್ಣ ಅವಳನ್ನೇ ಕೊಂದ. ಬಾಲಕೃಷ್ಣ ಇಂಥ ಹಲವು ಲೋಕೋತ್ತರ ಕಾರ್ಯಗಳನ್ನು ಮಾಡಿ ಎಲ್ಲರಿಗೂ ಬೆರಗು ಮೂಡಿಸಿದ ; ಗೌರವಕ್ಕೂ ಪಾತ್ರನಾದ. ಆದರೆ ಅವನು ಬಾಲಕರ ಜತೆ ಬಾಲಕನಂತೆಯೇ ನಡೆದು ಕೊಂಡ.

### ಕೃಷ್ಣನ ವಿಶ್ವರೂಪ

ಶ್ರೀಕೃಷ್ಣನನ್ನು ಕುಣಿದಾಡಿಸಿದವರು ನೂರಾರು ರಸ ಋಷಿಗಳು, ಮಹರ್ಷಿಗಳು,ಮಹಾಕವಿಗಳು, ದಾರ್ಶನಿಕರು, ದಾಸರು, ಕಲಾಯೋಗಿಗಳು, ಮಹಾಭಾರತ, ಭಾಗವತ, ಹರಿವಂಶಗಳು ಕೃಷ್ಣಕಥೆಗೆ ಮೂಲ ಆಕರಗಳು. ಜಯದೇವ, ಲೀಲಾಶುಕ, ಪುರಂದರದಾಸ, ಕನಕದಾಸ, ವಿದ್ಯಾಪತಿ, ರೂಪ ಗೋಸ್ವಾಮಿಗಳಂಥವರು ಕೃಷ್ಣನ ವಿಶ್ವಾರೂಪ ದರ್ಶನವನ್ನೇ ಮಾಡಿಸಿದ್ದಾರೆ.

### ಬ್ರಹ್ಮಾಂಡವೇ ಬಾಯಲ್ಲಿ

ಬಾಲಕೃಷ್ಣನ ತುಂಟತನ ಎಂಥವರ ಮನಸ್ಸನ್ನೂ ಆಹ್ಲಾದಗೊಳಿಸುತ್ತದೆ. ಜಗತ್ತನ್ನೇ ಉದ್ಧರಿಸುವವನನ್ನು ಯಶೋದೆ ಮಗನೆಂದು ತಿಳಿದು ಮುದ್ದಿಸಿದ್ದು, ದಂಡಿಸಿದ್ದು ಲೋಕಕ್ಕೆ ಮಾತ್ರ ಪಾಠದಂತಿದೆ. ಒಮ್ಮೆ ಬಾಲಕೃಷ್ಣ ಮಣ್ಣನ್ನು ತಿಂದು ಬಂದಿದ್ದು.ತಾಯಿಗೆ ಆತಂಕ. ಬಾಯಿ ತೆರೆಯುವಂತೆ ಬಲವಂತಿಸಿದಳು. ಕೃಷ್ಣ ಬಾಯಿ ತೆರೆದ. ಅವಳಿಗೆ ಆಗ ಅಲ್ಲಿ ಕಂಡದ್ದು ಇಡೀ ಬ್ರಹ್ಮಾಂಡ!

### ಕೊಳಲಗಾನದ ಪ್ರೇಮಮೂರ್ತಿ

ಕೃಷ್ಣನೆಂದರೆ ಬೃಂದಾವನದ ಗೋಪಿಕೆಯರಿಗೂ ಉತ್ಕಟ ಪ್ರೇಮ. ಅವನ ಕೊಳಲಿನ ನಾದ ಕಿವಿಗೆ ಬಿದ್ದಿತೆಂದರೆ ಸಾಕು - ಗಂಡನ ಸೇವೆಯಲ್ಲಿ, ಮಗುವಿಗೆ ಹಾಲು ಕುಡಿಸುತ್ತಿರಲಿ, ಮನೆ ಕೆಲಸದಲ್ಲಿ ಊಟ ಮಾಡುತ್ತಿರಲಿ, ಹೇಗಾದರೂ ಇರಲಿ- ಅವರೆಲ್ಲರೂ ಕೃಷ್ಣನಲ್ಲಿಗೆ ಓಡೋಡಿ ಬಂದು ಸೇರುತ್ತಿದ್ದರು ತರುಣಿ, ಗೃಹಿಣಿ ಎಲ್ಲರೂ, ಕೃಷ್ಣನ ಸೆಳೆತವೇ ಅಂಥದ್ದು!

### ಕೃಷ್ಣನೇ ರಾಧೆ

ರಾಧೆಯೇ ಕೃಷ್ಣ ಎಲ್ಲ ಗೋಪಿಕೆಯರ ಪ್ರತಿನಿಧಿಯೇ ರಾಧೆ.ರಾಧೆಯೆಂದರೆ ಕೃಷ್ಣ ಕೃಷ್ಣನೆಂದರೆ ರಾಧೆ; ಎಂಥ ತಾದಾತ್ಮ! ಕೃಷ್ಣನನ್ನು ಜಾರನೆಂದು ದೂಷಿಸಲು ಕಾರಣವಾದದ್ದೇ ಈ ಪ್ರೇಮಾದ್ವೈತ. ರಾಧೆ ಇದರ ಮರ್ಮವೇ ಬೇರೆ. ಕೃಷ್ಣನೆಂದರೆ ಪರಮಾತ್ಮ, ರಾಧೆಯೆಂದರೆ ಜೀವಾತ್ಮ. ಜೀವಾತ್ಮನ ಸೇರಲು ತವಕಿಸುವ ಪರಿಯೇ ರಾಧಾಮಾಧವ ಪ್ರೇಮವಿಲಾಸ.

### ಗೀತಾಚಾರ್ಯ

ಕುರುಕ್ಷೇತ್ರದಲ್ಲಿ ನಡೆದ ಮಹಾಯುದ್ಧವೆಂದರೆ ಅದು ನಮ್ಮ ಅಂತರಂಗ ಪ್ರತಿಕ್ಷಣದ ಹೋರಾಟ ಒಳಿತು - ಕೆಡಕುಗಳ, ಧರ್ಮ-ಅಧರ್ಮಗಳ,ಕತ್ತಲು-ಬೆಳಕುಗಳ ನಿರಂತರ ಸಂಘರ್ಷ. ಯುದ್ಧ ಭೂಮಿಯಲ್ಲಿ ನಿಂತ ಅರ್ಜುನ ಸ್ವಧರ್ಮವನ್ನು ಮರೆತ; ಜೀವನ ಸಂಗ್ರಾಮದಿಂದ ಪಲಾಯನ ಮಾಡಲು ನೋಡಿದ. ಕೃಷ್ಣನ ಗೀತೋಪದೇಶ ಅವನನ್ನು ಮತ್ತೆ ಸ್ವಧರ್ಮದಲ್ಲಿ ನಿಲ್ಲಿಸಿತು.

## ವಟಪತ್ರಶಾಯಿ

ಸೃಷ್ಟಿಯೆಲ್ಲವೂ ಅಳಿಯುವ ಸಮಯವೇ ಪ್ರಳಯ ಶ್ರೀ ಕೃಷ್ಣ ಆಗ ಆಲದ ಎಲೆಯ ಮೇಲೆ ಮಲಗಿರುತ್ತಾನಂತೆ ಮಗುವಾಗಿ! ಕಾಲಿನ ಹೆಬ್ಬೆರಳನ್ನು ಕೈಯಲ್ಲಿಟ್ಟು ಹಿಡಿದು, ಅದನ್ನು ಬಾಯಲ್ಲಿಟ್ಟುಕೊಂಡು ನಲಿದಾಡುತ್ತಿರುವ ಕೃಷ್ಣ ಇಡಿಯ ಸೃಷ್ಟಿಯೇ ನನಗೊಂದು ಆಟ ಎನ್ನುವುದನ್ನು ಸಾರುತ್ತಿದ್ದಾನೆ. ಸೃಷ್ಟಿ-ಸ್ಥಿತಿ-ಲಯಗಳ ಏಕಮೂರ್ತಿಯೇ ಶ್ರೀ ಕೃಷ್ಣ.

## ಯೋಗೇಶ್ವರ ಕೃಷ್ಣ

ಎಲ್ಲಿ ಕೃಷ್ಣನೋ ಅಲ್ಲಿ ಜಯ ; ಏಕೆಂದರೆ ಶ್ರೀಕೃಷ್ಣಾವತಾರದ ಉದ್ದೇಶವೇ ಧರ್ಮಸಂಸ್ಥಾಪನೆ. ಅವತಾರಪುರುಷನಾದರೂ ಕೃಷ್ಣ ಸಾಮಾನ್ಯವ್ಯಕ್ತಿಯಂತೇ ಬಾಳಿದ; ಆದರೆ ಸಾಮಾನ್ಯರಂತೆ ಅವನು ರಾಗ - ದ್ವೇಷಗಳಿಗೆ, ಸುಖ - ದುಃಖಗಳಿಗೆ ವಶನಾಗಲಿಲ್ಲ; ಅವನ್ನು ಮೀರಿ ಯೋಗೇಶ್ವರನೆನಿಸಿದ. ಹೊರಗೆ ಭೋಗಿಯಂತೆ ಕಂಡರೂ ಒಳಗೆ ತ್ಯಾಗಿಯಾಗಿದ್ದವನು ಶ್ರೀಕೃಷ್ಣ.

## ಶ್ರೀಕೃಷ್ಣಜನ್ಮಾಷ್ಟಮಿ

ಶ್ರೀ ಕೃಷ್ಣಜನ್ಮಾಷ್ಟಮಿಯನ್ನು ಶ್ರೀಕೃಷ್ಣಜಯಂತಿ, ಜನ್ಮಾಷ್ಟಮೀ, ಗೋಕುಲಾಷ್ಟಮಿ ಎಂಬ ಹೆಸರುಗಳಿಂದ ಭಾರತದೇಶದ ಉದ್ದಗಲಕ್ಕೂ ಆಚರಿಸಲಾಗುತ್ತದೆ. ಶ್ರೀಕೃಷ್ಣ ಭೂಮಿಯಲ್ಲಿ ಅವತರಿಸಿದ ದಿನವಿದು. ಶ್ರಾವಣಮಾಸದ ಕೃಷ್ಣಪಕ್ಷದ ಅಷ್ಟಮೀ ತಿಥಿಯಲ್ಲಿ ರೋಹಿಣೀ ನಕ್ಷತ್ರದಲ್ಲಿ ಶ್ರೀಕೃಷ್ಣನು ಅವತರಿಸಿದ ಎಂದು ಪುರಾಣಗಳಲ್ಲಿ ಉಲ್ಲೇಖವಿದೆ. ಕೃಷ್ಣಜಯಂತಿಯ ಬಗ್ಗೆ ಬೇರೆ ಉಲ್ಲೇಖಗಳು ಕಂಡು ಬಂದರೂ ಶ್ರಾವಣಮಾಸದಲ್ಲಿಯೇ ಹೆಚ್ಚಾಗಿ ಆಚರಣೆಯಲ್ಲಿದೆ. ಜನ್ಮಾಷ್ಟಮಿಯಂದು ಶ್ರೀ ಕೃಷ್ಣನ ಪೂಜೆಯನ್ನು ವಿಶೇಷ ರೀತಿಯಲ್ಲಿ ಆಚರಿಸಲಾಗುತ್ತದೆ. ಷೋಡಶೋಪಚಾರಗಳಿಂದ ಅವನನ್ನು ಅರ್ಚಿಸುತ್ತಾರೆ. ಬಗೆಬಗೆಯ ತಿಂಡಿ - ತಿನಿಸುಗಳ ನೈವೇದ್ಯವನ್ನು ಅವನಿಗೆ ಸಮರ್ಪಿಸಲಾಗುತ್ತದೆ. ಭಾಗವತ, ಹರಿವಂಶ, ವಿಷ್ಣುಪುರಾಣ ಮುಂತಾದ ಪ್ರಾಚೀನ ಗ್ರಂಥಗಳ ಮೂಲಕ ಶ್ರೀಕೃಷ್ಣಕಥೆಯ ಪಾರಾಯಣವನ್ನು ಮಾಡುತ್ತಾರೆ. ಕೆಲವು ಪ್ರದೇಶಗಳಲ್ಲಿ ಜನ್ಮಾಷ್ಟಮಿಯಂದು ಜಾಗರಣೆ ಮಾಡುವ ಸಂಪ್ರದಾಯವೂ ಉಂಟು. ಮಹಾರಾಷ್ಟ್ರ ಮುಂತಾದ ಪ್ರಾಂತ್ಯಗಳಲ್ಲಿ ಕೃಷ್ಣಾಷ್ಟಮಿಯ ಸಂದರ್ಭದಲ್ಲಿ 'ಮೊಸರು ಕುಡಿಕೆ' ಯ ಆಟವನ್ನು ಸಂಭ್ರಮದಿಂದ ಆಡುತ್ತಾರೆ. ಕೋಲಾಟ, ಭಜನೆ, ಶ್ರೀ ಕೃಷ್ಣ ವೇಷಧಾರೆಯಂಥ ಹಲವು ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ದಿನ ಕೈಗೊಳ್ಳುತ್ತಾರೆ.



ವಸುದೇವಸುತಂ ದೇವಂ ಕಂಸ ಚಾಣೂರ ಮರ್ದನಮ್।
ದೇವಕೀಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್॥

ಭಾರತದ ಕಥೆಯಲ್ಲಿ ಕೃಷ್ಣನೆಂಬ ಮಹತ್ವದ ತಿರುಗುಣಿ...

ತಿಳಿಯ ಹೇಳುವ ಕೃಷ್ಣ ಕಥೆಯನು ಇಳೆಯ ಜಾಣರು - ಮೆಚ್ಚುವಂತಿರೆ ನೆಲೆಗೆ ಪಂಚಮ ಶ್ರುತಿಯ ನೊರೆವೆನು ಕೃಷ್ಣ ಮೆಚ್ಚಲಿಕೆ ಹಲವು ಪಾಪರಾಶಿಯ ತೊಳೆವ ಜಲವಿದು ಶ್ರೀಮದಾಗಮ ಕುಲಕೆ ನಾಯಕ ಭಾರತ ಕೃತಿ ಪಂಚಮ ಶ್ರುತಿಯ ಕುಮಾರವ್ಯಾಸ ಮಹಾಭಾರತವನ್ನು ಕೃಷ್ಣ ಕಥೆಯಾಗಿ ಪರಿವರ್ತಿಸಿದ. ಈ ಕಥೆಯು ಸಾಮಾನ್ಯವಾದುದಲ್ಲ. ಶ್ರೀಮದಾಗಮ ಕುಲಕೆ ನಾಯಕ ಮತ್ತು ಪಂಚಮ ಶ್ರುತಿ ಎಂಬುದಾಗಿ ಗಟ್ಟಿ ದನಿಯಲ್ಲಿ ಕವಿ ಉದ್ಘೋಷಿಸಿದ್ದಾನೆ.

ಕೃಷ್ಣ, ಕುಮಾರವ್ಯಾಸ ಭಾರತದಲ್ಲಿ ಅಲ್ಲಲ್ಲಿ ಇದ್ದಾನೆ. ಹಾಗೆ ಬರುವ ಸಂದರ್ಭಗಳೆಲ್ಲ ಭಾರತ ಕಥೆಯ ಮಹತ್ವದ ತಿರುಗುಣಿಗಳಾಗಿವೆ. ಕೃಷ್ಣ ಪ್ರತ್ಯಕ್ಷವಾಗಿ ಬರಲಾರದೆ ಉಳಿದಿದ್ದು ಪಾಂಡವ - ಕೌರವ ಜೂಜಿನ ಸಂದರ್ಭದಲ್ಲಿ ಮಾತ್ರ. ಅದು ಹೊರತಾಗಿ ದ್ರೌಪದಿಯ ಸ್ವಯಂವರ (ಮಹಾಭಾರತದಲ್ಲಿ ಮೊದಲ ಬಾರಿಗೆ ಕೃಷ್ಣ ಕಾಣಿಸಿಕೊಂಡದ್ದು - ಹಾಗೆ ಕಾಣಿಸಿಕೊಂಡು ದ್ರೌಪದಿಗೆ ನಾಯಕನಾಗದೆ, ಅಣ್ಣನಾಗಿ ಚಾರಿತ್ರ್ಯ ಪಾತ್ರ ನಿರ್ವಹಣೆಗೆ ಸಹಿ ಹಾಕಿದ್ದು, ನಾಯಕನಾಗುವ ಬಲರಾಮನ ಉಮೇದಿಗೆ ಅಡ್ಡ ಬಂದದ್ದು), ವಸ್ತ್ರಾಪಹರಣ ಸಂದರ್ಭದಲ್ಲಿ ಪರೋಕ್ಷವೃತ್ತಿ, ರಾಜಸೂಯ ಪ್ರಸಂಗ, ಜರಾಸಂಧನ ಸಂಹಾರ, ಅಗ್ರಪೂಜೆಯ ಪೂರೈಸಲು ನೀಡಿದ ಹಿತೋಕ್ತಿ, ಅಕ್ಷಯ ಪಾತ್ರೆ ಮತ್ತು ದೂರ್ವಾಸ ಪ್ರಸಂಗ, ಅಜ್ಞಾತವಾಸ ಮುಗಿದ ಮೇಲೆ ಅಭಿಮನ್ಯು, ಸುಭದ್ರಾ ಸಮೇತ ಬಂದದ್ದು, ಅಭಿಮನ್ಯು ಉತ್ತರೆಯ ಕಲ್ಯಾಣದಲ್ಲಿ ಭಾಗಿಯಾಗಿದ್ದು, ಮದುವೆ ಮುಗಿಸಿಕೊಂಡು ದ್ವಾರಕೆಗೆ ಹಿಂದಿರುಗಿ ರಾಜಕೀಯ ಕಾರಣಕ್ಕಾಗಿ ಮತ್ತೆ ವಿರಾಟನಗರಿಗೆ ಬಂದದ್ದು, ಸಂಧಿಯ ಪ್ರಸ್ತಾಪಕ್ಕಾಗಿ ಹಸ್ತಿನಾವತಿಗೆ ಹೋಗಿದ್ದು, ಹಸ್ತಿನಾವತಿಯಲ್ಲಿ ಕೌರವಾದಿಗಳ ಮನೆಗಳಲ್ಲಿ ಉಳಿಯದೆ ವಿದುರನ ಮನೆಯಲ್ಲಿ ಉಳಿದದ್ದು, ವಿದುರನ ಭಕ್ತಿ ಮರುಳು, ಸಭೆಯಲ್ಲಿ ಸಂಧಿಪ್ರಸ್ತಾಪ ಮುರಿದು ಬಿದ್ದದ್ದು, ವಿದುರ ದುರ್ಯೋಧನನ ರಕ್ಷಣೆಗಾಗಿ

ಇಟ್ಟುಕೊಂಡಿದ್ದ ಬಿಲ್ಲು ಮುರಿದದ್ದು, ದುರ್ಯೋಧನ ಕೃಷ್ಣನನ್ನು ಬಂಧಿಸಲು ಯತ್ನಿಸಿದ್ದು. ಕೃಷ್ಣನ ವೈಷ್ಣವ ಮಾಯೆ, ವಿಶ್ವರೂಪ ದರ್ಶನ, ಕರ್ಣನನ್ನು ಏಕಾಂತದಲ್ಲಿ ಭೇಟಿಯಾಗಿ ಅವನಿಗೆ ಕುಂತೀಪುತ್ರನೆಂಬ ಸತ್ಯವನ್ನು ಅರುಹಿ ಕರ್ಣಭೇದನ ಮಾಡಿದ್ದು, ಕುಂತಿಗೆ ಅವನಿಂದ ಪಾಂಡವಪರವಾದ ಕೆಲವು ಬೇಡಿಕೆಗಳಿಗೆ ಒಪ್ಪಿಗೆ ಪಡೆಯಲು ಸೂಚಿಸಿದ್ದು, ಯುದ್ಧದಲ್ಲಿ ಶಸ್ತ್ರ ಹಿಡಿಯನೆಂದು ಅರ್ಜುನನ ಸಾರಥಿಯಾದದ್ದು, ಕಾಲ ಕಾಲಕ್ಕೆ ಅರ್ಜುನನ (ಆಗಾ ಪಾಂಡವರ) ರಕ್ಷಣೆ ಮಾಡಿದ್ದು, ಅರ್ಜುನನಿಗೆ ಗೀತೆಯನ್ನು ಬೋಧಿಸಿ ಹುರಿಗೊಳಿಸಿದ್ದು - ಹೀಗೆ ಆಗಾಗ ಆಯ ಕಟ್ಟಿನ ಜಾಗಗಳಲ್ಲೆಲ್ಲ ಕೃಷ್ಣ ಭಾರತದ ಕಥೆಯೊಂದಿಗೆ ಹೊಕ್ಕಾಟ ನಡೆಸಿದ್ದಾನೆ.

ಶ್ರೀ ಕೃಷ್ಣ ಜನಿಸಿದ ರೋಹಿಣಿ ನಕ್ಷತ್ರ ಏಕೆ ಶ್ರೇಷ್ಠ?

ಭಾರತೀಯ ಜ್ಯೋತಿಷ್ಯ ಮತ್ತು ಶಾಸ್ತ್ರಗಳ ರೀತ್ಯ ಒಟ್ಟು 27 ನಕ್ಷತ್ರಗಳನ್ನು ಗುರುತಿಸಿ ವಿವರಿಸಲಾಗಿದೆ. ಸ್ವಾತಿ ರೋಹಿಣಿಯರನ್ನು ಚಂದ್ರನ ಮಡದಿಯರೆಂದು ಪರಿಗಣಿಸಲಾಗಿದೆ ಮತ್ತು ಸಪತ್ನಿ - ಸವತಿಯರೆಂದು ಕರೆಯುವರು.

ಸ್ವಾತಿ ನಕ್ಷತ್ರದಂದು ಮಳೆಯ ಹನಿಗಳು ನೀರಿನಲ್ಲಿ ಬಾಯಿ ತೆರೆದುಕೊಂಡಿರುವ ಕಪ್ಪೆಚಿಪ್ಪಿನಲ್ಲಿ ಬಿದ್ದರೆ ಆ ಹನಿಗಳು ಶುದ್ಧ ಮುತ್ತುಗಳಾಗಿ ಪರಿವರ್ತಿಸಲ್ಪಡುತ್ತದೆ ಎಂಬ ನಂಬಿಕೆಯಿದೆ, ಈ ಮುತ್ತು ನವರತ್ನಗಳಲ್ಲಿ ಒಂದು, ಮುತ್ತು ಪವಿತ್ರತೆಗೆ ಶುದ್ಧತೆಗೆ ಸಂಕೇತ, ನುಡಿದರೆ ಮುತ್ತಿನ ಹಾರದಂತಿರಬೇಕು ಎಂಬ ನಾಣ್ನುಡಿ ಪ್ರಸಿದ್ಧಿ, ತಾನು ಮುತ್ತಿನ ಮಾತೆ ಎಂದು ಮೆರೆಯುವಳು ಸ್ವಾತಿ. ಇದರಿಂದ ರೋಹಿಣಿಗೆ ಅತಿ ಸಂಕಟ, ಮಾತ್ಸರ್ಯ: ಎಷ್ಟಾದರೂ ಸವತಿಯಲ್ಲವೇ? ಹೇಗಾದರೂ ಮಾಡಿ ನಾನೇನೂ ಸ್ವಾತಿಗೆ ಕಡಿಮೆಯಿಲ್ಲ ಎಂದು ಸಾಧಿಸಿಯೇ ತೀರುವ ಹಠ ಹಿಡಿದಳು,ಹೆತ್ತರೆ ಅಂತಿಂತಹವನನ್ನು ಹೆರಲಾರೆ ಮುತ್ತನ್ನು ಮೆಟ್ಟಿ ಅದಕ್ಕಿಂತಲೂ ಮೆರೆಯುವ ಬೆಳೆಬಾಳುವ, ಲೋಕಕ್ಕೆಲ್ಲ ಪ್ರಿಯವಾದ ಎಲ್ಲ ಹೆಂಗಸರೂ ಮೆಚ್ಚಿ ಮೆರೆದಾಡುವ ರತ್ನವನ್ನೇ ಹೆರಬೇಕು ಎಂಬುದು ಅವಳ ಹಟ. ಅವಳ ಹಟದ ತಪಸ್ಸು, ತನ್ನ ಮಹತ್ತರವಾದ ಫಲವನ್ನು ಕೊಟ್ಟೇ ಕೊಟ್ಟಿತು ಶ್ರೀ ಕೃಷ್ಣ ಪರಮಾತ್ಮನು 'ರೋಹಿಣಿ' ನಕ್ಷತ್ರದಲ್ಲಿ ಜನಿಸಿದನು. ಅವನ ಪರಮಾತ್ಮ ಸ್ವರೂಪವಾದ ಭಗವದವತಾರಕ್ಕೆ ರೋಹಿಣಿಯೇ ತಕ್ಕ ಶ್ರೇಷ್ಠ ನಕ್ಷತ್ರವಾಯಿತು. ಅಂತಲೇ ಶ್ರೀ ಕೃಷ್ಣನ ಜನ್ಮ ದಿನವನ್ನು ರೋಹಿಣಿ ನಕ್ಷತ್ರದಂದೇ ಆಚರಿಸುವುದು ಪದ್ಧತಿ. ಇದರಿಂದ ರೋಹಿಣಿಯು ಜಗಜ್ಜಾಹೀರಾದಳು. ಕೃತಕೃತ್ಯೆಯಾದಳು. ರೋಹಿಣಿ ಅಂತಿಂತ ರತ್ನವನ್ನು ಹಡೆಯಲಿಲ್ಲ. ಒಂದು ಅಪೂರ್ವ ನೀಲ ರತ್ನವನ್ನು ನೀಲಮೇಘ ಶ್ಯಾಮನಾದ ಶ್ರೀಕೃಷ್ಣನನ್ನು ಹೆತ್ತಳು.

ಹಾರಗಳಲ್ಲಿ ಮುತ್ತನ್ನು ಹೇರಳವಾಗಿ ಬಳಸುವರು. ಆದರೆ ಅದರ ಮಧ್ಯದಲ್ಲಿ ಒಂದೇ ಒಂದು ನೀಲಿರತ್ನವನ್ನು ಬಳಸುವರು. ತನ್ನ ಬಣ್ಣದಿಂದಲೂ, ಘನದಿಂದಲೂ, ಬೆಲೆಯಿಂದಲೂ ನೀಲಿ ರತ್ನವು ಸದಾ ಎದ್ದು ಕಾಣುತ್ತದೆ. ಅಂತೆಯೇ ಶ್ರೀಕೃಷ್ಣನು ಎಲ್ಲರ ಹೃದಯವಲ್ಲಭನಾಗಿರುವನು. ಅತ್ಯಂತ ಉನ್ನತ ಸ್ಥಾನವನ್ನು ಅಲಂಕರಿಸಿರುವನು.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಶ್ರೀ ರಾಘವೇಂದ್ರ ಸ್ವಾಮಿಯ ಮಹಿಮೆ ಮತ್ತು ಆರಾಧನೆ

- ಎಸ್. ವೆಂಕಟ ರಾಘವನ್



### ಗುರು ವಂದನಂ

ವಂದೇ ಶ್ರೀ ರಾಘವೇಂದ್ರ ಯತಿಮ್ ।
ಜ್ಞಾನ ಸಂಪನ್ನ ವಿಭೋ ಗುರುದೇವಂ ನಮೋ ನಮಾಮಿ॥
ಇಂದಿರಾ ರಮಣ ಅರ್ಚಕ ಮೂಲರಾಮ ಪೂಜಕ ।
ದ್ವೈತ ಶಿಖಾಮಣಿ ಯೋಗಿವರ್ಯ ನಮೋ ನಮಾಮಿ॥
ಧರ್ಮ ಶಾಸ್ತ್ರ ಗುರು ವೀಣಾ ಪಂಡಿತ ಗುರು।
ಪರಿಮಳ ಭಾಷ್ಯಕಾರ ಗುರು ನಮೋ ನಮಾಮಿ ॥
ಶಾಸ್ತ್ರಪಂಡಿತ ಗುರು ಪ್ರಹ್ಲಾದರಾಯ ಗುರು ।
ಮಂತ್ರಾಲಯ ನಿವಾಸಿನೇ ನಮೋ ನಮಾಮಿ॥
ವಿದ್ಯಾ ಪ್ರದಾತ ಗುರು ಮಾರ್ಗದರ್ಶಕ ಗುರು।
ಹರಿಸೇವಾಮೃತ ವೇದಸಾರ ಗುರು ನಮೋ ನಮಾಮಿ॥
ಕಂಠೇ ತುಳಸಿ ಮಾಲ ಕರೇ ಕಮಂಡಲ ಧಾರಿಣೇ ಗುರು
ಪದ್ಮಾಸನಸ್ಥಿತ ಗುರುದೇವಂ ನಮೋ ನಮಾಮಿ॥
ಜ್ಞಾನ ಕಾಂತಿ ಮಣಿ ಗಾನ ವಿಶಾರದ ಗುರು ।
ಪೂರ್ಣ ಚಂದ್ರ ಶ್ರೀ ರಾಘವೇಂದ್ರ ಗುರುದೇವಂ ನಮೋ ನಮಾಮಿ॥

ಹಿಂದೂ ಧರ್ಮದಲ್ಲಿ ತಾಯಿ ತಂದೆ ಗುರು ಮತ್ತು ದೈವ ಎಂಬುವ ಗೌರವ ಸಂಪ್ರದಾಯವಿದೆ. ಮಾನವನಾಗಿ ಭುವಿಗೆ ಬರುವುದು ತಾಯಿ ಕೊಟ್ಟ ಜನ್ಮ. ತಾಯಿ ಮಗುವಿಗೆ ಮೊದಲ ಗುರು ಮತ್ತು ದೈವ ಸಮಾನ.ವಂಶವ ಬೆಳಗಲು ಮಗುವಿಗೆ ಪ್ರಾಣ ಕೊಟ್ಟು ಸಂಸಾರದಲ್ಲಿ ಸಂಘದಲ್ಲಿ ಸ್ಥಾನ ನೀಡುವ ತಂದೆ ಎರಡನೆಯ ಗುರುವು ಮತ್ತು ಪಿತೃದೇವರಾಗುವರು. ಪುಂಡರೀಕ ತನ್ನ ತಂದೆ ತಾಯಿ ಸೇವೆಯಲ್ಲಿ ಜೀವನ ಸಲ್ಲಿಸಿ ದೇವರನ್ನು ತಂದೆ ತಾಯಿಯಲ್ಲಿ ಕಂಡು ಹಗಲಿರುಳು ಸೇವೆ ಮಾಡಿ ಹರಿಯನ್ನು ಸಂತೋಷ ಪಡಿಸಿರುವ ಕಥೆ ಪುಂಡರೀಕ ಚರಿತ್ರೆಯಲ್ಲಿ ಕಾಣಬಹುದು.**"ಪುಂಡರೀಕ ವರದ ಗೋವಿಂದ"** ಎಂದು ಶ್ರೀಹರಿಯನ್ನು ನಮಸ್ಕರಿಸುವುದು ಶ್ರೀ ಹರಿಯ ಕೃಪೆಗೆ ಪುಂಡರೀಕ ಪಾತ್ರರಾಗಿರುವುದು ಗಮನಿಸಬಹುದು. ತೈತ್ತರೀಯ ಉಪನಿಷತ್ ವರ್ಣಿಸಿದಂತೆ ಮಾತ್ರುದೇವೋಭವ ಪಿತೃ ದೇವೋಭವ ಎಂದು ತಂದೆ ತಾಯಿಗಳನ್ನು ಮೊದಲ ದೇವರಾಗಿ ಆರಾಧಿಸಬೇಕು. ವಿದ್ಯೆ ಕಲಿಯಲು ಪ್ರವೀಣರಾಗಲು ಗುರುವಿನ ಮಾರ್ಗದರ್ಶನ ಅತ್ಯಗತ್ಯ. ವಿದ್ಯೆ ಇಂದ ಜ್ಞಾನ ಗುರುವಿನ ಮಾರ್ಗದರ್ಶನದಲ್ಲಿ ಧರ್ಮದ ದಾರಿ, ಭಕ್ತಿಯ ಪ್ರೇರಣೆ ಇಂದ ಭಗವಂತನ ಸೇವೆ ಮಾಡಿ ಕೊನೆಗೆ ಮುಕ್ತಿ ಪಡೆಯುವರು.**"ಗುರೂಬ್ರಹ್ಮ ಗುರ್ರೂರ್ವಿಷ್ಣುಃ ಗುರೂರ್ದೇವೋ ಮಹೇಶ್ವರಃ ಗುರೂಃ ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ"** ಎನ್ನುವಂತೆ ಗುರು ಬ್ರಹ್ಮ ಸ್ವರೂಪ ಗುರು ವಿಷ್ಣು ಸ್ವರೂಪ ಗುರು ರುದ್ರ ದೇವರ ಸಮಾನ ಮತ್ತು ಗುರು ಸಾಕ್ಷಾತ್ ಪರಬ್ರಹ್ಮನೆಂದು ಶ್ಲೋಕ. ಗುರುವನ್ನು ಕಂಡರೆ ತ್ರಿಮೂರ್ತಿಗಳ ಕಂಡಂತೆ. ಗುರುವಿನ ಆಶೀರ್ವಾದವಿದ್ದರೆ ತ್ರಿಮೂರ್ತಿಗಳ ಆಶೀರ್ವಾದವಿದ್ದಂತೆ. ಗುರುವಿನ ಮಾರ್ಗದರ್ಶನ ಅತ್ಯಗತ್ಯ. **ಧರ್ಮ ಜ್ಞೋ ಧರ್ಮಕರ್ತಾ ಚ ಸದಾ ಧರ್ಮ ಪರಾಯಣಃ ತತ್ವೇ ಭ್ಯಹ ಸರ್ವ ಶಾಸ್ತ್ರಾರ್ಥದೇಶಕೋ ಗುರೂ ರೂಚ್ಯತೆ** ಧರ್ಮವ ತಿಳಿದು, ಧರ್ಮಾಚರಣೆ ಮಾಡುತ್ತಾ ಶಾಸ್ತ್ರ ಪುರಾಣಗಳ ತತ್ವ ಉಪದೇಶ ಮಾಡುವವರು ಗುರುಗಳು.

ಶಂಕುಕರ್ಣರು ಸತ್ಯಲೋಕದಲ್ಲಿ ಸದಾ ಶ್ರೀ ಬ್ರಹ್ಮ ದೇವರ ಸೇವೆ ಮಾಡುತ್ತಿರುವರು.ಒಂದು ದಿನ ಪೂಜೆಗೆ ಹೂಗಳನ್ನು ತರುವುದು ತಡವಾಯಿತು. ಇದರಿಂದ ಬ್ರಹ್ಮ ದೇವರು ಭೂಲೋಕದಲ್ಲಿ ಅವತರಿಸಬೇಕು ಎಂದು ಶಾಪವನ್ನಿಟ್ಟರು. ಶಾಪವು ನೆಪ ಮಾತ್ರ ಮೂಲ ಉದ್ದೇಶ ಧರ್ಮ ಪ್ರಚಾರ ಮತ್ತು ರಾಯರು ಹಿಂದೆ ಶ್ರೀಪ್ರಹ್ಲಾದ, ಶ್ರೀಬಹ್ಲೀ ಕರಾಜ, ಶ್ರೀವ್ಯಾಸ ತೀರ್ಥರಾಗಿ ಅವತರಿಸಿದರು. **ಇತಿಹಾಸ:** ಗುರುಲ ರಾಯರು ಕ್ರಿ.ಶ.1595 ವರ್ಷದಲ್ಲಿ ಭುವನಗಿರಿಯಲ್ಲಿ ಜನಿಸಿದರು. ರಾಯರು ಸದ್ವಂಶೋದ್ಭವರು, ಬೀಗಮುದ್ರೆ ಮನೆತನದವರು

ಮತ್ತು ಇವರ ಗೋತ್ರ ಗೌತಮ. ರಾಯರ ತಂದೆ ಹೆಸರು ತಿಮ್ಮಣ್ಣ ಭಟ್, ತಾಯಿ ಶ್ರೀಮತಿ ಗೋಪಿ ಕಾಂಬ, ಭುವನಗಿರಿ ಈಗಿನ ತಮಿಳನಾಡು ರಾಜ್ಯದ ಚಿದಂಬರಂ ಬಳಿ ಇದೆ. ತಿರುಪತಿ ವೆಂಕಟೇಶನ ದರ್ಶನದ ನಂತರ ಜನ್ಮಿಸಿದ ಮಗುವಿಗೆ ವೆಂಕಟನಾಥನೆಂದು ನಾಮಕರಣ ಮಾಡಲಾಯಿತು. ಮುಂದಿನ ವಿದ್ಯಾಭ್ಯಾಸ ಮಧುರೈನಲ್ಲಿ ನಡೆಯಿತು. ಕ್ರಿ.ಶ.1614 ವರ್ಷದಲ್ಲಿ ವೆಂಕಟನಾಥರು ಸರಸ್ವತಿಬಾಯಿಯವರನ್ನು ವಿವಾಹ ಮಾಡಿಕೊಂಡರು. ರಾಯರಿಗೆ ಪುತ್ರ ಜನಿಸಿದ್ದು ಅವರನ್ನು ಲಕ್ಷ್ಮೀನಾರಾಯಣ ಎಂದು ನಾಮಕರಣ ಮಾಡಲಾಯಿತು. ವೆಂಕಟನಾಥರು ಸತೀ ಮತ್ತು ಮಗುವಿನೊಡನೆ ಕುಂಭಕೋಣಂ ಶ್ರೀ ಮಠಕ್ಕೆ ತೆರಳಿದರು. ಶ್ರೀ ಮಠದಲ್ಲಿ ಶ್ರೀ ಸುಧೀಂದ್ರತೀರ್ಥ ಗುರುಗಳ ಬಳಿ ದ್ವೈತ ವೇದಾಂತ, ಸಂಸ್ಕೃತ ವ್ಯಾಕರಣಗಳನ್ನು ಅಧ್ಯಯನ ಮಾಡಿದರು.

### ಸನ್ಯಾಸಾಶ್ರಮದ ಆಜ್ಞೆ

ಸ್ವಪ್ನದಲ್ಲಿ ವಿದ್ಯಾ ಲಕ್ಷ್ಮೀ ದರ್ಶನ ಕೊಟ್ಟು ರಾಯರನ್ನು ಸನ್ಯಾಸ ಸ್ವೀಕರಿಸಲು ಆಜ್ಞೆ ಕೊಟ್ಟರು. ಕ್ರಿ.ಶ 1621 ರಲ್ಲಿ ತಂಜಾವೂರಿನಲ್ಲಿ ಫಾಲ್ಗುಣ ಶುಕ್ಲ ದ್ವಿತೀಯ ತಿಥಿಯಲ್ಲಿ ಸನ್ಯಾಸತ್ವವನ್ನು ತೆಗೆದುಕೊಂಡರು. ಶ್ರೀ ಸುಧೀಂದ್ರತೀರ್ಥರ ಸನ್ಯಾಸತ್ವದ ದೀಕ್ಷೆಯನಂತರ ವೆಂಕಟನಾಥರನ್ನು " ಶ್ರೀ ರಾಘವೇಂದ್ರ ತೀರ್ಥ" ರೆಂದು ನಾಮಕರಣ ಮಾಡಿದರು. ಶ್ರೀಮಠಕ್ಕೆ ರಾಯರನ್ನು ಉತ್ತರಾಧಿಕಾರಿಯಾಗಿ ನಿಯಾಮಕ ಮಾಡಿದರು.

### ತೀರ್ಥ ಯಾತ್ರೆ

ರಾಯರು ಮಧುರೈ ಕಂಚಿ ರಾಮೇಶ್ವರ, ತಿರುಪತಿ ಉಡುಪಿ, ಪಂಡರೀಪುರ ಯಾತ್ರೆಗಳ ನಂತರ ಮಂಚಾಲೆ ಗ್ರಾಮದಲ್ಲಿರಲು ನಿರ್ಣಯಿಸಿದರು. ಮಂತ್ರಾಲಯ ಇಂದಿನ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿದೆ.

### ಗ್ರಂಥರಚನೆ

ರಾಯರು ದ್ವೈತ ಸಿದ್ಧಾಂತದ ಆಧಾರಿತ ಮತ್ತು ಬ್ರಹ್ಮ ಸೂತ್ರದ ಮೂಲಗಳ ಸಾರವನ್ನು ಭಾಷ್ಯ ರಚನೆ ಮಾಡಿದರು. ರಾಯರು ಪೂರ್ವ ಮೀಮಾಂಸದಲ್ಲಿ ಪ್ರಾವೀಣ್ಯರು. ರಾಯರು ವೇದತ್ರಯ ವಿವೃತಿ, ನ್ಯಾಯಸುಧಾ ಪರಿಮಳ, ತತ್ವ ಪ್ರಕಾಶಿಕ,ನ್ಯಾಯ ಮುಕ್ತಾವಳಿ, ತತ್ವ ಮಂಜರಿ, ಗೀತಾರ್ಥ ಸಂಗ್ರಹ, ರಾಮ ಚರಿತ್ರ ಮಂಜರಿ ತಾತ್ಪರ್ಯ ಚಂದ್ರಿಕ ಮುಂತಾದ ಗ್ರಂಥವ ರಚಿಸಿದರು. ನ್ಯಾಯಸುಧಾ ಪರಿಮಳ ಗ್ರಂಥದಿಂದ ಶ್ರೀ ಪರಿಮಾಳಾಚಾರ್ಯರರೆಂದು ಬಿರುದಾಂಕಿತರಾದರು.

### ರಾಯರ ಪವಾಡಗಳು

#### ಮಗುವನ್ನು ಬದುಕಿಸಿದರು:

ದೇಶಾಯಿ ತಮ್ಮ ಮನೆಯಲ್ಲಿ ರಾಯರನ್ನು ಪೂಜೆ ಮಾಡಿ ಅನ್ನ ಸಂತರ್ಪಣೆ ಮಾಡಲು ಸಂಕಲ್ಪಿಸಿದನು. ರಾಯರು ಪೂಜೆ ಮಾಡುವಾಗ ದೇಶಾಯಿಯವರ ಪುತ್ರ ಮಾವಿನ ಹಣ್ಣಿನ ರಸದ ಪಾತ್ರೆಯಲ್ಲಿ ಮುಳುಗಿಹೋದನು. ರಾಯರು ಅಪರೋಕ್ಷ ಜ್ಞಾನಿ.ನಡೆದ ಸಂಘಟನೆ ಅರಿತು ಮಗುವನ್ನು ತರಲು ಹೇಳಿದರು.ಕಮಂಡಲದಿಂದ ತೀರ್ಥ ಪ್ರೋಕ್ಷಣೆ ಮಾಡಿದರು. ದೇಶಾಯಿ ಪುತ್ರ ಜೀವಿತನಾದನು.

#### ಬಡ ವೆಂಕಣ್ಣ ಮಂತ್ರಿಯಾದ:

ವೆಂಕಣ್ಣ ಅದೋನಿ ಹತ್ತಿರದ ಕಂದನತಿ ಎಂಬುವ ಗ್ರಾಮದಲ್ಲಿ ತಂದೆ ತಾಯಿಯನ್ನು ಕಳೆದು ಕೊಂಡು ಶೋಕದಲ್ಲಿ ಬದುಕುತ್ತಿದ್ದನು. ನವಾಬರಿಗೆ ಸಂದೇಶ ಬಂದಿದೆ ಎಂದು ತಿಳಿದ ಮೇಲೆ ಹತ್ತಿರದಲ್ಲಿರುವ ವೆಂಕಣ್ಣನನ್ನು ಕಂಡು ಸಂದೇಶ ಓದಲು ಕೇಳಿದರು. ಓದು, ಬರಹ ಬರದ ಬಡ ವೆಂಕಣ್ಣ "ಓಂ ಶ್ರೀ ರಾಘವೇಂದ್ರಾಯ ನಮಃ" ಎಂದು ಮನದಲ್ಲಿ ನೆನೆದು ಪತ್ರವನ್ನು ಸುನಾಯಾಸವಾಗಿ ಓದಿ. ನವಾಬರು ರಾಜ್ಯ ಗೆದ್ದಿದ್ದಾರೆ ಮತ್ತು ಗಂಡು ಮಗು ಆಗಿದೆ ಎನ್ನುವ ಶುಭ ಸಂದೇಶ ಕೇಳಿಸಿ ಕೊಂಡ ನವಾಬರು ಬಡವೆಂಕಣ್ಣನ ಅದೋನಿಗೆ ದಿವಾನನನ್ನಾಗಿ ನಿಯಾಮಕ ಮಾಡಿದರು.

#### ನವಾಬರ ಪರೀಕ್ಷೆ:

ಆದೋನಿ ನವಾಬರು ಸಿದ್ಧಿ ಮಸೂದ್ ಖಾನ್ ದಿವಾನ ವೆಂಕಣ್ಣರವರಿಂದ ರಾಯರ ಮಹಿಮೆ ತಿಳಿದುಕೊಂಡು ರಾಯರನ್ನು ನವಾಬರ ಆಸ್ಥಾನಕ್ಕೆ ಬರಲು ಆಹ್ವಾನ ಕಳಿಸಿದರು. ರಾಯರು ನವಾಬರ ಆಸ್ಥಾನಕ್ಕೆ ಬಂದಾಗ ತಟ್ಟೆಯಲ್ಲಿ ಮಾಂಸ ಖಂಡಗಳನ್ನಿಟ್ಟು ಉಡುಗೊರೆಯಾಗಿ ಸ್ವೀಕರಿಸಲು ಕೇಳಿಕೊಂಡರು.ರಾಯರು ತಟ್ಟೆಯಲ್ಲಿರುವ ಪದಾರ್ಥವನ್ನು ಕಮಂಡಲದಲ್ಲಿರುವ ತೀರ್ಥದಿಂದ ಪ್ರೋಕ್ಷಣೆ ಮಾಡಿ ಮೂಲ ರಾಮನನ್ನು ನೆನೆದರು. ಮಾಂಸ ಖಂಡಗಳು ಹಣ್ಣುಗಳಾಗಿ ಬದಲಾಗಿತು.ಇದನ್ನು ಕಂಡ ನವಾಬರು ರಾಯರನ್ನು ಕ್ಷಮೆ ಬೇಡಿ ರಾಯರ ಪಾದಕ್ಕೆ ಶರಣಾದರು.

### ಸರ್ ಥಾಮಸ್ ಮನ್ರೋ ಶ್ರೀಮಠದ ದರ್ಶನ :

ಇಮಾಮ್ ಭೂಮಿಗಳನ್ನು ಬ್ರಿಟಿಷ್ ಆಡಳಿತ ಜಪ್ತು ಗೊಳಿಸಿಕೊಳ್ಳಲು ನಿರ್ಧರಿಸಿ ಆದೇಶ ನೀಡಿತು.ಮಂಚಾಲೆ ಗ್ರಾಮವು ಇದರ ಪರಿಗಣದಲ್ಲಿ ಬರುವುದರಿಂದ ಜಪ್ತುಗೊಳಿಸಲು ಸರ್ ಥಾಮಸ್‌ಮನ್ರೋ ಶ್ರೀಮಠಕ್ಕೆ ಬಂದರು. ರಾಯರ ದರ್ಶನ ಮಾಡಲು ಬೃಂದಾವನದ ಮುಂದೆ ಬಂದಾಗ ರಾಯರು ಮನ್ರೋ ಜೊತೆ ಆಂಗ್ಲ ಭಾಷೆಯಲ್ಲಿ ಮಂತ್ರಾಲಯ ಕ್ಷೇತ್ರ ಮಹಿಮೆ ಮತ್ತು ಧಾರ್ಮಿಕ ಮಠದ ಬಗ್ಗೆ ವಿವರಿಸಿದರು. ಫಲ ಮಂತ್ರಾಕ್ಷತೆ ಪಡೆದು ಮಂಚಾಲೆ ಗ್ರಾಮ ಜಪ್ತು ಮಾಡಬಾರದೆಂದು ಸಿಫಾರಸ್ಸು ಮಾಡಿದರು.

### ಒನಕೆ ಚಿಗುರಿತು:

ರಾಯರು ಧರ್ಮ ಪ್ರಚಾರ ಮಾಡುತ್ತಾ ಶಿರ್ಸಿಂಗಿ ಎನ್ನುವ ಗ್ರಾಮಕ್ಕೆ ಬಂದರು.ಗ್ರಾಮದ ಮುಖ್ಯಸ್ಥ ನಾಸ್ತಿಕನಾಗಿದ್ದು ಒನಕೆಯನ್ನು ಚಿಗುರಿಸಲು ಸವಾಲನ್ನು ಹಾಕಿದರು. ರಾಯರು ಮಂತ್ರ ಪಠಿಸಿ ಮೂಲರಾಮರನ್ನು ಸ್ಮರಿಸುತ್ತಾ ಕಮಂಡಲದಿಂದ ತೀರ್ಥವನ್ನು ಒನಕೆ ಮೇಲೆ ಪ್ರೋಕ್ಷಣೆ ಮಾಡಿದರು.ಒನಕೆ ಚಿಗುರಿತು, ನಾಸ್ತಿಕನು ರಾಯರ ಪಾದಕ್ಕೆ ನಮಸ್ಕರಿಸಿದನು.

### ಮಂಚಾಲೆ ಗ್ರಾಮ ಮಂತ್ರಾಲಯವಾಯಿತು:

ರಾಯರು ಮಂಚಾಲೆಗೆ ಬಂದಾಗ ಶ್ರೀ ಪ್ರಹ್ಲಾದರು ಮಾಡಿದ ಯಜ್ಞ ಕುಂಡವನ್ನು ಗುರುತಿಸಿದರು. ಇದೇ ಸ್ಥಳದಲ್ಲಿ ಬೃಂದಾವನ ನಿರ್ಮಾಣವಾಗಬೇಕೆಂದು ಸೂಚಿಸಿದರು. ಮಂಚಾಲೆ ಹತ್ತಿರ ಮಾಧವರ ಗ್ರಾಮದ ಬಳಿ ಗುರುತಿಸಿದ ಕಲಿಯ ಶಿಲೆಯಿಂದ ಬೃಂದಾವನ ನಿರ್ಮಾಣವಾಗಬೇಕೆಂದು ದಿವಾನ್ ವೆಂಕಣ್ಣನಿಗೆ ಆಜ್ಞೆ ಕೊಟ್ಟರು. ಶ್ರೀ ರಾಮಚಂದ್ರರು ಅರಣ್ಯವಾಸ ಮಾಡುವಾಗ ಈ ಶಿಲೆ ಮೇಲೆ ವಿಶ್ರಾಂತಿ ತೆಗೆದುಕೊಂಡರು ಎಂದು ಹೇಳಿದರು.ಮಂಚಾಲೆಗ್ರಾಮ ದೇವತೆ ಮಂಚಾಲಮ್ಮ.ರಾಯರು ಮಂಚಾಲಮ್ಮ ದೇವತೆಯನ್ನು ಬೃಂದಾವನ ಪ್ರವೇಶ ಮಾಡಲು ಅಪ್ಪಣೆ ಕೇಳಿಕೊಂಡರು. ರಾಯರ ಶಿಷ್ಯರಾದ ಯೋಗೀಂದ್ರ ತೀರ್ಥರನ್ನು ಶ್ರೀ ಮಠದ ಉತ್ತರಾಧಿಕಾರಿಯಾನ್ನಾಗಿ ನಿಯಮಿಸಿ ಪಾದುಕೆಗಳನ್ನು ಕೊಟ್ಟರು.ಶ್ರೀ ಮಠವನ್ನು ಸಾಂಪ್ರದಾಯಕವಾಗಿ ಪಾಠ, ಪ್ರವಚನ, ಗ್ರಂಥ ರಚನೆ ಮತ್ತು ಭಕ್ತರ ಉದ್ಧಾರಕ್ಕಾಗಿ ಮುಂದೆ ನಡೆಸಲು ಅಪ್ಪಣೆಯನ್ನು ಕೊಟ್ಟರು.ರಾಯರು ಭಕ್ತಾದಿಗಳನ್ನು ಕರುಣೆಯಿಂದ ನೋಡುತ್ತಾ ನಾ ನಿಂದು ಬೃಂದಾವನ ಪ್ರವೇಶ ಮಾಡಲಿದ್ದೇನೆ. ದೇಹತ್ಯಾಗ ಮಾಡುತ್ತಿಲ್ಲ, ಯೋಗದಲ್ಲಿ ಇದ್ದು ಬೃಂದಾವನ ದಿಂದ ದರ್ಶನ ಕೊಟ್ಟು ನಿಮ್ಮೆಲ್ಲರ ಅಭೀಷ್ಟವನ್ನು ನೆರವೇರಿಸುವೆನು. ಹರಿಯ ಆದೇಶದಂತೆ ನಾನು ಬೃಂದಾವನ ಪ್ರವೇಶ ಮಾಡುವೆನು. ನಾನು ಬೃಂದಾವನದಲ್ಲಿ ಶ್ರೀ ಹರಿಯ ಧ್ಯಾನ ಮಾಡುತ್ತಾ 700 ನೂರು ವರ್ಷ ಕಾಲ ಭಕ್ತರ ಬೇಡಿಕೆಗಳನ್ನು ಪೂರೈಸುವೆನು. ನಾನು ನಿಮ್ಮ ಜೊತೆ ಇಲ್ಲವೆಂದು ಚಿಂತೆ ಬೇಡ. ನನ್ನ ಭಾಷ್ಯ, ಮಧ್ವ ಮಠದ ಸಿದ್ಧಾಂತದೊಡನೆ ನಾನು ಬೃಂದಾವನದಲ್ಲಿ ನೆಲೆಸಿರುವೆನು ಎಂದು ಹೇಳಿದರು.

### ಬೃಂದಾವನ ಪ್ರವೇಶದ ಮುನ್ನ ರಾಯರ ಬೋಧನೆ

ಆಧ್ಯಾತ್ಮಿಕ ಚಿಂತನೆ ಇರಬೇಕು. ಆಧ್ಯಾತ್ಮಿಕ ಚಿಂತನೆ ಮಾಡುವುದರಿಂದ ಆತ್ಮಜ್ಞಾನ ಸಿಗುವುದು, ಜ್ಞಾನದಿಂದ ಸರಿಯಾದ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುವುದು. ಮಾನವ ಜೀವನವೇ ಒಂದು ಪೂಜೆ ಇದ್ದಂತೆ.ಮಾಡುವ ಕರ್ಮಗಳು ಕೂಡ ಪೂಜೆ ಆಗುವುದು. ಸಮಯ ಅಮೂಲ್ಯವಾದದ್ದು.ಕಳೆದು ಹೋದ ಒಂದು ಘಳಿಗೆಯೂ ಮತ್ತೆ ಸಿಗಲಾರದು.ಸಾಮಾಜಿಕ ಸೇವೆ ಮತ್ತು ಸಂಘದಲ್ಲಿ ಮಾಡುವ ಸೇವೆಯನ್ನು ಭಗವಂತನ ಸೇವೆಯಾಗಿ ಭಾವಿಸಬೇಕು. ತಪ್ಪು ಮಾಡಿದಾಗ ಪ್ರಾಯಶ್ಚಿತ ಪಡಬೇಕು.ತಂದೆ ತಾಯಿ ಗುರು ಮತ್ತು ದೇವರಲ್ಲಿ ಭಕ್ತಿ ಗೌರವ ಇರಲಿ ವೇದ ಶಾಸ್ತ್ರದಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಗುವುದು. ವೇದ ಶಾಸ್ತ್ರದಲ್ಲಿ ನಂಬಿಕೆ ಇರಲಿ ಧರ್ಮ ಮತ್ತು ಶಾಸ್ತ್ರ ಪರವಾಗಿ ನಡೆಸಲು ಜೀವನದಲ್ಲಿ ಮನೋವಿಕಾಸ ಸುಖ ಸಂತೋಷಗಳು ಸಿಗುವುದು. ಮಾನವ ಜೀವನದಲ್ಲಿ ಪರಮಾತ್ಮನ ಸೇವೆ ಅತಿ ಮುಖ್ಯ.ಏಕಾದಶಿ ದಿನಗಳಲ್ಲಿ, ಕೃಷ್ಣಾಷ್ಟಮಿಯಂದು ಉಪವಾಸ ಮಾಡಬೇಕು. ಸದಾ ಶ್ರೀ ಹರಿಯ ಧ್ಯಾನ ಮತ್ತು ಸೇವೆ ಮಾಡಬೇಕು. ಪರಮಾತ್ಮನು ಜಗತ್ತಿನಲ್ಲಿ ಉತ್ತಮನು ಎಂದು ಭಾವನೆ ಪಡೆದು ಭಕ್ತಿಯಿಂದ ಶರಣಾಗತರಾಗಬೇಕು. ಭಗವಂತನು ಸರ್ವೋತ್ತಮನೆಂದು ನಂಬುವುದೇ ನಿಜವಾದ ಭಕ್ತಿ ವೇದ ಉಪನಿಷತ್ ಬ್ರಹ್ಮ ಸೂತ್ರ ಮತ್ತು ಶ್ರೀ ಮದಚಾರ್ಯರ ದ್ವೈತ ಸಿದ್ಧಾಂತದ ಮೇಲೆ ನಂಬಿಕೆ. ಗೌರುವ ಇರಲಿ ಸದಾ ಸತ್ಯವನ್ನು ನುಡಿಯಬೇಕು. ಸದಾಚಾರ ಜೀವನ ಜೀವಿಸಬೇಕು. ಕರ್ಮದ ಫಲಾಪೇಕ್ಷೆ ಇಲ್ಲದೆ ಸತ್ಕರ್ಮಗಳ್ಳನು ಮಾಡುತ್ತಾ ಹರಿಚರಣವ ನಂಬಿ ಶಾಸ್ತ್ರ ಮಾರ್ಗದಲ್ಲಿ ಗುರು ತೋರಿದ ಹಾದಿಯಲ್ಲಿ ನಡೆಯಬೇಕು. ಇದೇ ಶ್ರೀ ಮದಾಚಾರ್ಯರ ಸಿದ್ಧಾಂತ. ಪ್ರಹ್ಲಾದ, ಧ್ರುವ, ಸನಕ ಸನಂದಾದಿಗಳು ಇದೇ ಮಾರ್ಗದಲ್ಲಿ ನಡೆದರು. ಮಾನವನ ಜನ್ಮ ಅಮೂಲ್ಯವಾದದ್ದು. ಭಗವಂತನ ಸೇವೆ ಮಾಡಬೇಕು.ಭಗವಂತನು ಸರ್ವೋತ್ತಮ. ಹರಿಯೇ ಸರ್ವೋತ್ತಮ.

ಕ್ರಿ.ಶ. 1671 ವರ್ಷದಲ್ಲಿ ವಿರೋಧಿಕೃತ್ ಸಂವತ್ಸರ ಶ್ರಾವಣ ಕೃಷ್ಣ ಪಕ್ಷ ದ್ವಿತಿಯ ಶುಕ್ರವಾರ ಗುರುರಾಯರು ಬೃಂದಾವನ ಪ್ರವೇಶ ಮಾಡಿದರು.ರಾಯರು ಬೃಂದಾವನ ಪ್ರವೇಶ ಮಾಡಿ ಜಪವನ್ನು ಮಾಡುತ್ತಿದ್ದರು. ಜಪಮಾಲೆ ನಿಂತ ಮೇಲೆ 1200ಸಾಲಿಗ್ರಾಮಗಳನ್ನು ಇಟ್ಟು ಶಿಲೆಗಳನ್ನು ಮುಚ್ಚ ಬೇಕು ಎನ್ನುವ ರಾಯರ ಆಜ್ಞೆಯಂತೆ ದಿವಾನ್ ವೆಂಕಣ್ಣ ಮತ್ತು ಭಕ್ತಾದಿಗಳು ಆಜ್ಞೆಯನ್ನು ಪಾಲಿಸಿದರು. ವಿಷಯ ತಿಳಿದಂತೆ ರಾಯರ ಪರಮಭಕ್ತನಾದ ಅಪ್ಪಣ್ಣಾಚಾರ್ಯರು ಚಿಂತಿತರಾಗಿ ಮಂತ್ರಾಲಯ ಗ್ರಾಮ ಸೇರಿದಾಗ ರಾಯರ ಬೃಂದಾವನ ಪ್ರವೇಶವಾಯಿತು. ಅಪ್ಪಣ್ಣಾಚಾರ್ಯರು ಸ್ತೋತ್ರ ಪಠಿಸುತ್ತಾ ಕೊನೆಯ ಶ್ಲೋಕ ಉಚ್ಚಾರಣೆ ಮಾಡುತ್ತಾ ರಾಯರ ಸನ್ನಿಧಿಗೆ ಸೇರಿದರು. **ಯೋ ಭಕ್ತ್ಯಾ ಗುರುರಾಘವೇನ್ದ್ರ ಚರಣ ದ್ವನ್ದ್ವಂಸ್ಮರನ್ ಯಃಪಠೇತ್। ಸ್ತೋತ್ರಂ ದಿವ್ಯ ಮಿದಂ ಸದಾ ನಹಿ ಭವೇತ್ತಸ್ಯಾಸುಖಂ ಕಿಂಚನ। ಕಿಂ ತ್ವಿಷ್ಟಾರ್ಥ ಸಮೃದ್ಧಿರೇವ ಕಮಲಾನಾಥ ಪ್ರಸಾದೋ ದಯಾತ್। ಕೀರ್ತಿರ್ದಿಗ್ವಿದಿತಾ ವಿಭೂತಿರತುಲಾ"** ಎಂದು ಪಠನೆ ಮಾಡುವಾಗ ಬೃಂದಾವನ ಬಳಿ ಬಂದರು.ದುಃಖದಲ್ಲಿ ಮಾತು ಬಾರದಂತಾಯಿತು. ರಾಯರು ಬೃಂದಾವನದಿಂದ **"ಸಾಕ್ಷೀ ಹಯಾಸ್ಯೋಽತ್ರಹಿ ಹಯಗ್ರೀವ ದೇವರು ಸಾಕ್ಷಿ"**ಎಂದು ಹೇಳಿ ಸಂತಸಗೊಳಿಸಿದರು. ರಾಯರು ಬೃಂದಾವನದಲ್ಲಿದ್ದು ಭಕ್ತರ ಬೇಡಿಕೆಯನ್ನು ಈಡೇರಿಸುತ್ತಾರೆ ಎನ್ನುವುದಕ್ಕೆ ಇದು ನಿರ್ವಚನ. ಪ್ರತಿ ವರ್ಷ ಶ್ರಾವಣ ಕೃಷ್ಣಪಕ್ಷ ಪ್ರಥಮದಂದು ಪೂರ್ವಾರಾಧನೆ, ಬಿದಿಗೆಯಂದು ಮಧ್ಯಾರಾಧನೆ ಮತ್ತು ತದಿಗೆಯಂದು ಉತ್ತರಾಧನೆ ಸೇವೆ ನಡೆಯುವುದು. ಮಂತ್ರಾಲಯದಲ್ಲಿ ಮತ್ತು ಎಲ್ಲೆಡೆ ಸ್ಥಾಪಿಸಿರುವ ರಾಯರ ಮಠಗಳಲ್ಲಿ ರಾಯರ ಆರಾಧನೆ ಭಕ್ತಿ ಶ್ರದ್ಧೆಯಿಂದ ನಡೆಯುವುದು. ಕಲಿಯುಗದಲ್ಲಿ ಕಾಮಧೇನು ಕಲ್ಪವೃಕ್ಷ ಒಡಗೂಡಿ ಭಕ್ತರಪಾಲಿಗೆ ವರಚಿಂತಾಮಣಿಯಾಗಿ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ತೀರ್ಥರು ನೆಲೆಸಿದ್ದಾರೆ. ರಾಯರ ಸೇವೆ ಮಾಡುವ ಭಾಗ್ಯ ನಮ್ಮದಾಗಲಿ, ಗುರುರಾಯರ ಪಾದಚರಣಾರವಿಂದ ಸದಾ ನಮ್ಮ ತಲೆ ಮೇಲಿರಲಿ.

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ
"ಹರಿಯೇ ಸರ್ವೋತ್ತಮ ವಾಯು ಜೀವೋತ್ತಮ"
ಸರ್ವೇಜನಾಃ ಸುಖಿನೋ ಭವಂತು ಸಮಸ್ತ ಸನ್ಮಂಗಳಾನಿ ಸಂತು

ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು



# ಯುವಕರಿಗೆ ಬೇಕಾಗಿರುವುದು ಸಾತ್ವಿಕ ಸುಖ



**ಮೂಲ - ವೈಷ್ಣವಾಂಘ್ರಿ ಸೇವಕ್‌ದಾಸ್**

**ಅನುವಾದ - ಡಿ.ಎಸ್. ಭೂಮಿಕ**

ಪ್ರತಿ ವ್ಯಕ್ತಿ ಸುಖಾಭಿಲಾಷಿಯೇ ಆಗಿರುತ್ತಾನೆ. ಸುಖವನ್ನು ಕೋರುವವನು ದುಃಖವನ್ನೆಂದೂ ಕೋರಿಕೊಳ್ಳುವುದಿಲ್ಲ. ಇದು ಮನುಷ್ಯರಿಗೊಂದೇ ಅಲ್ಲ ಪಶುಗಳಿಗೂ ಅನ್ವಯಿಸುತ್ತದೆ. ಆದರೆ ಮನುಷ್ಯನಿಗೆ ಪಶುಗಳಿಗೆ ವ್ಯತ್ಯಾಸವೇನೆಂದರೆ ಮನುಷ್ಯನಿಗೆ ಎಂತಹ ಸುಖವನ್ನು ಕೋರಬೇಕೆಂಬ ಪರಿಜ್ಞಾನವಿರುತ್ತದೆ ಆದರೆ ಅದನ್ನು ಪಶುಗಳು ನಿರ್ಣಯಿಸಲಾರವು. ಇದಕ್ಕೆ ಮುಖ್ಯ ಕಾರಣ ಪಶುಗಳ ಮರೆಗೊಳಿತನ ಅಥವಾ ಬುದ್ಧಿಯನ್ನು ಉಪ ಯೋಗಿಸಬಲ್ಲಂತಹ ಶಕ್ತಿಯಿಲ್ಲದಿರುವುದು ಎನ್ನಬಹುದು. ಗೀತಾಚಾರ್ಯರು ಭಗವದ್ಗೀತೆಯಲ್ಲಿ ಒಂದು ಮುಖ್ಯವಾದ ವಿಷಯವನ್ನು ಉಪದೇಶಿಸುತ್ತಾ ಶಾಂತಿಯಿಲ್ಲದೇ ಸುಖವು ಖಂಡಿತ ಲಭಿಸದು ಎಂದಿದ್ದಾರೆ. ಇದು ಬಹಳ ಸಾವಧಾನವಾಗಿ ಗುರುತಿಸಬಹುದುದಾದ ವಿಷಯ.ಸುಖವನ್ನು ಕೋರುವವರು ಮೊದಲು ಶಾಂತಿಯನ್ನು ಹೊಂದಬೇಕು. ಏಕೆಂದರೆ, ಶಾಂತಿ ಯುತರಾಗಿದ್ದುದರಿಂದಲೇ ಮನುಷ್ಯ ತಾನು ಅಂದು ಕೊಂಡದ್ದನ್ನು ಸಾಧಿಸಬಲ್ಲವನಾಗುತ್ತಾನೆ.ಅಂದರೆ ಶಾಂತಿಯಲ್ಲೇ ವಿಜಯವು ಸಾಧನೆಯಾಗುತ್ತದೆ.ಇನ್ನು ವಿಜಯವನ್ನು ಹೊಂದಿದವನು ನಿಶ್ಚಯವಾಗಿ ಸುಖವನ್ನು ಹೊಂದುತ್ತಾನೆ.

ಸೀತಾನ್ವೇಷಣೆ ಕಾರ್ಯದಲ್ಲಿ ನಿರತಗೊಂಡ ವಾನರರಲ್ಲಿ ಆಂಜನೇಯನೂ ಒಬ್ಬನು.ತನ್ನ ಶಕ್ತಿಯೇನೆಂಬುದು ತನಗೆ ಅರಿವಾಗದೇ ನಿಷ್ಕ್ರಿಯವಾಗಿ ಕುಳಿತಿರುವಾಗಿ ಜಾಂಬುವಂತನು.ಇತರ ವಾನರರು ಆತನಿಗೆ ಪರಮ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಆಗ ಹನುಮಂತನ ಹೃದಯವು ಆನಂದದಿಂದ ಶಾಂತಗೊಂಡಿದೆ ಆದ್ದರಿಂದಲೇ ಈ ಶಾಂತಿಮಯ ಹೃದಯದಿಂದ ಆತನು ಖಚಿತವಾಗಿ ಸೀತಾಮಾತೆಯನ್ನು ಕಂಡು ಸಮಾಚಾರವನ್ನು ತೆಗೆದುಕೊಂಡು ಬರುವುದಾಗಿಯೂ ಅಲ್ಲಿಯವರೆಗೆ ಸಮುದ್ರ ತೀರದಲ್ಲೇ ಇರಬೇಕೆಂದೂ ಹೇಳಿ ಲಂಕೆಯ ಕಡೆಗೆ ಹೊರಟಿದ್ದಾನೆ. ಮನಸ್ಸು ಶಾಂತಿಯಿಂದ ಇರುವುದರಿಂದಲೇ ಆತನಿಗೆ ಕಾರ್ಯ ಸಾಧನೆಯಲ್ಲಿ ಯಾವುದೇ ಅಡ್ಡಿ ಆತಂಕಗಳು ಬರಲಿಲ್ಲ.ಬಂದರೂ ಎಲ್ಲಾ ವಿರೋಧಾಹರಿ ಬಾಸಗಳನ್ನು ಎದುರಿಸಿ ಆಂಜನೇಯನು ವಿಜಯವನ್ನು ಸಾಧಿಸಿ ಕಡೆಗೆ ಶ್ರೀ ರಾಮನನ್ನು ಸೇರಿ ಕೊಂಡಿದ್ದಾನೆ.ಇದೇ ಶಾಂತಿಯ ಮೂಲಕ ಉಂಟಾಗುವ ವಿಜಯ ಮತ್ತು ವಿಜಯದಿಂದುಂಟಾಗುವ ಸುಖದ ಪದ್ಧತಿ.

ಆದರೆ ಭಗವದ್ಗೀತೆಯು ಒಂದು ಹೆಜ್ಜೆ ಮುಂದಿಡುವ ಸುಖದಲ್ಲಿ ಕೂಡಾ ಮೂರು ಬಗೆಗಳಿರುತ್ತವೆಂದು ಹೇಳುತ್ತಾರೆ. ಗೀತೋಪದೇಶದನುಸಾರ ಯಾರು ಸಾತ್ವಿಕ ಸುಖದ ಸಲುವಾಗಿ ಪ್ರಯತ್ನ ಪಡುತ್ತಾರೋ ಅವರು ಸಕಲ ದುಃಖಗಳಿಂದ ನಿರ್ಗಮಿಸುತ್ತಾರೆ.

'ಓ ಭರತವಂಶದ ಶ್ರೇಷ್ಠನೇ! ಇನ್ನು ಮೂರು ಬಗೆಯ ಸುಖಗಳ ಕುರಿತು ನನ್ನಿಂದ ಕೇಳುವವನಾಗು, ಆದರಿಂದ ಬದ್ಧ ಜೀವಿಯು ಭೋಗಿಸಿ ಒಂದಲ್ಲೊಂದು ದಿನ ದುಃಖಗಳ ಅಂತ್ಯಕ್ಕೆ ಸೇರಿದವನಾಗುತ್ತಾನೆ.''(ಭಗವದ್ಗೀತೆ 18 ನೇ ಅಧ್ಯಾಯ 36 ನೇ ಶ್ಲೋಕ)

''ಯಾವುದು ಆರಂಭದಲ್ಲಿ ವಿಷಯ ಸುಖವಾಗಿ ಮೊದಲುಗೊಂಡು ಕಡೆಗೆ ಅಮೃತೋಪೇದವಾಗಿ ಆಗುತ್ತದೋ,ಯಾವುದು ಮನುಷ್ಯರಿಗೆ ಆತ್ಮಾನುಭೂತಿಯೆಡೆಗೆ ಜಾಗರೂಕನನ್ನಾಗಿ ಮಾಡುತ್ತಿದೆಯೋ ಅದೇ ಸಾತ್ವಿಕ ಸುಖವೆಂದೆನಿಸಿಕೊಳ್ಳುತ್ತದೆ.''

(ಭಗವದ್ಗೀತೆ 18 ನೇ ಅಧ್ಯಾಯ 37 ನೇ ಶ್ಲೋಕ )

ಸಾತ್ವಿಕ ಸುಖದಲ್ಲಿ ಮೊಟ್ಟಮೊದಲು ತಪಸ್ಸುಂಟಾಗುತ್ತದೆ.ತಪಸ್ಸೆಂದರೆ ವಿಷವಾಗಿಯೇ ಇರುತ್ತದೆ. ಆದರೆ ಗುರಿ ಸಾಧನೆಯಲ್ಲಿರುವವರೆಗೆ ಯಾವುದೇ ಶಾರೀರಿಕ ತಪಸ್ಸಿಗೂ ಹೆದರುವವರಲ್ಲ.ಐದು ವರುಷದಿಂದ ಹತ್ತು ವರ್ಷದವರೆಗೆ ದಿನವೂ ಐದಾರು ಗಂಟೆ ತೀವ್ರವಾಗಿ ಪರಿಶ್ರಮಿಸಿದಲ್ಲಿ ಯಾರಿಗಾದರೂ ಒಲಂಪಿಕ್ ಆಟದಲ್ಲಿ ಬಂಗಾರು ಪತಕ ಲಭಿಸುತ್ತದೆ. ಬಂಗಾರ ಪದಕ ಹೊಂದುವ ಕ್ಷಣ ಅಲ್ಪವೇ ಆದರೂ ಹಾಗೆ ತೆಗೆದ ಫೋಟೋ ಜೀವನಾಂತ್ಯದವರೆಗೆ ಸುಖವನ್ನು ನೀಡುತ್ತದೆ.ಆನಂದವನ್ನೀಯುತ್ತದೆ. ಅದೇ ರೀತಿಯಲ್ಲಿ ಬಾಯಿಗೆ ಕಹಿಯನ್ನುಂಟು ಮಾಡುವುದು ಶರೀರಕ್ಕೆ ಸುಖವನ್ನುಂಟು ಮಾಡುತ್ತದೆ. ಹಾಗಲಕಾಯಿಯ ಪಲ್ಯ, ಬೇವಿನ ಸೊಪ್ಪು ಕಹಿ. ಆದರೆ ಅವುಗಳು ದೇಹಕ್ಕೆ ಅದೆಷ್ಟೋ ಹಿತವನ್ನೀಯುತ್ತವೆ. ಮಿಠಾಯಿ ಬಾಯಿಗೆ ಅದೆಷ್ಟೋ ಸಿಹಿ, ರುಚಿಯನ್ನು ಕೊಡುತ್ತದೆ.ಆದರೆ ಶರೀರಕ್ಕೆ ಬಹಳಾ ಹಾನಿಯನ್ನುಂಟು ಮಾಡು ತ್ತದೆ.ಆದರೆ ಯುವಕರು ಯಾವತ್ತಿಗೂ ಸಾತ್ವಿಕ ಸುಖದ ಭೋಜನವನ್ನೇ ಮಾಡಬೇಕು.ಸಾತ್ವಿಕ ಸುಖವನ್ನೇ ಕೋರಿ ಕೊಳ್ಳಬೇಕು. ಸಾತ್ವಿಕಸುಖವನ್ನು ಬಯಸುವುದೇ ಆದರೆ ನಿಶ್ಚಯವಾಗಿ ಬರುವ ಫಲ ಅಮೃತಸಾದೃಶ್ಯವಾಗಿರುತ್ತದೆ. ಸಾತ್ವಿಕ ಸುಖವನ್ನು ಕೋರುವುದಾದರೆ ಅದಕ್ಕೆ ತಕ್ಕಂಥ ಹವ್ಯಾಸಗಳನ್ನೇ ಮಾಡಬೇಕು. ತಕ್ಕುದಾದ ಕಾರ್ಯಗಳನ್ನೇ ಎಸಗಬೇಕು.ಅದಕ್ಕನುಗುಣವಾದ ಸ್ವಭಾವವನ್ನೇ ಬೆಳೆಸಿಕೊಳ್ಳಬೇಕು.ಆಗ ಆರೋಗ್ಯವೂ ಚೆನ್ನಾಗಿರುತ್ತದೆ ಮತ್ತು ಮನಸ್ಸು ಚೆನ್ನಾಗಿರುತ್ತದೆ.ಬುದ್ಧಿಯೂ ಸರಿಯಾಗಿ ಕೆಲಸ ಮಾಡುತ್ತವೆ. ಆಗ ವಿಜಯಗಳು ಸಿದ್ಧಿಸುತ್ತವೆ.ಕಡೆಗೆ ಸುಖವೂ ಸಹಾ ಖಚಿತವಾಗಿ ನಿಮ್ಮ ಪರವಾಗೇ ಆಗುತ್ತದೆ.



ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯ ಆರ್ಜಿತ ಸೇವೆಗಳು - ತಿರುಮಲೆ



## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ|| | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ|| | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ|| | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ|| | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ|| | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ|| | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ|| | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ|| | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ|| | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ|| | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ|| | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ|| | 1 | ರೂ. 850.00 |
| 13. | ಅ.ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ|| | 2 (ಗಂಡ ಹೆಂಡತಿ) | ರೂ. 12,250.00 |
| ಆ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ|| | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ|| | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ|| | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ|| | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ|| | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ|| | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ|| | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ|| | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ|| | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ|| | 1 | ರೂ. 300.00 |

Call Centre : 0877–2233333,
0877–2277777
Toll free : 18004254141,
1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕ್ಕೆಟ್ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.

# ಹಿಪ್ಪಲಿಯಿಂದ ಆರೋಗ್ಯ ಸಂರಕ್ಷಣೆ



**ಮೂಲ. ಡಾ॥ ಸಿ. ಮಧುಸೂದನ ಶರ್ಮ**

**- ಅನುವಾದ : ಶ್ರೀಮತಿ.**

ಹಿಪ್ಪಳಿ ಒಂದು ಬಗೆಯ ವಿಶೇಷ ಜಾತಿಯ ಫಲಗಳು.ಒಣಗಿದ ಹಿಪ್ಪಲಿ ಆಯುರ್ವೇದ ವಿಕ್ರಯಾಲಯಗಳಲ್ಲಿ ವರ್ಷವಿಡೀ ಲಭಿಸುತ್ತವೆ.

ತೀಕ್ಷ್ಣವಾದ ಬೀಜಗಳನ್ನು ಹೊಂದಿರುವುದರಿಂದ ತೀಕ್ಷ್ಣ ತಂಡಲ ಎಂದೂ,ಖಾರವಾದ ರುಚಿಯನ್ನು ಹೊಂದಿ ಉಷ್ಣದ ಗುಣವನ್ನು ಹೊಂದಿರುವುದರಿಂದ ಉಷಣ ಎಂದೂ, ಚಿಕ್ಕದಾದ ಕಣಗಳನ್ನು ಹೊಂದಿರುವುದರಿಂದ 'ಕಣ' ಎಂದೂ ಸಂಸ್ಕೃತದಲ್ಲಿ ಇದಕ್ಕೆ ಹೆಸರು.

ಆಂಗ್ಲದಲ್ಲಿ Long Pepper ಎಂದು ವ್ಯವಹರಿಸಲ್ಪಡುವ, ಪಾಪಿಲಿಯಾನೇಸಿ ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಈ ಹಿಪ್ಪಲಿಯ ಶಾಸ್ತ್ರೀಯ ನಾಮಧೇಯ 'ಪೈಪರ್ ಲಾಂಗಮ್'.

ಅತ್ಯಂತ ಶಕ್ತಿಯುತವಾದ ವಿವಿಧ ರಾಸಾಯನಿಕ ಪದಾರ್ಥಗಳನ್ನು ಔಷಧೀಯ ಗುಣಗಳನ್ನು ಸಂಗ್ರಹಿಸಿ ಮನುಕುಲಕ್ಕೆ ಭಗವಂತನು ಪ್ರಸಾದಿಸಿರುವ ಈ ಹಿಪ್ಪಲಿಯ ಗುಣಗಳನ್ನರಿತು ಅದರ ಸದುಪಯೋಗವನ್ನು ಮಾಡಿಕೊಂಡಲ್ಲಿ ನಾವು ಸಂಪೂರ್ಣ ಆರೋಗ್ಯವನ್ನು ಹೊಂದಬಹುದು.

ಹಿಪ್ಪಲಿಯನ್ನು ಕುಟ್ಟಿ ಔಷಧಿಯಾಗಿ ಬಳಸಬಹುದು.

ನಾವು ಎದುರಿಸುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಹಿಪ್ಪಲಿಯ ಮೂಲಕ ಹೇಗೆ ಪರಿಹಾರ ದೊರೆಯಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

### ಸೋಂಕಿಗೆ

ನಿತ್ಯ ಮುಂಜಾನೆ ಖಾಲಿಹೊಟ್ಟೆಯಲ್ಲಿ ಏಳುತ್ತಲೇ ಒಂದು ಗ್ರಾಂ ಹಿಪ್ಪಲಿ ಚೂರ್ಣವನ್ನು 100 ಮಿ.ಲೀ. ಉಗುರು ಬೆಚ್ಚಗಿನ ನೀರಿನಲ್ಲಿ ಕಲಸಿ ಕುಡಿಯುತ್ತಿದ್ದರೆ ರೋಗನಿರೋಧಕ ಶಕ್ತಿ ಹೆಚ್ಚಿ ಅಲರ್ಜಿಯ ಸ್ವಭಾವವು ಕುಗ್ಗಿ ಸೋಂಕು ವಾಸಿಯಾಗುತ್ತದೆ.

### ಮಕ್ಕಳಲ್ಲಿ ಹೊಟ್ಟೆ ಜಂತುಗಳು

ದಿನವೂ 1-2 ಬಾರಿ ವಯಸ್ಸಿಗನುಗುಣವಾಗಿ ಬಾರಿಯೊಂದಕ್ಕೆ 3-5 ಚಿಟಿಕೆಗಳು ಹಿಪ್ಪಲಿ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಸಿ ಮಕ್ಕಳಿಗೆ ಕೊಡುತ್ತಿದ್ದಲ್ಲಿ ಹೊಟ್ಟೆ, ಕರುಳುಗಳಲ್ಲಿರುವ ಹುಳ, ಜಂತುಗಳು, ಕೀಟಗಳಂತಹ ಜೀವಿಗಳು ಸತ್ತು, ತಿನ್ನುವ ಆಹಾರ ಚೆನ್ನಾಗಿ ಜೀರ್ಣವಾಗಿ ಹಸುಳೆಯರು ಆರೋಗ್ಯವಾಗಿರುತ್ತಾರೆ.

### ದೀರ್ಘಕಾಲಿಕ ಜ್ವರಕ್ಕೆ

50 ಗ್ರಾಂ ಹಿಪ್ಪಲಿ ಚೂರ್ಣವನ್ನು 100 ಗ್ರಾಂ ಬೆಲ್ಲದೊಂದಿಗೆ ಮೆತ್ತಗೆ ಕುಟ್ಟಿಟ್ಟುಕೊಂಡು ನಿತ್ಯ ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ 1-2 ಗ್ರಾಂ ಔಷಧಿಯನ್ನು ಸೇವಿಸಿ ಒಂದು ಕಪ್ಪು ಉಗುರು ಬೆಚ್ಚಗಿನ ಹಾಲು ಕುಡಿಯುತ್ತಿದ್ದರೆ ಉತ್ತಮ ಫಲಿತಾಂಶ ದೊರಕುತ್ತದೆ.

### ಗ್ಯಾಸ್‌ಟ್ರಬಲ್‌ಗೆ

ಹಿಪ್ಪಲಿ, ಶುಂಠಿ,ಕಾಳುಮೆಣಸು, ಜೀರಿಗೆ, ಕಲಸಿ ಮಾಡಿದ ಪುಡಿಯನ್ನು ಒಂದೊಂದು 25 ಗ್ರಾಂ, ಉಪ್ಪು 100 ಗ್ರಾಂ ಕಲಸಿಟ್ಟು ಕೊಂಡು ದಿನವೂ ಬೆಳಗ್ಗೆ ಸಾಯಂಕಾಲ ಊಟಕ್ಕೆ ಅರ್ಧ ಗಂಟೆ ಮುಂಚೆ 100 ಮಿ.ಲೀ. ನೀರಿನಲ್ಲಿ 1-2 ಗ್ರಾಂ ಪುಡಿ, ಅರ್ಧ ನಿಂಬೆಹಣ್ಣಿನ ರಸ ಕಲಸಿ ಸೇವಿಸುತ್ತಿದ್ದರೆ ಹೊಟ್ಟೆ ದುಬ್ಬರ, ಹೊಟ್ಟೆನೋವು, ವಾಂತಿಬಂದಂತಾಗುವುದು ತಿಂದದ್ದು ಸರಿಯಾಗಿ ಜೀರ್ಣವಾಗದಿರುವುದು ಅಜೀರ್ಣದಂಥ ಸಮಸ್ಯೆಗಳು ದೂರವಾಗುತ್ತದೆ.

### ಕೀಲುನೋವಿಗೆ

100 ಗ್ರಾಂ ಪಿಪ್ಪಲಿ, 50 ಗ್ರಾಂ ಶುಂಠಿ ಚೂರ್ಣ,150 ಗ್ರಾಂ ಅಚ್ಚುಬೆಲ್ಲ ಕಲಸಿ ಮೆತ್ತಗೆ ಕುಟ್ಟಿಟ್ಟು ಕೊಂಡು ಎರಡು ಬಾರಿ, ಬಾರಿಯೊಂದಕ್ಕೆ 1-2 ಗ್ರಾಂ ಔಷಧಿಯನ್ನು ಸೇವಿಸುತ್ತಿದ್ದರೆ ಕೀಲು ನೋವು ಮುಖ್ಯವಾಗಿ ಅಧಿಕ ತೂಕದಿಂದ ಬರುವ ಕೀಲು ನೋವುಗಳು ಸಮಸ್ಯೆ ಬಗೆ ಹರಿಯುತ್ತದೆ.

### ಬಾಣಂತಿಯರು ಆರೋಗ್ಯಕ್ಕಾಗಿ

ಹಿಪ್ಪಲಿ,ಶುಂಠಿ ಜೀರಿಗೆ, ಹಿಪ್ಪಲಿ ಬೇರಿನ, ಚೂರ್ಣವನ್ನು ಒಂದೊಂದನ್ನು 100 ಗ್ರಾಂನಂತೆ ತೆಗೆದು ಕೊಂಡು ತುಪ್ಪ 100 ಗ್ರಾಂ, ಹಳೆಯ ಬೆಲ್ಲದ

ಪುಡಿ 200 ಗ್ರಾಂ ಕಲಸಿಟ್ಟುಕೊಂಡು ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ 2-3 ಗ್ರಾಂ ಔಷಧಿಯನ್ನು 100 ಮಿ.ಲೀ. ಉಗುರು ಬೆಚ್ಚಗಿನ ಹಾಲಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಬಾಣಂತಿಯರಲ್ಲಿ ಮೈಕೈನೋವು,ದೇಹಾಯಾಸ ತಗ್ಗುತ್ತವೆ. ಹೊಟ್ಟೆಯ ಭಾಗದಲ್ಲಿ ಕೊಬ್ಬು ಶೇಖರಣೆಯಾಗುವುದಿಲ್ಲ. ಮಗುವಿಗೆ ಸಾಕಾಗುವಷ್ಟು ಹಾಲು ಉತ್ಪತ್ತಿಯಾಗುತ್ತದೆ. ಇಂತಹ ಔಷಧಿಯಿಂದ ಉತ್ಪನ್ನಗೊಂಡ ಹಾಲಿನಿಂದ ಶಿಶುವಿನ ಆರೋಗ್ಯವೂ ಸುಧಾರಣೆಗೊಳ್ಳುತ್ತದೆ.



**ದಂತಧಾವನ ಚೂರ್ಣ**

ಹಿಪ್ಪಲಿ, ಜೀರಿಗೆ, ಸೈಂಧವ ಲವಣಗಳ ಚೂರ್ಣವನ್ನು ಒಂದೊಂದು 50 ಗ್ರಾಂನಂತೆ ಕಲಸಿಟ್ಟುಕೊಂಡು ದಿನವೂ ಒಂದು ಬಾರಿ ದಂತಧಾವನಕ್ಕೆ ಬಳಸುತ್ತಿದ್ದರೆ ಹಲ್ಲು, ವಸಡುಗಳು ನೋವು ವಸಡಿನಿಂದ ಕೀವು, ರಕ್ತ ಸೋರುವುದು, ಬಾಯಿಯ ದುರ್ವಾಸನೆ ನಾಲಿಗೆಯ ಅರುಚಿಯಂತಹ ಸಮಸ್ಯೆಗಳು ಕೊನೆಗೊಳ್ಳುತ್ತವೆ.

**ಆಸ್ತಮಾಕ್ಕೆ**

ಹಿಪ್ಪಲಿಯ ಪುಡಿ, ಬಿಳಿಕಬ್ಬಿನ ಹೂವು, ಒಂದೊಂದು 50 ಗ್ರಾಂನಂತೆ ತೆಗೆದುಕೊಂಡು ತಕ್ಕಷ್ಟು ಅನ್ನದ ಗಂಜಿಯಲ್ಲಿ ಮೆತ್ತಗೆ ನಾದಿ ಕಡಲೆ ಬೀಜದಷ್ಟು ಮಾತ್ರೆಗಳನ್ನು ಮಾಡಿಟ್ಟುಕೊಂಡು ವ್ಯಾಧಿಯ ತೀವ್ರತೆಯ ಮೇರೆಗೆ ದಿನವೂ 1 ಅಥವಾ 2 ಬಾರಿ ಒಂದು ಮಾತ್ರೆಯಂತೆ ನುಂಗಿ ತಕ್ಕಷ್ಟು ಉಗುರು ಬೆಚ್ಚಗಿನ ನೀರನ್ನು ಸೇವಿಸುತ್ತಿದ್ದರೆ ಆಸ್ತಮಾ ವ್ಯಾಧಿ ಸೂಕ್ತ ರೀತಿಯಲ್ಲಿ ನಿಯಂತ್ರಣಕ್ಕೆ ಬರುತ್ತದೆ.

**ಇಸ್ನೋಫಿಲಿಯಾಕ್ಕೆ**

ಹಿಪ್ಪಲಿ, ಅರಶಿನ, ಚೂರ್ಣಗಳನ್ನು ಒಂದೊಂದು 25 ಗ್ರಾಂನಂತೆ ಕಲಸಿಟ್ಟುಕೊಂಡು ಮುಂಜಾನೆ, ಸಂಜೆ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಸಿ ಸೇವಿಸುತ್ತಿದ್ದರೆ ರಕ್ತದಲ್ಲಿ ಹೆಚ್ಚು ಉತ್ಪತ್ತಿಯಾದ ಕೆಂಪು ರಕ್ತಕಣಗಳು ಕಡಿಮೆಯಾಗಿ ಅಲರ್ಜಿಯ ಸಂಕೇತಗಳಾದ ದದ್ದುಗಳು, ಕೆಮ್ಮು ಆಯಾಸದಂತಹ ಲಕ್ಷಣಗಳು ಉಡುಗಿ ಹೋಗುತ್ತವೆ.

**ನಾಯಿಕೆಮ್ಮಿಗೆ**

ಹಿಪ್ಪಲಿ, ದೇವದಾರು, ಶುಂಠಿ ಚೂರ್ಣಗಳನ್ನು ಒಂದೊಂದನ್ನು 200 ಗ್ರಾಂನಂತೆ ಕಲಸಿಟ್ಟುಕೊಂಡು ಎರಡೂ ಬಾರಿ, ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಜೀರ್ಣಕೋಶದ ಸಮಸ್ಯೆಗಳು, ಉಸಿರಾಟದ ಸಮಸ್ಯೆಗಳು ಅದರಿಂದುಂಟಾಗುವ ತೊಂದರೆಗಳು, ನಾಯಿಕೆಮ್ಮು ಶಮನವಾಗುತ್ತವೆ.

**ಮೆದುಳಿಗೆ ರಕ್ತ ಪರಿಚಲನೆ ಸರಾಗವಾಗಿ ಆಗಲು**

ದಿನವೂ ಎರಡು ಬಾರಿ ಬಾರಿಯೊಂದಕ್ಕೆ ಒಂದು ಗ್ರಾಂ ಹಿಪ್ಪಲಿಯ ಚೂರ್ಣವನ್ನು ತಕ್ಕ ಜೇನಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಮೆದುಳಿಗೆ ರಕ್ತ ಸರಾಗವಾಗಿ ಹರಿಯುತ್ತದೆ. ನರ - ನಾಡಿಗಳ ವ್ಯವಸ್ಥೆ ಶುದ್ಧಗೊಂಡು ನರಗಳಿಗೆ ಶಕ್ತಿಯುಂಟಾಗಿ ತೊದಲು ಮಾತು,ಪಾರ್ಶ್ವವಾಯುವಿನಂತಹ ಸಮಸ್ಯೆಗಳು ಬಗೆಹರಿಯುತ್ತವೆ.

**ಋತು ಸ್ರಾವ ಸರಾಗವಾಗಲು**

ಹಿಪ್ಪಲಿ, ಶುಂಠಿ, ಕರಿ ಎಳ್ಳು, ಬೆಲ್ಲದ ಚೂರ್ಣಗಳನ್ನು ಒಂದೊಂದು 25 ಗ್ರಾಂ ನಂತೆ ತೆಗೆದುಕೊಂಡು ಅದಕ್ಕೆ ಆಯುರ್ವೇದ ಔಷಧಾಲಯಗಳಲ್ಲಿ ದೊರಕುವ ಪುನರ್ನವಾದಿ ಮಂಡೂರವೆಂಬ ಔಷಧಿಯನ್ನು ಹಾಕಿ ಕಲಸಿಟ್ಟುಕೊಂಡು ಮುಂಜಾನೆ- ಸಂಜೆ ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನು ಅಥವಾ ಉಗುರುಬೆಚ್ಚಗಿನ ಹಾಲಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಮುಟ್ಟಿನ ಸಮಯದಲ್ಲಿ ರಕ್ತಸ್ರಾವ ಸರಾಗವಾಗಿ ಆಗುವುದಲ್ಲವೇ ಮುಟ್ಟಿನಿಂದಾಗುವ ನೋವು ಸೊಂಟ ನೋವು, ಮೈಕೈ ನೋವು ಸಹಾ ಕಮ್ಮಿಯಾಗುತ್ತದೆ. ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ ಕುಂಠಿತವಾಗಿ ಉಂಟಾಗುವ ಪಾಂಡು ರೋಗ,ಬಿಳಿಕಾಮಿಣಿ ರಕ್ತಹೀನತೆಯ ಸಮಸ್ಯೆ ಸಹಾ ಕಡಿಮೆಯಾಗುತ್ತದೆ.



# ಉಡುಪಿಯ ಶ್ರೀ ಕೃಷ್ಣನ ಪೂಜಾ ವೈಭವ

- ಬಿ. ಗೋಪಾಲಾಚಾರ್

"ಗೋಪಾಲಮಂತ್ರಂ ಭಜತಾಂ ಫಲಪ್ರದಃ ಏಕೇನ ರೂಪೇಣ ಭುವಿ" ಎಂಬ ವಚನದಂತೆ ಕಲಿಯುಗದಲ್ಲಿ ಶ್ರೀ ಕೃಷ್ಣ ಮಂತ್ರೋಪಾಸಕರನ್ನು ಅನುಗ್ರಹಿಸಲು ಜಗದೊಡೆಯನಾದ ಶ್ರೀಕೃಷ್ಣನು ಒಂದು ರೂಪದಿಂದ ಉಡುಪಿಯಲ್ಲಿ ನೆಲೆಸಿದ್ದಾನೆ. ಶ್ರೀಕೃಷ್ಣನು ತಾಯಿಯ ಇಚ್ಛೆಯಂತೆ ವಿಶ್ವಕರ್ಮನಿಂದ ತನ್ನ ಸುಂದರಮೂರ್ತಿಯನ್ನು ನಿರ್ಮಿಸಿದನು. ಆ ಮೂರ್ತಿಯಲ್ಲಿ ಸನ್ನಿಹಿತನಾಗಿ ದೇವಕಿ ಮತ್ತು ರುಕ್ಮಿಣೀದೇವಿಯರಿಂದ ಅನೇಕ ವರ್ಷಗಳ ಕಾಲ ಪೂಜೆಯನ್ನು ಸ್ವೀಕರಿಸಿ ದ್ವಾರಕೆಯಲ್ಲೇ ನೆಲೆಸಿದನು. ವಿಶ್ವ ಗುರುಗಳಾದ ಶ್ರೀಮಧ್ವಾಚಾರ್ಯರ ಭಕ್ತಿಗೆ ಒಲಿದು ಸಕಲ ಭಾಗ್ಯಗಳ ತವರಾದ ದ್ವಾರಕೆಯನ್ನು ಬಿಟ್ಟು ಇಲ್ಲಿಗೆ ಬಂದಿದ್ದಾನೆ. ಧನ್ಯವಾಯಿತು ಉಡುಪಿ. ಕಲಿಮಲದಿಂದ ಬಳಲಿದ ಸಜ್ಜನರ ಸಂರಕ್ಷಣೆಗಾಗಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದರು. ಶ್ರೀ ಕೃಷ್ಣನ ನಿರಂತರ ಪೂಜಾದಿ ಧಾರ್ಮಿಕ ವ್ಯವಸ್ಥೆಗಾಗಿ ಎಂಟು ಜನ ಶಿಷ್ಯರಿಗೆ ಸನ್ಯಾಸ ದೀಕ್ಷೆಯನ್ನು ನೀಡಿದರು. ಹದಿನಾಲ್ಕು ಲೋಕದ ರಸನಿಗೆ ಇಲ್ಲಿ ಪ್ರತಿ ದಿನವೂ ಅಷ್ಟಯತಿಗಳಿಂದ ಹದಿನಾಲ್ಕು ಬಗೆಯ ಪೂಜೆಗಳು.

ಬೆಳಗಿನ ಉಷಃಕಾಲದಿಂದ ರಾತ್ರಿಯ ಶಯನೋತ್ಸವ ಪೂಜೆಯವರೆಗೆ ಬಗೆಬಗೆಯ ಪೂಜೆಗಳು ನಡೆಯುತ್ತವೆ. ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯುವ ಅತ್ಯಂತ ಅಪೂರ್ವವಾದ ಪೂಜೆಗಳ ವಿವರಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

### 1. ನಿರ್ಮಾಲ್ಯ ವಿಸರ್ಜನೆ ಪೂಜೆ

ಬೆಳಿಗ್ಗೆ 4.30 ಕ್ಕೆ ಶ್ರೀಕೃಷ್ಣ ಮಠದ ಬಾಗಿಲನ್ನು ತೆರೆಯುವರು. ಆ ಸಮಯದಲ್ಲಿ ಶ್ರೀಪಾದರು ಮಧ್ವಸರೋವರದಲ್ಲಿ ಸ್ನಾನ ಮಾಡಿ ಜಪತರ್ಪಣಾದಿಗಳನ್ನು ಮುಗಿಸಿ ಗರ್ಭಗುಡಿಯನ್ನು ಪ್ರವೇಶಿಸುವರು. ಆಗ ವಿವಿಧ ಮಂಗಳಘೋಷಗಳು ಮೊಳಗುವುದು. ವೇದ ಪಾಠಕರು ವೇದ ಘೋಷವನ್ನು ಮಾಡುತ್ತಾರೆ. ಆ ವಾತಾವರಣವೇ ಭಕ್ತಿಯನ್ನು ವೃದ್ಧಿಗೊಳಿಸುತ್ತವೆ. ಶ್ರೀ ಕೃಷ್ಣನಿಗೆ ಹಿಂದಿನ ದಿನದ ಅಲಂಕಾರದ ಹೂ - ತುಳಸಿ-ಗಂಧಾಧಿಗಳನ್ನು ವಿಸರ್ಜಿಸುತ್ತಾರೆ. ಈಗ ಶ್ರೀಕೃಷನ ವಿಗ್ರಹದ ಮೇಲೆ ಯಾವ ವಸ್ತ್ರ - ಆಭರಣ - ಹೂವು ಗಂಧಾಧಿಗಳೂ ಇರುವುದಿಲ್ಲ. ಮೂಲ ವಿಗ್ರಹದ ಭವ್ಯದರ್ಶನ. ಇದೇ "ವಿಶ್ವ ರೂಪ ದರ್ಶನ" ಇದಾದ ಮೇಲೆ ಪಂಚೋಪಚಾರ ಪೂಜೆ, ತುಳಸಿ - ಗಂಧಾಧಿಗಳಿಂದ ಅರ್ಚನೆ, ನೈವೇದ್ಯ ಸಮರ್ಪಣೆ, ಹರಿವಾಣದ ಆರತಿ, ಶ್ರೀ ಕೃಷ್ಣನಿಗೆ ಅವಲಕ್ಕಿ ಮೊಸರು, ನೆಲಡಲೆ, ಶುಂಠಿ, ಬೆಲ್ಲ, ತೆಂಗಿನಕಾಯಿ, ತಾಂಬೂಲವನ್ನು ಸಮರ್ಪಿಸುತ್ತಾರೆ.

### 2. ಉಷಃಕಾಲ ಪೂಜೆ

ಪೂಜ್ಯ ಶ್ರೀಪಾದರು ನಿರ್ಮಾಲ್ಯ ವಿಸರ್ಜನೆ ಮಾಡಿದ ನಂತರ ಶ್ರೀಕೃಷ್ಣನಿಗೆ ಬೆಳ್ಳಿಯ ಕೊಡಗಳಿಂದ ಅಭಿಷೇಕ ಮಾಡುತ್ತಾರೆ. ಹಿಂದಿನ ದಿನದ ಅವಶೇಷವನ್ನೆಲ್ಲ ತೆಗೆದು ಅಭಿಷೇಕ ಮಾಡಿ ಪಂಚೋಪಚಾರ ಪೂಜೆಯನ್ನು ಮಾಡುತ್ತಾರೆ ಈ ಉಷಃಕಾಲದ ಪೂಜೆಯಲ್ಲಿ ಶ್ರೀ ಕೃಷ್ಣನಿಗೆ ತುಳಸಿ ಗಂಧಗಳ ಸಮರ್ಪಣೆಯನ್ನು ಮಾಡಿ ಅನ್ನ, ಹಾಲು, ಮೊಸರು, ಸೀಯಾಳ, ಬಾಳೆಹಣ್ಣು, ತೆಂಗಿನಕಾಯಿ,ತಾಂಬೂಲವನ್ನು ಅರ್ಪಿಸುತ್ತಾರೆ.ಎಂಟರ ನಂಟನಿಗೆ 8 ಆರತಿಗಳನ್ನು ಎತ್ತುತ್ತಾರೆ.

### 3. ಅಕ್ಷಯ ಪಾತ್ರೆ ಪೂಜೆ / ಗೋಪೂಜೆ

"ಅನ್ನಬ್ರಹ್ಮ" ಈ ಸನ್ನಿಧಿಯಲ್ಲಿ ನಿರಂತರ ಅನ್ನದಾನ ನಡೆಯಲಿಕ್ಕೆ "ಅಕ್ಷಯ ಪಾತ್ರೆ - ಸಟ್ಟುಗ" ವನ್ನು ಶ್ರೀ ಮಧ್ವಾಚಾರ್ಯರು ನೀಡಿದ್ದಾರೆ. ಪರ್ಯಾಯದ ಹಸ್ತಾಂತರ ಸಮಯದಲ್ಲಿ ಇದರ ಪಾತ್ರವೇ ಪ್ರಮುಖವಾದದ್ದು. ಪೂಜ್ಯ ಶ್ರೀ ಪಾದರು ಶ್ರೀ ಕೃಷ್ಣ ದಿವ್ಯ ಸನ್ನಿಧಿಯಲ್ಲಿ ಈ ಅಕ್ಷಯ ಪಾತ್ರೆಯನ್ನೂ ಪೂಜಿ

ಸುತ್ತಾರೆ. ಈ ಸಮಯಕ್ಕೆ ಗರ್ಭಗುಡಿಯ ಬಳಿ ಬಂದು ನಿಂತ ಶ್ರೀಕೃಷ್ಣನ ಸನ್ನಿಧಾನವಿರುವ ಗೋವಿನ ಪೂಜೆಯನ್ನು ನೆರವೇರಿಸುತ್ತಾರೆ. ದೇವರಿಗೆ ಸಮರ್ಪಿಸಿದ ಅರಳು ಬೆಲ್ಲ, ಬಾಳೆ ಹಣ್ಣುಗಳನ್ನು ನೀಡುತ್ತಾರೆ.

### 4. ಪಂಚಾಮೃತ ಅಭೀಷೇಕ ಪೂಜೆ

ಪೂಜ್ಯಶ್ರೀಪಾದರು ಶ್ರೀ ಕೃಷ್ಣನ ಮೇಲಿರುವ ಗಂಧಾದಿಗಳನ್ನು ತೆಗೆದು ಚಿನ್ನದ ನಾಣ್ಯಗಳಿಂದ ಅಭಿಷೇಕವನ್ನು ಮಾಡುತ್ತಾರೆ. ಶ್ರೀಕೃಷ್ಣನಿಗೆ ಪಂಚಾಮೃತದ ಅಭಿಷೇಕ, ಮೊದಲು ತುಪ್ಪದಿಂದ, ನಂತರ ಹಾಲು ಮೊಸರು ಜೇನು ಸಕ್ಕರೆ ಬಾಳೆ ಹಣ್ಣುಗಳಿಂದ ಅಭಿಷೇಕ. ದ್ವಾತ್ರಿಂಶತ್ ಲಕ್ಷಣೋಪೇತನಿಗೆ ಪ್ರತಿ ದಿನ 32 ಎಳನೀರಿನಿಂದ ಅಭಿಷೇಕ, ಅಭಿಷೇಕವಾದ ಮೇಲೆ ಪಂಚೋಪಚಾರ ಪೂಜೆ, ಗಂಧ-ತುಳಸಿ-ಹೂಗಳನ್ನು ಸಮರ್ಪಿಸುತ್ತಾರೆ. ಅನ್ನ-ಹಣ್ಣು-ತಾಂಬೂಲವನ್ನು ಅರ್ಪಿಸಿ ಎರಡು ಆರತಿಗಳನ್ನು ಎತ್ತುವರು.

### 5. ಉದ್ವರ್ತನ ಪೂಜೆ

ಶ್ರೀಕೃಷ್ಣನ ವಿಗ್ರಹವನ್ನು ಪಂಚಾಮೃತ ಅಭಿಷೇಕದ ನಂತರ ಸ್ವಚ್ಛಗೊಳಿಸುತ್ತಾರೆ. ಹೆಸರು ಕಾಳಿನ ಹಿಟ್ಟಿನಿಂದ ವಿಗ್ರಹವನ್ನು ತಿಕ್ಕಿ ಬಿಸಿನೀರಿನಿಂದ ಅಭ್ಯಂಜನ ಮಾಡಿಸುತ್ತಾರೆ. ನಂತರ ಪಂಚೋಪಚಾರ ಪೂಜೆ-ಗಂಧ-ತುಳಸಿ-ಹೂವನ್ನು ಅರ್ಪಿಸಿ ಅನ್ನ ಹಾಲು, ಬೆಣ್ಣೆ-ಎಳನೀರುಗಳನ್ನು ನಿವೇದಿಸಿ, ಒಂದು ಹರಿವಾಣದ ಆರತಿಯನ್ನು ಎತ್ತುವರು.

### 6. ಕಲಶ ಪೂಜೆ


ಶ್ರೀ ಕೃಷ್ಣನಿಗೆ ಪೂಜ್ಯಶ್ರೀಪಾದರು ಶುದ್ಧೋದಕ ಸ್ನಾನ ಮಾಡಿಸಲು ಜಲಪೂರ್ಣವಾದ ಎರಡು ಬಂಗಾರದ ಕಲಶಗಳನ್ನು ಪೂಜಿಸುವರು. ಭಗವಂತನ ನೂರಾರು ರೂಪಗಳನ್ನು ಆ ಕಲಶದಲ್ಲಿ ಆವಾಹಿಸುವರು ಗಂಗಾದಿ ಮಹಾನದಿಗಳನ್ನು ಚಿಂತಿಸಿ ಕಲಶವನ್ನು ಪೂಜಿಸುವರು.

### 7. ತೀರ್ಥಪೂಜೆ

ಶ್ರೀ ಕೃಷ್ಣನಿಗೆ ಕಲಶಪೂಜೆಯನ್ನು ನೆರವೇರಿಸಿ, ಆ ಕಲಶೋದಕದಿಂದ ಮಹಾಭೀಷೇಕವನ್ನು ಮಾಡುವರು. ಭಗವಂತನ ದಿವ್ಯ ಸನ್ನಿಧಾನದ ವಿಗ್ರಹದ ಮೇಲಿನಿಂದ ಬಂದ ಆ ನೀರೆ "ತೀರ್ಥ" ಅದು ಅನೇಕ ಕಾಯಿಲೆಗಳನ್ನು ಪಾಪಗಳನ್ನು ತೊಳೆದು ನಮ್ಮನ್ನು ಉದ್ಧರಿಸುತ್ತದೆ. "ವಿಷ್ಣು ಪಾದೋದಕಂ ಪಾವನಂ ಶುಭಮ್"

### 8. ಅಲಂಕಾರ ಪೂಜೆ

ಮಹಾಭಿಷೇಕದ ನಂತರ ವಸ್ತ್ರದಿಂದ ವಿಗ್ರಹವನ್ನು ಒರೆಸಿ ಗಂಧ-ತುಳಸಿ-ಪುಷ್ಪಾದಿಗಳನ್ನು ಅರ್ಪಿಸುತ್ತಾರೆ. ವಿವಿಧ ಆಭರಣಗಳು, ಕವಚ - ಕೀರೀಟ - ಪ್ರಭಾವಳಿಗಳಿಂದ ಅಲಂಕರಿಸುತ್ತಾರೆ. ಈ ಸುಂದರ ವಿಗ್ರಹಕ್ಕೆ ದಿನಕ್ಕೊಂದು ಅಲಂಕಾರ. ನವರಾತ್ರಿಯ ಸಮಯ ಮತ್ತು ಪ್ರತಿ ಶುಕ್ರವಾರ



ಗಳಂದು ಸ್ತ್ರೀ ಅಲಂಕಾರ. ಶ್ರಾವಣ ಶನಿವಾರದಂದು ಶ್ರೀನಿವಾಸನ ಅಲಂಕಾರ ಈ ಸೊಬಗು,ಈ ವೈಭವ ಇನ್ನೆಲ್ಲೂ ನೋಡಲಾಗದು.

### 9. ಅವಸರ ಸನಕಾದಿ ಪೂಜೆ

ಶ್ರೀ ಕೃಷ್ಣ ಇಲ್ಲಿಯವರೆಗೆ 8 ಪೂಜೆಗಳನ್ನು ಬೇರೆ ಬೇರೆ ಪೂಜ್ಯಶ್ರೀಪಾದರು ನೆರವೇರಿಸುತ್ತಾರೆ.ಆದರೆ ಈ ಪೂಜೆ ಮತ್ತು ಮುಂದಿನ ಮಹಾಪೂಜೆಯನ್ನು ಪರ್ಯಾಯ ಶ್ರೀ ಪಾದರೇ ನೆರವೇರಿಸಬೇಕು. ಸನಕಾದಿ ಮಹಾಮುನಿಗಳಿಗೂ ಶ್ರೀಕೃಷ್ಣನನ್ನು ಪೂಜಿಸಲು ಅವಕಾಶ. ಆ ಮಹಾಮುನಿಗಳು ಬಂದು ಪೂಜೆಯನ್ನು ನೇರವೇರಿಸುವರೆಂಬ ನಂಬಿಕೆ.

### 10. ಮಹಾಪೂಜೆ

ಭಕ್ತರ ಕಲ್ಯಾಣಕ್ಕಾಗಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ ಶ್ರೀಮಧ್ವಾಚಾರ್ಯರು ಪರ್ಯಾಯ ಶ್ರೀ ಪಾದರಲ್ಲಿ ಸನ್ನಿತರಾಗಿ ತಾವೇ ಮಹಾಪೂಜೆಯನ್ನು ನೆರವೇರಿಸುತ್ತಾರೆ. ವಿಷ್ಣು ಸಹಸ್ರ ನಾಮಗಳಿಂದ ಅರ್ಚನೆಯನ್ನು ಮಾಡಿ ಬಗೆಬಗೆಯ ನೈವೇದ್ಯಗಳನ್ನು ಸಮರ್ಪಿಸಿ ಮಹಾ - ಮಂಗಳಾರತಿಯನ್ನು ಎತ್ತುವರು. ಇದು ಹಗಲಿನ ಅಂತಿಮಪೂಜೆ.

### 11. ಚಾಮರ ಸೇವಾ ಪೂಜೆ

ಸಂಜೆಯ ಪೂಜೆಗಳು ಪ್ರಾರಂಭಗೊಳ್ಳುತ್ತದೆ. ಸಂಜೆ ಸೂರ್ಯನು ಅಗಸದಲ್ಲಿ ಮುಳುಗುತ್ತಿದ್ದಂತೆ ಪರ್ಯಾಯ ಶ್ರೀಪಾದರು ಮಧ್ವಸರೋವರದಲ್ಲಿ ಸ್ನಾನವನ್ನು ಮಾಡಿ ಸಾಯಂಕಾಲೀನ ಅನುಷ್ಠಾನವನ್ನು ಪೂರೈಸುವರು. ಪರಿಚಾರಕರು ತೀರ್ಥಮಂಟಪವನ್ನು ಅಲಂಕರಿಸಿ ರಾತ್ರಿ ಪೂಜೆಗೆ ಸಿದ್ಧಗೊಳಿಸಿರುವರು.ದೇವರಿಗೆ ಸಮರ್ಪಿಸಲು ಎರಡು ದೊಡ್ಡ ಹೆಡಿಗೆತೊಂಬ ಅರಳು, ಅದರ ಮೇಲೆ ಬೆಲ್ಲ, ಬೆಳ್ಳಿಯ ಹರಿವಾಣದಲ್ಲಿ ಅರಳಿನ ಲಡ್ಡುಗಳು , ಹಾಲು, ಹಣ್ಣು ಕಾಯಿ ತಾಂಬೂಲಗಳನ್ನು ಇಟ್ಟಿರುತ್ತಾರೆ. ಸುತ್ತಲೂ ಎಣ್ಣೆಯ ದೀಪಗಳಿಂದ ಒಳಪ್ರದೇಶ ಭವ್ಯವಾಗಿ ಕಂಗೊಳಿಸುತ್ತದೆ. ವೇದಘೋಷ - ಮಂಗಳವಾದ್ಯದಲ್ಲಿ ಪೂಜ್ಯ ಶ್ರೀಪಾದರು ಗರ್ಭಗುಡಿಯಿಂದ ತೀರ್ಥಮಂಟಪಕ್ಕೆ ಶ್ರೀಕೃಷ್ಣನ ಉತ್ಸವ ಮೂರ್ತಿಯನ್ನು ತರುವರು. ಶ್ರೀಕೃಷ್ಣನಿಗೆ ಚಾಮರಸೇವೆಯನ್ನು ವಿಷ್ಣುಸಹಸ್ರನಾಮ ಸ್ತೋತ್ರವನ್ನು ಪಠಿಸುತ್ತಾ ಸಮರ್ಪಿಸುತ್ತಾರೆ. ಚಾಮರಸೇವೆಯ ಸಂದರ್ಭದಲ್ಲಿ ಪಾಲ್ಗೊಂಡು ಭಕ್ತರು ಭಕ್ತಿಯ ಸಾಗರದಲ್ಲಿ ಮುಳುಗುತ್ತಾರೆ. ಶ್ರೀಕೃಷ್ಣನಿಗೆ ತೀರ್ಥ ಮಂಟಪದಲ್ಲಿ ನೈವೇದ್ಯವನ್ನು ಸಮರ್ಪಿಸಿ ಆರತಿಯನ್ನು ಬೆಳಗುವರು.

### 12. ರಾತ್ರಿಪೂಜೆ

ತೀರ್ಥಮಂಟಪದಲ್ಲಿ ಚಾಮರಸೇವೆಯನ್ನು ಪೂರೈಸಿ ರಾತ್ರಿಯ ಪೂಜೆಗಾಗಿ ಪೂಜ್ಯ ಶ್ರೀಪಾದರು ಗರ್ಭಗುಡಿಯಲ್ಲಿ ಪ್ರವೇಶಿಸುವರು. ನಾಮಾವಳಿಗಳಿಂದ ಪುಷ್ಪಾರ್ಚನೆ ಮಾಡಿ ಶ್ರೀಕೃಷ್ಣನಿಗೆ ಅನ್ನ - ದೋಸೆ - ಹಾಲು - ಹಣ್ಣು - ಪಂಚಕಜ್ಜಾಯ - ಸೀಯಾಳ- ತಾಂಬೂಲಗಳನ್ನು ಸಮರ್ಪಿಸುವರು. ದೇವರಿಗೆ ಮಂಗಳಾರತಿಯನ್ನು ಬೆಳಗುವರು.

### 13. ಮಂಟಪ ಪೂಜೆ

ರಾತ್ರಿಯ ಪೂಜೆಯನ್ನು ಶ್ರೀಕೃಷ್ಣನಿಗೆ ಸಮರ್ಪಿಸಿ ಮುಖ್ಯಪ್ರಾಣ, ಶ್ರೀಮಧ್ವಾಚಾರ್ಯರ ಪೂಜೆಯನ್ನೂ ನೆರವೇರಿಸಿ ಗರುಡನನ್ನೂ ಪೂಜಿಸಿ, ಶ್ರೀಕೃಷ್ಣನ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ತಂದು ತೀರ್ಥ ಮಂಟಪದಲ್ಲಿ ಸಿದ್ಧವಾದ ಚಿನ್ನದ ತೊಟ್ಟಿಲಲ್ಲಿ ಇಟ್ಟು ಪೂಜಿಸುತ್ತಾರೆ. ಇದನ್ನು ವಾಲಗ ಮಂಟಪ ಪೂಜೆ ಎಂದೂ ಕರೆಯುತ್ತಾರೆ. ಈ ಸಮಯದಲ್ಲಿ ಅಷ್ಟಾವಧಾನ ಸೇವೆ ನಡೆಯುತ್ತದೆ. ಸೇವಾಕರ್ತರಿಗೆ ಮತ್ತು ಎಲ್ಲರಿಗೂ ಈ ಸನ್ನಿಧಿಯಲ್ಲಿ ಮಂತ್ರಾಕ್ಷತೆಯನ್ನು ನೀಡಿ ಆಶೀರ್ವದಿಸುತ್ತಾರೆ.

### 14. ಏಕಾಂತಸೇವೆ/ಶಯನೋತ್ಸವ

ಶ್ರೀಕೃಷ್ಣನ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿಟ್ಟು ವಾದ್ಯಗಳ ಜೊತೆಗೆ ಒಳಭಾಗದಲ್ಲಿ ಪ್ರದಕ್ಷಿಣೆ ಬರುತ್ತಾರೆ. ಗರ್ಭಗೃಹದ ಮೊದಲು ಸಿಗುವ ಕೋಣೆಯಲ್ಲಿ ಅಲಂಕೃತವಾದ ಚಿನ್ನದ ತೊಟ್ಟಿಲಲ್ಲಿ ಉತ್ಸವ ಮೂರ್ತಿಯನ್ನು ಮಲಗಿಸುತ್ತಾರೆ. ಪೂಜ್ಯ ಶ್ರೀಪಾದರು ತೊಟ್ಟಿಲನ್ನು ತೂಗುತ್ತಿದ್ದರೆ, ಪರಿವಾರದವರು ತಾಳಬದ್ಧವಾಗಿ ಜೋಗುಳ ಹಾಡುತ್ತಾರೆ. ಶ್ರೀಕೃಷ್ಣನಿಗೆ ಪಂಚೋಪಚಾರ ಪೂಜೆಯನ್ನು ಸಮರ್ಪಿಸಿ ಕಷಾಯದ ಹಾಲು, ಗಂಧ, ಪರಿಮಳದ ಎಣ್ಣೆ, ಪತ್ರೆ, ಜಾಕಾಯಿ, ಲವಂಗ ಮೊದಲಾದ ಪರಿಮಳ ದ್ರವ್ಯಗಳನ್ನು ಅರ್ಪಿಸಿ ಆರತಿಯನ್ನು ಬೆಳಗುತ್ತಾರೆ. ಇಲ್ಲಿ ಶ್ರೀಗಳು ಮತ್ತು ಪರಿವಾರದವರು ಮಾತ್ರ ಭಾಗವಹಿಸಿ ಪೂಜೆ ಮುಗಿಸಿ ಹೊರಬರುತ್ತಾರೆ. ಇದು 'ಏಕಾಂತಸೇವೆ', ಮರುದಿನ ಉಷಃಕಾಲದವರೆಗೆ ಯೋಗೇಶ್ವರನು ಯೋಗಾನಿದ್ರೆಯಲ್ಲಿ ಪವಡಿಸುತ್ತಾನೆ. ಇಲ್ಲಿಗೆ ಹದಿನಾಲ್ಕು ಲೋಕದೊಡೆಯನಾದ ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯುವ ಹದಿನಾಲ್ಕು ಪೂಜೆಗಳು ಮುಕ್ತಾಯಗೊಳ್ಳುತ್ತದೆ.


ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು

ಟೋಲ್ ಫ್ರಿ ನಂಬರ್

18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!

ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.

# ಜ್ಞಾನಮೂರ್ತಿ ಶ್ರೀ ಹಯಗ್ರೀವ



- ಶ್ರೀಮತಿ. ಸುಮಾ ಚಂದ್ರಶೇಖರ್

**ಭಾ**ರತೀಯ ಪುರಾಣಗಳಲ್ಲಿ ವಿಷ್ಣುವಿನ ಅವತಾರಗಳು ಎಷ್ಟು ಪ್ರಸಿದ್ಧವೋ ಅಷ್ಟೇ ವಿಭಿನ್ನ ವಿಶಿಷ್ಟವೂ ಹೌದು ಇದಕ್ಕೆ ಮತ್ಸ್ಯ, ಕೂರ್ಮ, ವರಾಹ ನರಸಿಂಹ ಅವತಾರಗಳನ್ನು ಉಲ್ಲೇಖಿಸಬಹುದು. ಅಂಥದ್ದೇ ಇನ್ನೊಂದು ಅವತಾರ ಹಯಗ್ರೀವರದ್ದು. ಶ್ರಾವಣ ಮಾಸದ ಹುಣ್ಣಿಮೆಯೆಂದು ಹಯಗ್ರೀವ ಜಯಂತಿಯನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಹಯಗ್ರೀವ ಅವತಾರದ ಪರಿಚಯಾತ್ಮಕ ಬರಹವಿದು.

ಹಯಗ್ರೀವ ದೇವರು ವೇದವಿದ್ಯಾಭಿಮಾನಿದೇವತೆ, ಭಗವಂತನ ಜ್ಞಾನಾವತಾರವಿದು. ತಮೋ - ರಜೋ ಗುಣಗಳನ್ನು ನಿಗ್ರಹಿಸಿ, ಸಾತ್ವಿಕ ಗುಣಗಳನ್ನು, ನಿಷ್ಕಾಮ ಕರ್ಮಪರ ಪ್ರವೃತ್ತಿ ಧರ್ಮವನ್ನು ಅನುಗ್ರಹಿಸುವುದೇ ಶ್ರೀ ಹಯಗ್ರೀವ ದೇವರ ಮಹತ್ವ.

ಭಗವಂತನು ಪ್ರಳಯ ಮುಗಿದ ಮೇಲೆ ಸೃಷ್ಟಿಕಾರ್ಯವನ್ನು ಪ್ರಾರಂಭಿಸಿದನು. ಆಗ ಮಹತ್ತತ್ತ್ವದಿಂದ ಅಹಂಕಾರ ತತ್ವ ಉದಿಸಿದವು. ಅಹಂಕಾರತತ್ತ್ವವೇ ಕಮಲ ದಳದಲ್ಲಿ ಜನಿಸಿದ ಚರ್ತುಮುಖ ಬ್ರಹ್ಮ. ಸಹಸ್ರದಳ ಕಮಲದಲ್ಲಿ ಮಂಡಿಸಿದ್ದ ಬ್ರಹ್ಮನು ಸೃಷ್ಟಿಗೆ ತೊಡಗಿದಾಗ ಇಡೀ ಜಗತ್ತೇ ಜಲಮಯವಾಗಿ ತೋರಿತು. ಹೊಂಬಣ್ಣದ ಸೂರ್ಯ ರಶ್ಮಿಯಂತೆ ಹೊಳೆಯುತ್ತಿದ್ದ ಆ ಕಮಲದ ಒಂದು ದಳದ ತುದಿಯಲ್ಲಿ ರಜೋ-ತಮೋಗುಣ ಪ್ರತೀಕಗಳಿಂದ ಎರಡು ಜಲಬಿಂದುಗಳು ಕಾಣಿಸಿದವು. ತಮೋ ಬಿಂದುವು ಜೇನುತುಪ್ಪದ ಹೊಂಬಣ್ಣದಿಂದ ಕಂಗೊಳಿಸುತ್ತಿತ್ತು. ಪರಮಾತ್ಮನ ಆಜ್ಞೆಯಂತೆ ಅದರಿಂದ ಮಧು ಎಂಬ ರಾಕ್ಷಸ ಜನಿಸಿದನು. ಕಮಲ ದಳದಿಂದ ಗದಾಧಾರಿಗಳಾಗಿ ಕೆಳಗಿಳಿದು ಬಂದ. ಆ ರಾಕ್ಷಸರಿಗೆ ಬ್ರಹ್ಮದೇವರು ಹೊಂದಿದ್ದ ನಾಲ್ಕು ವೇದಗಳು, ನಾಲ್ಕು ಸುಂದರ ಮೂರ್ತಿಗಳಂತೆ ಕಂಡವು. ಬ್ರಹ್ಮನನ್ನು ಲೆಕ್ಕಿಸದೆ ಅವರು ಆ ನಾಲ್ಕು ವೇದಗಳು, ಎತ್ತಿಕೊಂಡು ಸಮುದ್ರ ಈಶಾನ್ಯ ದಿಕ್ಕಿನತ್ತ ಹಾರಿ ಮರೆಯಾದಾಗ ಸೃಷ್ಟಿಕಾರ್ಯ ಕುಂಠಿತವಾಯಿತು. ಬ್ರಹ್ಮ ಕಳವಳದಿಂದ ಪರಮಾತ್ಮನನ್ನು ಸ್ತುತಿಸಿ ವೇದಗಳನ್ನು ಪಡೆದು ಕೊಡಬೇಕೆಂದು ಪ್ರಾರ್ಥಿಸಿದನು.

ಯೋಗನಿದ್ರೆಯಲ್ಲಿದ್ದ ಅನಿರುದ್ಧರೂಪಿ ಪರಮಾತ್ಮನು ಬ್ರಹ್ಮನ ಪ್ರಾರ್ಥನೆಯಿಂದ ಎದ್ದು ಕಳೆದುಹೋಗಿದ್ದ ವೇದಗಳನ್ನು ಹಿಂದಿರುಗಿ ತರಲು ಹೊರಟನು. ಅದಕ್ಕಾಗಿ ಭಗವಂತ ತನ್ನ ಯೋಗಬಲದಿಂದ ಬೇರೊಂದು ಅಲೌಕಿಕ ಶರೀರವನ್ನು ಧರಿಸಿದನು. ವೇದಗಳಿಗೆ ಆಧಾರದಂತಿದ್ದ ಆ ಶರೀರಕ್ಕೆ ಶುಭ್ರವರ್ಣದ ಕುದುರೆಯ ಮುಖವಿದ್ದಿತು. ಅದರ ಮೂಗು ಮತ್ತು ಮೂಗಿನ ಹೊಳ್ಳೆಗಳು ಚಂದ್ರಕಿರಣಗಳಂತೆ ಹೊಳೆಯುತ್ತಿದ್ದವು. ನಕ್ಷತ್ರ ಸಹಿತ ಆಕಾಶವೇ ತಲೆ, ಊರ್ಧ್ವಲೋಕ - ಅಧೋಲೋಕಗಳೇ ಕಿವಿಗಳು, ಪೃಥಿಯೇ ಹಣೆ, ಎಡಬಲದ ಮಹಾಸಾಗರವೇ ಹುಬ್ಬುಗಳು, ಚಂದ್ರ ಸೂರ್ಯರೇ ಕಣ್ಣುಗಳೂ, ಗಂಗಾ - ಸರಸ್ವತೀ ನದಿಗಳೇ ಅವರ ಹಿಂಭಾಗ, ಸಂಧ್ಯೆಯೇ ಮೂಗು, ಓಂಕಾರವೇ ಸ್ಮೃತಿ, ವಿದ್ವತ್ತೇ ನಾಲಿಗೆ, ಸೋಮಪಾನ ಮಾಡುವ ಪಿತೃಗಳೇ ಎರಡು ಕೈಗಳು, ಭೂಲೋಕ

ಬ್ರಹ್ಮ ಲೋಕಗಳೇ ತುಟಿಗಳು, ದಿನ - ರಾತ್ರಿಗಳೇ ಕುತ್ತಿಗೆ - ಹೀಗೆ ಇಡೀ ವಿಶ್ವವನ್ನೇ ಧಾರಣೆ ಮಾಡಿದ ಮಹಾಮಹಿಮಾ ಮೂರ್ತಿ ಹಯಗ್ರೀವ ದೇವರು ಬ್ರಹ್ಮನಿಗೆ ದರ್ಶನವಿತ್ತು ಪಾತಾಳಕ್ಕೆ ಹೋಗಿ ಯೋಗಾಸನದಲ್ಲಿ ಕುಳಿತು ಶಾಸ್ತ್ರ ರೀತಿಯಂತೆ ಸಾಮಗಾನವನ್ನು ಪ್ರಾರಂಭಿಸಿದನು.

ಪರಮಾತ್ಮನ ಮೃದು ಮಧುರ ಕಂಠದಲ್ಲಿ ಬಂದ ನಾದ ಲಹರಿ ಮಧುಕೈಟಭರನ್ನು ಹುಚ್ಚು ಹಿಡಿದಂತೆ ಆಕರ್ಷಿಸಿತು. ಅವರು ವೇದಗಳನ್ನಿಟ್ಟಿದ್ದ ಸ್ಥಳ ಬಿಟ್ಟು ಆಕರ್ಷಣೆಯ ಜಾಡು ಹಿಡಿದು ಗಾನದ ಮೂಲಕ ನೆಲೆಯುತ್ತ ಧಾವಿಸಿ ಬಂದರು. ಅವರು ತಮ್ಮ ಸ್ಥಳ ಬಿಟ್ಟೊಡನೆಯೇ ಹಯಗ್ರೀವಮೂರ್ತಿ ಗಾನ ನಿಲ್ಲಿಸಿ, ಕ್ಷಣ ಮಾತ್ರದಲ್ಲಿ ನಾಲ್ಕೂ ವೇದಗಳನ್ನು ಎತ್ತಿಕೊಂಡು ಬಂದು ಬ್ರಹ್ಮನಿಗೆ ಒಪ್ಪಿಸಿದನು. ಗಾನವು ಕೇಳಿಸದೇ ದಿಗ್ಭ್ರಾಂತರಾದ ಮಧುಕೈಟಭರನ್ನು ಸಂಹಾರ ಮಾಡಿ ಬ್ರಹ್ಮನನ್ನು ಅನುಗ್ರಹಿಸಿ ಅವನನ್ನು ನಿರ್ಭಯನನ್ನಾಗಿಸಿದನು ಎಂದು ಮಹಾಭಾರತವು ವಿಶ್ಲೇಷಿಸುವುದು. ಮಹಾಭಾರತದ ಶಾಂತಿ ಪರ್ವದಲ್ಲಿ ಮತ್ತೊಂದೆಡೆ ತಾನು ದೇವತೆಗಳಿಗೂ, ಪಿತೃಗಳಿಗೂ ಆದಿಪಿತನೆಂದೂ,ಚೇತನರು (ಮನುಷ್ಯರು) ಶ್ರದ್ಧೆಯಿಂದ ಕೊಡುವ ಹವಿರ್ಭಾಗವನ್ನು ಹಯಗ್ರೀವರೂಪಿಯಾಗಿದ್ದು ಸ್ವೀಕರಿಸುತ್ತೇನೆಂದು ಭಗವಂತನೇ ಘೋಷಿಸಿರುವುದಾಗಿ ಉಲ್ಲೇಖವಿದೆ.

“ನಿರ್ಣಯಸಿಂಧು”ವಿನಲ್ಲಿ ಶ್ರಾವಣಮಾಸದಲ್ಲಿ ಮಾಡಬೇಕಾದ ಕರ್ಮಗಳನ್ನು ವಿವರಿಸುವಾಗ -

ಶ್ರಾವಣ ಮಾಸದ ಶ್ರವಣ ನಕ್ಷತ್ರದಲ್ಲಿ ಭಗವಂತನು ಹಯಗ್ರೀವನಾಗಿ ಅವತರಿಸಿ ಸಮಸ್ತವಾದ ಪಾಪಗಳನ್ನು ಹೋಗಲಾಡಿಸುವಂತಹ ಸಾಮವೇದವನ್ನು ಉಪದೇಶಿಸಿದನು. ಆದ್ದರಿಂದ ಸ್ನಾನಾದಿ ನಿತ್ಯಕರ್ಮಾನುಷ್ಠಾನವನ್ನು ಮಾಡಿಕೊಂಡು ಶಂಖ - ಚಕ್ರ - ಗದಾಪಾಣಿಯಾದ ಆ ಮೂರ್ತಿಯನ್ನು ಆರಾಧಿಸಬೇಕು ಎಂದು ವಿವರಿಸಿದೆ. ಬ್ರಹ್ಮಚರ್ಯಾಶ್ರಮದಲ್ಲಿ ಪುಸ್ತಕಾಧ್ಯಾಯನದಲ್ಲಿ ತೊಡಗಬೇಕು, ಗೃಹಸ್ಥಾಶ್ರಮದಲ್ಲಿ ಸಂಪತ್ತನ್ನುಗಳಿಸಿ ಸದ್ ವಿನಿಯೋಗ ಮಾಡಬೇಕು, ವಾನಪ್ರಸ್ಥಾಶ್ರಮದಲ್ಲಿ ದೇವರ ಬಗ್ಗೆ ಮನನ ಮಾಡುತ್ತಾ ಜ್ಞಾನದ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು, ಸನ್ಯಾಸಶ್ರಮದಲ್ಲಿ ಜಪಮಾಲೆ ಹಿಡಿದು ದೇವರ ಸಾಕ್ಷಾತ್ಕಾರ ಮಾಡಿಕೊಂಡು ಧನ್ಯರಾಗಬೇಕು ಎಂದು ತಿಳಿಸುತ್ತದೆ.

### ಭಕ್ತರ ಪೊರೆಯುವ ಭಗವಂತ

ಹಯವದನ ಸ್ಮರಣೆಯಿಂದ ಜ್ಞಾನ ಭಂಡಾರದ ಬಾಗಿಲು ತೆರೆಯುತ್ತದೆ.ಆ ಜ್ಞಾನ, ಭಕ್ತಿಗೆ ಸಾಧನವಾಗುತ್ತದೆ. ಜ್ಞಾನ - ಭಕ್ತಿಗಳೆರಡೂ ವೈರಾಗ್ಯ ಭಾಗ್ಯವನ್ನು ನೀಡುತ್ತವೆ. ಜ್ಞಾನ- ಭಕ್ತಿ - ವೈರಾಗ್ಯಗಳು ಮುಕ್ತಿಗೆ ಸಾಧನೆ, ತದ್ವಾರಾ ಕುಲಕೋಟಿ ಉದ್ಧರಣೆ.

ಹಯಗ್ರೀವ ಸ್ವಾಮಿಯ ಸ್ಮರಣೆಯಾದೊಡನೆಯೇ ಕಣ್ಣುಂದೇ ಬಂದು ನಿಲ್ಲುವ ಚಿತ್ರ ಶ್ರೀವಾದಿರಾಜ ಸ್ವಾಮಿಗಳದು. ಏಕೆಂದರೆ, ವಾದಿರಾಜರ ಅಂಕಿತವೇ ಹಯವದನ. ಶ್ರೀವಾದಿರಾಜರ ಆಶ್ರಮ ಜೀವನ ಪ್ರಾರಂಭವಾದದ್ದೇ ಅವರು ತಮ್ಮ ಗುರುಗಳಾದ ಶ್ರೀ ವಾಗೀಶರಿಂದ ಪಡೆದ ಹಯಗ್ರೀವ ಮಂತ್ರೋಪದೇಶದಿಂದ, ಶ್ರೀವಾದಿರಾಜರ ಬದುಕಿನುದ್ದಕ್ಕೂ ಹಯವದನನದೇ ಲೀಲೆ, ಅವನದೇ ಚಮತ್ಕಾರ.

ಅತ್ಯಂತ ಶ್ರೇಷ್ಠ ಹಯಗ್ರೀವೋಪಾಸಕರಾದ ಶ್ರೀವಾದಿರಾಜರು ಅಪ್ರತಿಮ ಪವಾಡ ಪುರುಷರು. ಒಂದು ದಿನ, ಅವರ ಕನಸಿನಲ್ಲಿ ಸ್ವಾಮಿ ಹಯಗ್ರೀವನು ಬಂದು, ತನ್ನ ಹಸಿವೆಯನ್ನು ತೋಡಿಕೊಳ್ಳಲಾಗಿ,ಪರವಶರಾದ ಶ್ರೀ ವಾದಿರಾಜಯತಿವರ್ಯರು ಪ್ರತಿನಿತ್ಯವೂ ಒಂದು ಹರಿವಾಣದ ತುಂಬಾ ಕಡಲೆಯ ಹೂರಣವನ್ನು ಮಾಡಿಸಿ, ಅದನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು ಏಕಾಂತ ಸ್ಥಳದಲ್ಲಿ ಕುಳಿತು ಶ್ರೀಶನನ್ನು ಧ್ಯಾನ ಮಾಡಲು ಆರಂಭಿಸಿದರು. ಪರಮಾತ್ಮನು ದಿವ್ಯ ಶ್ವೇತಾಶ್ವರೂಪಿಯಾಗಿ ದರ್ಶನವಿತ್ತು, ತನ್ನೆರಡು ಖುರಗಳನ್ನು ವಾದಿರಾಜರ ಹೆಗಲ ಮೇಲಿಟ್ಟುಕೊಂಡು ಆ ಹೂರಣವನ್ನು ಸ್ವೀಕರಿಸುತ್ತಿದ್ದನು.ಇದು ನಿಯಮಿತದಂತೆ ಪ್ರತಿದಿನ ನಡೆಯಲು ಪಕ್ರಮಿಸಿತು. ಆ ಪಾತ್ರೆಯಲ್ಲಿ ಮಿಕ್ಕ ಶೇಷಪ್ರಸಾದವೇ ಶ್ರೀವಾದಿರಾಜರ ನಿತ್ಯಾಹಾರವಾಗುತ್ತಾ ಬಂದಿತು.

ದಕ್ಷಿಣ - ಉತ್ತರ ಕನ್ನಡ ಜಿಲ್ಲೆಯ ವಿವಿಧ ಕುಶಲಕಲಾಕಾರರಾದ ಸ್ವರ್ಣಕಾರರಲ್ಲಿ ಒಬ್ಬನು (ದೈವಜ್ಞ) ಗಣಪತಿ ವಿಗ್ರಹಕ್ಕಾಗಿ ಪ್ರಯತ್ನಿಸಿ ಅದು ಹಯಗ್ರೀವ ವಿಗ್ರಹವಾಗಿ ಮಾರ್ಪಡುತ್ತಿರಲು ಇದರಿಂದ ದಿಗ್ಭ್ರಾಂತನಾದ ಸ್ವರ್ಣಕಾರನಿಗೆ ಸ್ವಪ್ನವಾಗಲ್ಪಟ್ಟು, ಆ ವಿಗ್ರಹವನ್ನು ಶ್ರೀವಾದಿರಾಜರಿಗೆ ಸಮರ್ಪಿಸುವುದರ ಮೂಲಕ ಆ ಕುಲಭಾಂಧವರೆಲ್ಲರೂ ರಾಜರ ಶಿಷ್ಯ ಪರಂಪರೆಗೆ ಸೇರಿದರು.ಆ ದಿವ್ಯಮಂಗಳ ಮೂರ್ತಿಯನ್ನು ಇಂದಿಗೂ ಸೋದೆಮಠದಲ್ಲಿ ದರ್ಶಿಸಬಹುದಾಗಿದೆ.

### ವಿದ್ಯೆಯ ಅಧಿದೈವ

ಇತ್ತೀಚಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ, ಬಾಲರಿಂದ ಹಿಡಿದು ಯುವಕರವರೆಗೆ ತಮ್ಮ ಸ್ವಪ್ರತಿಭೆಯಿಂದ ಅತಿಹೆಚ್ಚಿನ ಅಂಕಪಡೆದು ಈ ನಾಡಿನಲ್ಲೂ ಮತ್ತು ಹೊರನಾಡಿನಲ್ಲೂ ಅತ್ಯುನ್ನತವಾದ ವ್ಯಾಸಂಗ (ವಿದ್ಯೆ) ನಂತರ ಉನ್ನತ ಸ್ಥಾನದ ಉದ್ಯೋಗಕ್ಕಾಗಿ ಅಹೋರಾತ್ರಿ ಹೋರಾಡುತ್ತಿರುವ ಸಕಲ ವಿದ್ಯಾಭಿಲಾಷಿಗಳು -

ಜ್ಞಾನಾನಂದ ಮಯಂ ದೇವಂ । ನಿರ್ಮಲ ಸ್ಫಟಿಕಾಕೃತಿಮ್।
ಆಧಾರಂ ಸರ್ವವಿದ್ಯಾನಾಂ । ಹಯಗ್ರೀವ ಮುಪಾಸ್ಮಹೇ॥

ಎಂಬ ಈ ಮಂತ್ರವನ್ನು ದಿನಂಪ್ರತಿ ಪ್ರಾತಃ ಸಂಧ್ಯಾ ಕಾಲಗಳಲ್ಲಿ ಆರು ಸಲವಾದರೂ ಜಪಿಸಿದರೆ ಮರೆವೆಂಬುದೇ ಇಲ್ಲವಾಗಿ, ವಿಶೇಷ ಬುದ್ಧಿ ಸೂಕ್ಷ್ಮತೆ, ಪ್ರತಿಭೆ, ಫಲ, ಸಾಮರ್ಥ್ಯ ಗಳನ್ನು ಹೊಂದಿ ಮನೋವಾಂಛಿತ ಫಲವನ್ನು ಪಡೆಯುವ ರೆಂಬುದರಲ್ಲಿ ಸಂದೇಹವೇ ಇಲ್ಲಾ.

ಮಂತ್ರಾಲಯ ಮಹಾಪ್ರಭು ಶ್ರೀ ರಾಘವೇಂದ್ರ ಸ್ವಾಮಿ ಗಳು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಗುರುರಾಜರು. ಶ್ರೀವಾದಿರಾಜರ ನಂತರದ ಇತಿಹಾಸದಲ್ಲಿ ಸಜೀವರಾಗಿ ಬೃಂದಾವನಸ್ಥರಾದ ಯತಿಕುಲ ಶ್ರೇಷ್ಠರು. ಅವರು ಸಶರೀರ ಬೃಂದಾವನಸ್ಥರಾದಾಗ ಅವರ ಆತ್ಮೀಯ ಶಿಷ್ಯ ಅಪ್ಪಣ್ಣಾ ಚಾರ್ಯರು ಗುರುಗಳ ದರ್ಶನಾಕಾಂಕ್ಷಿಯಾಗಿ ದೂರದ ತುಂಗಭದ್ರಾ ತೀರದ ಬಿಚ್ಚಾಲೆ ಗ್ರಾಮದಿಂದ ತೀವ್ರ ಕಾತುರ - ಕಳವಳದಿಂದ ಬರುತ್ತಿದ್ದ ಅವರ ಬಾಯಿಂದ ಬಂದ ನುಡಿ ಮುತ್ತುಗಳೇ ಶ್ರೀ ರಾಘವೇಂದ್ರ ಸ್ತೋತ್ರವಾಯಿತು.

“ಶ್ರೀಪೂರ್ಣಬೋಧಗುರುತೀರ್ಥ ಪಯೋಬ್ಧಿಪಾರಾ” ಎಂದು ಪ್ರಾರಂಭವಾಗುವ ಈ ಸ್ತೋತ್ರ ಅಪ್ಪಣ್ಣಾಚಾರ್ಯರು ಮಂಚಾಲೆಗೆ ಬರುವ ವೇಳೆಗೆ ಮುಗಿಯ ಬಂದಿತ್ತು.ಶ್ರೀ ರಾಘವೇಂದ್ರಸ್ವಾಮಿಗಳು ಬೃಂದಾವನಸ್ಥರಾಗಿದ್ದರು. ಸುತ್ತಲೂ ಕಣ್ಣೀರು ತುಂಬಿ ಭಕ್ತಿ ಭಾವ ಹರಿಸುತ್ತಿರುವ ಸಹಸ್ರ ಭಕ್ತ ವೃಂದ ಅಪ್ಪಣ್ಣಾಚಾರ್ಯರು ತಮಗರಿವಿಲ್ಲದಂತೆಯೇ “ಕೀರ್ತಿ ರ್ದಿಗ್ವಿದಿತಾವಿಭೂತಿರತುಲಾ” ಎಂದು ಹೇಳುವಷ್ಟರಲ್ಲಿ ಕಂಠ ಬಿಗಿದು ಬಂತು. ಮಾತು ಮೂಕವಾಯಿತು. ಕಣ್ಣೀರು ಧಾರಾ ಕಾರ ಹರಿಯಿತು. ಎಲ್ಲರೂ ನೋಡುತ್ತಿದ್ದಂತೆಯೇ ಬೃಂದಾ ವನದಿಂದ ‘ಸಾಕ್ಷೀ ಹಯಾಸ್ತ್ಯೋತ್ರಹಿ’ಎಂಬ ರಾಯರ ಅಮರವಾಣಿ ಕೇಳಿ ಬಂದಿತು. ಅಪ್ಪಣ್ಣಾಚಾರ್ಯರು ಸ್ತುತಿಸಿದ ಎಲ್ಲ ಮಾತುಗಳಿಗೂ ಹಯಗ್ರೀವ ದೇವರೇ ಸಾಕ್ಷಿ ಎಂದು ನುಡಿದ ಅವರು ಈ ಸ್ತೋತ್ರವನ್ನು ಹಯಾಸ್ತ್ಯೋತ್ರಹಿ ಮೂಲ ಕವೇ ಪೂರ್ಣಗೊಳಿಸಿದರು.ಆ ಸಂದರ್ಭದಲ್ಲಿ ಬೃಂದಾ ವನದ ಒಳಗೆ ಶ್ರೀ ರಾಘವೇಂದ್ರ - ಸ್ವಾಮಿಗಳು ಹಯಗ್ರೀವ ಮಂತ್ರ ಜಪಿಸುತ್ತಿದ್ದರು ಎಂಬ ಅಪ್ತ ವಾಕ್ಯಗಳಿವೆ ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಜ್ಞಾನ ಹಾಗೂ ಬುದ್ಧಿಯ ಅಧಿದೇವನನ್ನಾಗಿ ಹಯ ಗ್ರೀವನು ಪೂಜಿಸಲ್ಪಡುವನು, ವಿದ್ಯಾರಂಭದ ಮೊದಲು ಹಯ ಗ್ರೀವನ ಸನ್ನಿಧಿಗೆ ತೆರಳಿ ಪ್ರಾರ್ಥಿಸಲಾಗುವುದು. ವೇದಾಂತ ದೇಶಿಕ ಸ್ವಾಮಿ ಶಿಷ್ಯರಾಗಿದ್ದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಜೀಯರ್ ಸ್ವಾಮಿಗಳಿಂದ ಮೈಸೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಪರಕಾಲ ಮಠದಲ್ಲಿನ ಲಕ್ಷ್ಮೀಹಯಗ್ರೀವ ಸನ್ನಿಧಿ ಅತ್ಯಂತ ಪ್ರಸಿದ್ಧ ವಾದವು.

(ವಿವಿಧ ಮೂಲಗಳಿಂದ)

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪ ಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

**ನಮ್ಮ ದೇವಾಲಯ**



# ಶ್ರೀ ಪದ್ಮಾವತಿ ಅಮ್ಮನವರ ಆಲಯ - ತಿರುಚಾನೂರು

- ಮೂಲ. ಶ್ರೀಮತಿ. ಎಂ. ಪದ್ಮಾವತಿ ವೆಂಕಟರಮಣ
- ಅನುವಾದ ಶ್ರೀಮತಿ. ಗೀತಾ

ಪಾವನವಾದ ಸ್ವರ್ಣಮುಖಿ ತಟದಲ್ಲಿ ರೂಪುಗೊಂಡ ಶುಕಮಹರ್ಷಿಗಳ ಆಶ್ರಮವೇ ಇಂದಿನ ತಿರುಚಾನೂರು. ಇದಕ್ಕೆ 'ತಿರುಚ್ಚುಕನೂರ್''ತಿರುಚ್ಚಾಕನೂರ್' ಎಂಬ ನಾಮಧೇಯಗಳಿರುವಂತೆ 8-9 ಶತಮಾನಗಳ ತಿರುಮಲೆ ತಿರುಪತಿ ದೇವಾಲಯದ ಶಾಸನಗಳು ಹೇಳುತ್ತವೆ. ಈ ಶ್ರೀ ಶುಕಪುರಿ ವಾಸಯೋಗ್ಯವಾಗಿಯೂ, ಧ್ಯಾನ ಜಪತಪಗಳ ನಿಲಯವಾಗಿಯೂ ಮುಕ್ತಿಮಾರ್ಗದರ್ಶನಕವಾಗಿದ್ದಂತೆ ಪುರಾಣಿಕ,ಚಾರಿತ್ರಿಕ ಆಧಾರಗಳಿವೆ. ಶ್ರೀವೈಷ್ಣವ ಕೇಂದ್ರವಾಗಿ ಪ್ರಸಿದ್ಧಿ ಹೊಂದಿದ ಈ ದಿವ್ಯ ಕ್ಷೇತ್ರ ಒಂದಾನೊಂದು ಕಾಲದಲ್ಲಿ ಶಿವ ಪೂಜಾರಾಧನೆಗೂ ಸಹಾ ಅವಕಾಶ ಕಲ್ಪಿಸಿದಂತೆ ಹೇಳಲ್ಪಟ್ಟಿದೆ. ವಿಲಕ್ಷಣವಾದ ಗ್ರಾಮ ಸಭಿಕರಿಂದ, ರಾಜಾಧಿಕಾರಿಗಳ ಪರಿವೀಕ್ಷಣೆಗಳಿಂದ, ಆಸ್ತಿಕ ಚಿಂತನೆಗೆ, ವೈದಿಕ ಧರ್ಮ ವ್ಯಾಪ್ತಿಗೆ ಸಕ್ರಮ ವಿಕಾಸವೇರ್ಪಟ್ಟಂತೆ ಉಚಿತ ಸಂಪ್ರಾದಾಯ ಪ್ರಮಾಣಗಳಿವೆ. ತಿರುಚಾನೂರಿನ ಚರಿತ್ರೆಯ ಪುಟಗಳನ್ನು ಬಿಚ್ಚಿದರೆ ಪದ್ಮ ಸರೋವರದಲ್ಲಿ ಕಂಚಿಸಿ ಕಮಲಗಳೇ ಗೋಚರಿಸುತ್ತವೆ. ಸಹಸ್ರ ಕಿರಣಗಳ ಅಸಮಾನ್ಯ ಪ್ರಕಾಶವೇ ಪಸರಿಸುತ್ತದೆ. ಶ್ರೀನಿವಾಸನ ಹೃದಯ ಕಮಲವೇ ದಿವ್ಯಾಸನವಾಗಿ ನೆಲೆಗೊಳ್ಳುತ್ತದೆ.

ತಿರುಮಲೆ ದೇವಾಲಯದ ಪುರಾತನ ಶಾಸನ (ಕ್ರಿ.ಪೂ. 830) ತಿರುಚಾನೂರಿನ ಕಥೆಯನ್ನು ತಿಳಿಸುತ್ತದೆ. ತಿರುಚಾನೂರಿನಲ್ಲಿ ಒಂದು ಗುಡಿಯಿದ್ದು ನಿತ್ಯ ವೇಂಕಟರಮಣನಿಗೆ ಪೂಜಾಕೈಂಕರ್ಯಗಳು ಜರುಗುತ್ತಿದ್ದವೆಂದು ಹೇಳಲಾಗಿದೆ. ಈ "ತಿರುವಿನಾಲ್‌ಕೋಯಿಲ್" ನಲ್ಲಿ ಮೂಲ ವಿಗ್ರಹವಲ್ಲದೇ ಒಂದು ಉತ್ಸವ ಮೂರ್ತಿಯೂ ಇವತ್ತು. ಆ ಮೂರ್ತಿ ತಿರುಮಲೆ ವೆಂಕಟಪತಿಯ ಪ್ರತೀಕವಾಗಿ ನಿಂತಿತ್ತೆಂದು ಹೇಳಲಾಗುತ್ತದೆ. ಈ ಬೆಳ್ಳಿ ಉತ್ಸವ ಮೂರ್ತಿಯನ್ನು ತಿರುಮಲೆಯಲ್ಲಿ ಪ್ರತಿಷ್ಠಾಪಿಸಿದ ಕೀರ್ತಿ ಪಲ್ಲವರಾಣಿ 'ಸೋಮವಾಯಿ'ಗೆ ಸಲ್ಲುತ್ತದೆ. ಉತ್ಸವ ನಿರ್ವಹಣೆಗೆ ಈ ರಜತ ಮೂರ್ತಿಯ ಜೊತೆಗೆ ಬೆಲೆಕಟ್ಟಲಾಗದ ಮುತ್ತು ರತ್ನಾಭರಣಗಳನ್ನು ಸಹಾ ಸಮರ್ಪಿಸಿದಂತೆ 8-9 ನೇ ಶತಮಾನದ ಶಾಸನಗಳು ತಿಳಿಸಿಕೊಡುತ್ತವೆ. ಈ 'ತಿರುವಿಲಾನ್ ಕೋಯಿಲ್' ಪಲ್ಲವ ಚೋಳಬಾಣ ರಾಜರುಗಳ ಸೇವೆಗಳನ್ನು ಕಂಡಿದೆ. ತಿರುಮಲೆಯಲ್ಲಿ ಪ್ರಜೆಗಳಿಗೆ ದುರ್ಗಮವಾದ, ಸರಿಯಾದ ಆಲಯ ಪ್ರಾಕಾರಗಳು ಅಥವಾ ಉತ್ಸವ ಬೀದಿಗಳಿಲ್ಲದಿದ್ದುದೇ ತಿರುಚಾನೂರಿನಲ್ಲಿ "ತಿರುವಿಲಾನ್ ಕೋಯಿಲ್" ನ ಅವಶ್ಯಕತೆಗೆ ಕಾರಣವಾಯಿತೆಂದು "ತಿರುಮಲೆ ಒಳುಗು" ಎಂಬ ಪ್ರಾಮಾಣಿಕ ವೈಷ್ಣವಗ್ರಂಥವು ಸಾರುತ್ತದೆ.

ತಿರುಮಲೆ ಶ್ರೀನಿವಾಸನ ಸನ್ನಿಧಾನದಲ್ಲಿ ಧ್ವಜಾರೋಹಣವೇರ್ಪಡಿಸಿ ಉಳಿದೆಲ್ಲಾ ಉತ್ಸವಗಳನ್ನು, ಮೆರವಣಿಗೆಗಳನ್ನು ತಿರುಚಾನೂರಿನಲ್ಲಿ ನಿರ್ವಹಿಸಿ ಕಡೆಯ ಧ್ವಜಾವರೋಹಣವನ್ನು ತಿರುಗಿ ತಿರುಮಲೆಯಲ್ಲೇ ಜರುಗಿಸುತ್ತಿದ್ದರಂತೆ. ಈ ಪದ್ದತಿ ಸಮುಚಿತವಾಗಿದ್ದಿಲ್ಲವೆಂದೂ ಭಗವದ್ರಾಮಾನುಜರು ತಿರುಮಲೆ ವೇಂಕಟಪತಿಗೆ ಪೂಜಾವಿಧಿಗಳನ್ನು ಏರ್ಪಟಿಸಿ, ಉತ್ಸವಗಳನ್ನು ಸಹಾ ತಿರುಮಲೆಯಲ್ಲೇ ಜರುಗುವಂತೆ ಕಟ್ಟಪ್ಪಣೆ ಮಾಡಿದರು. ತಿರುಮಲೆ ಅರ್ಚಾನಾ ಮೂರ್ತಿಯ ಕುರಿತು ಅತಿರೇಕಕ್ಕೆ ತಿರುಗಿದ ಶೈವವೈಷ್ಣವ ವಿವಾದಗಳನ್ನು ಸಹಾ ಪರಿಷ್ಕರಿಸಿ ವೇಂಕಟೇಶ್ವರನು ವೈಕುಂಠವಾಸಿಯ ಪ್ರತಿರೂಪವೆಂದು ಪ್ರಾಮಾಣಿಕವಾಗಿ ಹೇತು ಬದ್ಧವಾಗಿ ನಿರೂಪಿಸಿದ ಘನತೆಯೂ ಸಹ ಈ ವಿಶಿಷ್ಠಾದ್ವೈತ ಪ್ರತಿಷ್ಠಾಪನಾಚಾರ್ಯರಿಗೇ ದಕ್ಕುತ್ತದೆ. ಪಲ್ಲವ ಚೋಳರಾಜರ ಮಧ್ಯೆ ಉಂಟಾದ ರಾಜಕೀಯ ವೈಷಮ್ಯಗಳ ಕಾರಣದಿಂದಾಗಿಯೂ ಸಹ ಸ್ವಲ್ಪಕಾಲ 'ತಿರುವಿನಾಲ್ ಕೋಯಿಲ್' ತಿರುಚಾನೂರಿನಲ್ಲಿ ನಿಂತು ಹೋಗಿದೆ. ನಿರಾಶ್ರಿತವಾಗಿ ನಿಂತಿರುವ ಈ ಗುಡಿಯು ಪ್ರಭುಗಳ - ಪಾಮರರ ನಿರ್ಲಕ್ಷ್ಯಕ್ಕೊಳಗಾಗಿದೆ. ಚೋಳರ ಶಿವಪಾರಮ್ಯಕ್ಕೆ ಕುರುಹಾಗಿ ತಿರುಚಾನೂರಿನ ಸಮೀಪದಲ್ಲಿರುವ ಜೋಗಿಮಲ್ಲವರದಲ್ಲಿ 'ಪರಮೇಶ್ವರಾಲಯವು' ನಿರ್ಮಿತಗೊಂಡಿದೆ. ತಿರುಚಾನೂರಿನ ವೈಭವವು ಕರಗದಂತೆ ಕಾಪಾಡಿದ ಧರ್ಮವೇತ್ತರು ಯಾದವರಾಜರು. ಕೃಷ್ಣಭಕ್ತರಾದ ಈ ರಾಜರು 12 ನೇ ಶತಮಾನದಲ್ಲಿ ತಿರುಚಾನೂರಿನಲ್ಲಿ ಕೃಷ್ಣ-ಬಲರಾಮರ ದೇವಸ್ಥಾನವನ್ನು ನಿರ್ಮಿಸಿದ್ದಾರೆ. 16-17 ನೇ ಶತಮಾನದಲ್ಲಿ ಕೃಷ್ಣಾಲಯಕ್ಕೆ ದಕ್ಷಿಣಭಾಗಕ್ಕೆ ಸುಂದರವರದ ರಾಜರ ಗುಡಿಯಿದೆ. ತದನಂತರದಲ್ಲಿ ಉತ್ತರ ಭಾಗದಲ್ಲಿ ಅಗಣಿತ ಮಹಿಮೆಗಳ ನೆಲೆವೀಡಾದ ಅಲಮೇಲು ಮಂಗಳ ಆಲಯವು ನಿರ್ಮಾಣಗೊಂಡಿದೆ.

ಆಕೆ ಭಕ್ತರ ಪಾಲಿನ ಬಂಗಾರ ಮಕುಟವಾಗಿ ವಿರಾಜಿತಳಾಗಿದ್ದಾಳೆ.

ಭಕ್ತಾಪರಾಧೀನನಾದ ಭಗವಂತನು ಯಾತ್ರಿಕರ ಸೌಕರ್ಯಕ್ಕಾಗಿ ಪ್ರತ್ಯಕ್ಷವಾಗಿ ತಾನೇ ಸ್ವತಃ ಪರೀಕ್ಷಿಸುವವನೆಂದು ತಿಳಿಸುವ ಕಥೆಗಳೆಷ್ಟೋ ಪ್ರಾಚೀನದೇವಾಲಯ ವಾಙ್ಮಯಗಳಲ್ಲಿವೆ.'ತಿರುಮಲ ಒಳುಗು' ವೆಂಬ ಗ್ರಂಥದಲ್ಲಿ ಅಂಥಾ ಒಂದು ಸನ್ನಿವೇಶ ಕಂಡು ಬರುತ್ತದೆ.

ತಿರುಮಲೆಯಲ್ಲಿ 'ಶೆವ್ವನೆ' ಎಂಬ ಗೊಲ್ಲನು ಶ್ರೀನಿವಾಸನ ಭಕ್ತನಾಗಿದ್ದನು.ವೇಂಕಟೇಶ್ವರನು ಆತನಿಗೆ ಕನಸಿನಲ್ಲಿ ಕಾಣಿಸಿಕೊಂಡು ಒಂದು ಸ್ಥಳದಲ್ಲಿ ಹುದುಗಿ ಹೋಗಿರುವ ನಿಧಿ ನಿಕ್ಷೇಪದ ಕುರಿತು ತಿಳಿಸಿ, ಅದನ್ನು 'ಅಡಿವಾರ' (ಬೆಟ್ಟದ ಕೆಳಗೆ) ಮೆಟ್ಟಿಲುಗಳನ್ನು ಕಟ್ಟುವುದಕ್ಕೆ 'ತಿರುಚಾನೂರಿಗೆ' ಉತ್ತಮ ಮಾರ್ಗವನ್ನು ನಿರ್ಮಿಸಲು ವಿನಿಯೋಗಿಸಬೇಕೆಂದು ಹೇಳಿದ್ದಾನೆ. ನಾವು ವಾಸವಾಗಿರುವ ಸ್ಥಳಕ್ಕೆಸೇನಾಪರರು ಸುಖವಾಗಿ ನಿರಾಯಾಸವಾಗಿ ಹತ್ತಿ ಬರಲು ದಾರಿಯನ್ನು ನಿರ್ಮಿಸಿ ಮೆಟ್ಟಿಲುಗಳನ್ನು ಕಟ್ಟಿಸಬೇಕೆಂದು ಹೇಳಿದನಂತೆ ಇದರಿಂದ ನಮಗೆ ಬಹಳಾ ಹಿಂದಿನಿಂದಲೂ ಶ್ರೀನಿವಾಸನಿಗೆ ತಿರುಪತಿ, ತಿರುಚಾನೂರು, ತಿರುಮಲೆ ಕ್ಷೇತ್ರಗಳು ಬಹು ಪ್ರಿಯವಾದುವುಗಳೆಂದೂ ಇಲ್ಲಿಗೆ ಬಹಳಾ ಯಾತ್ರಿಕರು ಬರುತ್ತಿದ್ದರೆಂದು ತಿಳಿದು ಬರುತ್ತದೆ. ಈಗಿರುವ ಕಪಿಲತೀರ್ಥ ಜಾಗದಲ್ಲಿ ಬೆಟ್ಟದ ಕೆಳಗೆ ಒಂದು ಗ್ರಾಮವಿತ್ತೆಂದೂ ನಂತರದ ದಿನಗಳಲ್ಲಿ ರಾಮಾನುಜಾಚಾರ್ಯರು ಗೋವಿಂದರಾಜ ಸ್ವಾಮಿಯನ್ನುಶ್ರೀ ಕೃಷ್ಣ ಮಂದಿರದಲ್ಲಿ (ಪಾರ್ಥಸಾರಥಿ ಗುಡಿ) ಪ್ರತಿಷ್ಠಾಪಿಸಿ ಗರುಡವ್ಯೂಹದಲ್ಲಿ ಆ ಗುಡಿಯ ಸುತ್ತೂ ಒಂದು ನಗರವನ್ನೇ ನಿರ್ಮಿಸಿದ ಹಾಗೆ ತಿಳಿಯುತ್ತದೆ. ರಾಮಾನುಜರ ಹೆಸರಿನಲ್ಲೇ ಈ ಜಾಗಕ್ಕೆ ರಾಮಾನುಜ ಪುರಿಯೆಂದು ವ್ಯವಹರಿಸಲ್ಪಡುತ್ತಿತ್ತು.ಗೋವಿಂದರಾಜ ಸ್ವಾಮಿಯ ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ ಗೋವಿಂದರಾಜ ಪಟ್ಟಣವೆಂದು ಸಹಾ ವ್ಯವಹರಿಸಲ್ಪಟ್ಟಿದೆ.

ಕಾಲಕ್ರಮೇಣ ತಿರುಪತಿಯೆಂಬ ವ್ಯವಹಾರನಾಮ ಗೋವಿಂದರಾಜ ಪಟ್ಟಣಕ್ಕೆ, ಬೆಟ್ಟದ ಮೇಲಿರುವ ವೇಂಕಟೇಶನ ಸನ್ನಿಧಾನದಂತೆ ಸ್ಥಿರವಾಗಿ ನಿಂತು ಬಿಟ್ಟಿದೆ.ತಿರುಪತಿ,ತಿರುಮಲೆಯಿಂದ ಬೇರೆಯಾಗಿ ಬೆಟ್ಟದ ಕೆಳಗೆ ಬೆಟ್ಟದ ಮೇಲೆಯ ನಗರಗಳೆಂದು ನಾಮಕರಣಗೊಂಡಿವೆ.

ತಿರುಚಾನೂರು ಪದ್ಮಸರೋವರ ಐತಿಹಾಸಿಕ ಪ್ರಸಿದ್ಧಿಯನ್ನು ಹೊಂದಿದೆ. "ಪಂಚಮಿತೀರ್ಥ" ಎಂಬ ಹಬ್ಬವನ್ನು ತಿರುಪತಿಯ ಸುತ್ತು ಮುತ್ತಲಿನ ಜನರು ತಂಡೋಪತಂಡವಾಗಿ ಸೇರಿ ಆಚರಿಸಿಕೊಳ್ಳುತ್ತಾರೆ.ಲಕ್ಷ್ಮೀದೇವಿ ಈ ಪದ್ಮಸರೋವರದಲ್ಲಿ ಆವಿರ್ಭಸಿದ ದಿನವಾಗಿ ಭಾವಿಸಿ ಮುತ್ತೈದೆಯರು ಕುಂಕುಮ ಅರಿಸಿನ ಹೆಚ್ಚಿಕೊಂಡು ಆ ಸರೋವರದಲ್ಲಿ ಮುಳುಗು ಹಾಕುತ್ತಾರೆ. ಈ ಆಚರಣೆಯ ಹಿಂದೊಂದು ಸುಂದರವಾದ ಪುರಾಣ ಕಥೆಯುಂಟು.

ನೈಮಿಷಾರಣ್ಯದಲ್ಲಿ ಮುನಿಗಳಿಗೆ ತ್ರಿಮೂರ್ತಿಗಳಲ್ಲಿ ಯಾರು ತ್ರಿಗುಣಾತೀತರೆಂದು ತಿಳಿದುಕೊಳ್ಳುವ ವಿಶೇಷ ಆಲೋಚನೆ ಬಂದಿದೆ.ಪಾದದಲ್ಲಿ ಕಣ್ಣನ್ನು ಹೊಂದಿರುವ ಭೃಗುವು ಈ ಪರೀಕ್ಷೆಗೆ ಹೊರಟಿದ್ದಾನೆ.ಸತ್ಯಲೋಕ, ಕೈಲಾಸಗಳಿಗೆ ತೆರಳಿ ನಿರುತ್ಸಾಹದಿಂದ ಮಹರ್ಷಿ ವೈಕುಂಠ ಸೇರಿಕೊಂಡಿದ್ದಾರೆ.ತನ್ನಾಗಮನವನ್ನು ಗಮನಿಸದ ವಿಷ್ಣುವಿನ ವಕ್ಷಃಸ್ಥಳಕ್ಕೆ ಕಾಲಿಂದ ಹೊದೆದಿದ್ದಾನೆ.ಆ ಋಷಿಯ ಕಾಲು ತಾಗಿದ ಆ ನಗರದಲ್ಲಿ ಸಿರಿಯು ನಿಲ್ಲದವಳಾಗಿದ್ದಾಳೆ. ತನ್ನ ಪತಿ ಆ ಅವಮಾನವನ್ನು ಸಹಿಸಿ ಮುನಿಗೆ ಸತ್ಕಾರವನ್ನು ಮಾಡುತ್ತಿರಲು, ಕೋಪಿಸಿಕೊಂಡು ಲಕ್ಷ್ಮೀದೇವಿ ವೈಕುಂಠ ವಾಸವನ್ನು ತೊರೆದು ಪಾತಾಳವನ್ನು ಸೇರಿ ಅಲ್ಲಿ ಕಪಿಲ ಮಹರ್ಷಿಯ ಪೂಜೆಗಳನ್ನು ಸ್ವೀಕರಿಸುವವಳಾಗಿದ್ದಾಳೆ. ಅಗಸ್ತ್ಯರ ಪ್ರಾರ್ಥನಾ ಮಂದಿರವಾದ ಕರವೀರಪುರವನ್ನು (ಕೊಲ್ಹಾಪುರ) ಮಹಾಲಕ್ಷ್ಮಿ ಸೇರಿಕೊಂಡಿದ್ದಾಳೆ. ನೀಳಾದೇವಿಯನ್ನು ವೈಕುಂಠದಲ್ಲಿ ನಿಲ್ಲಿಸಿ ಭೂದೇವಿ ಸಮೇತವಾಗಿ ಶ್ರೀನಿವಾಸನು ಲಕ್ಷ್ಮ್ಯನ್ವೇಷಣೆಗಾಗಿ ಹೊರಟುನಿಂತಿದ್ದಾನೆ. ಕೊಲ್ಹಾಪುರದಲ್ಲಿ ತನ್ನ ಪತ್ನಿಯ ವಾಸ್ತವ್ಯವನ್ನು ತಿಳಿದುಕೊಂಡ ಶ್ರೀನಿವಾಸ ಆಕೆಯನ್ನು ಸಮಾಧಾನ ಗೊಳಿಸಲು ಆಕೆಯ ಸುತ್ತ ಪ್ರದಕ್ಷಿಣೆ ಹಾಕಲು ಆರಂಭಿಸಿದ್ದಾನೆ. ಹಾಗೆಯೇ ಹತ್ತು ವರ್ಷಗಳು ಸಂದಿವೆ. ಲಕ್ಷ್ಮಿಯು ಕನಿಕರಿಸಿ ಅಶರೀರವಾಣಿಯಿಂದ ಹೀಗೆ ನುಡಿದಿದ್ದಾಳೆ."ಓ! ಸಿರಿಯಿರದ ಶ್ರೀನಿವಾಸ! ದಕ್ಷಿಣಕ್ಕೆ ಹೊರಡು. ಕೃಷ್ಣವೇಣಿ ನದಿಗೆ 22 ಯೋಜನೆಯ ದೂರದಲ್ಲಿ ಸ್ವರ್ಣ ಮುಖರಿ ನದಿ ಪ್ರವಹಿಸುತ್ತದೆ.ಆ ನದಿತೀರದಲ್ಲಿ ಒಂದು ಸರೋವರವನ್ನು ನಿರ್ಮಿಸು. ಸ್ವರ್ಣ ಕಮಲವನ್ನು ಸ್ಥಾಪಿಸು. ದೇವಲೋಕದಿಂದ ಸ್ವರ್ಣ ಕಮಲಗಳನ್ನು ತಂದು, ಮಹಾಲಕ್ಷ್ಮಿ ಮಂತ್ರವನ್ನು ಜಪಿಸುತ್ತಾ ಅರ್ಚಿಸು. ಲಕ್ಷ್ಮಿ ಪ್ರಸನ್ನಳಾಗುತ್ತಾಳೆ. ಆ ಸ್ವರ್ಣ ಕಮಲದಲ್ಲಿ ಹದಿನಾರು ವರ್ಷದ ಯುವತಿಯಾಗಿ ಲಕ್ಷ್ಮೀ ಆವಿರ್ಭವಿಸುತ್ತಾಳೆ.ಹೊರಡು ತ್ವರೆಮಾಡು".



ಈ ಮಾತುಗಳಿಂದ ಶ್ರೀಮಹಾವಿಷ್ಣು ಗರುಡಾರೂಢನಾಗಿ ಸ್ವರ್ಣಮುಖರಿಗೆ ಭೇಟಿ ನೀಡಿದ್ದಾನೆ.ಆದಿವರಾಹಸ್ವಾಮಿ ನಿವಾಸವಾದ ಅಂಜನಾದ್ರಿಯನ್ನು ತಲುಪಿದ್ದಾನೆ.ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿದ್ದಾನೆ. ಅಲ್ಲಿ ವೈಖಾನಸ ಮಹರ್ಷಿ ನಿವೇದಿಸಿದ ಆತಿಥ್ಯವನ್ನು ಸ್ವೀಕರಿಸಿದ್ದಾನೆ.ಮುನಿಗಳ ಆಹ್ವಾನವನ್ನು ಸ್ವೀಕರಿಸಿದ್ದಾನೆ. ರಾಜಕುಮಾರನಾಗಿದ್ದಾನೆ. ಅಶ್ವಾಕೃತಿಯನ್ನು ಹೊಂದಿದ ಗರುಡನನ್ನೇರಿ ಬೆಟ್ಟದ ದಕ್ಷಿಣ ಭಾಗದಲ್ಲಿರುವ ಸ್ವರ್ಣಮುಖರಿ ತೀರವನ್ನು ಸೇರಿದ್ದಾನೆ.ಅಲ್ಲಿಯ ವಾತಾವರಣ ತುಂಬಾ ಆಹ್ಲಾದದಾಯಕವಾಗಿದೆ.

ಶ್ರೀನಿವಾಸನು ತನ್ನ ಕುಂತಾಯುಧದಿಂದ ನದೀತಟವನ್ನು ಸೀಳಿದ್ದಾನೆ. ವಾಯುವನ್ನು ಸ್ಮರಿಸಿದ್ದಾನೆ. ಇಂದ್ರನ ಅನುಮತಿಯಿಂದ ದೇವಲೋಕದಿಂದ ಸ್ವರ್ಣ ಕಮಲಗಳನ್ನು ತರು



ವಂತೆ ಹೇಳಿದ್ದಾನೆ. ಸ್ವರ್ಣಕಮಲಗಳನ್ನು ಪ್ರತಿಷ್ಠಾಪಿಸಿದ್ದಾನೆ. ಗಂಧರ್ವರು ತಂದ ಕಮಲದ ಹೂಗಳಿಂದ ಮಹಾಲಕ್ಷ್ಮಿ ಯಂತ್ರವನ್ನು ಅನುಷ್ಠಾನಗೊಳಿಸಿ ಅರ್ಚಿಸಿದ್ದಾನೆ. ಶ್ರೀನಿವಾಸನ ಭಕ್ತ ಪರವಶತೆಗೆ ಎಷ್ಟೋ ಆಗಲಿ ಲಕ್ಷ್ಮಿಯ ಅನುಗ್ರಹ ಬರಬೇಕಾದುದೇ. ಸಿರಿಯ ಒಲುಮೆಯಿಲ್ಲದೆ ಶ್ರೀನಿವಾಸನ ಅಭಯ ಹಸ್ತ ಖಾಲಿಯೇ,ಲಕ್ಷ್ಮಿರಹಿತ ಕಲಿಯುಗ ವೆಂಕಟಪತಿಯ ಕಥೆ ಅಪಾರ್ಥಕ್ಕೀಡಾಗುತ್ತದೆ.ಅಶರೀರವಾಣಿಯ ಮಾತು ನಿಜವಾಗಿವೆ. ಶ್ರೀನಿವಾಸನ ತಪಸ್ಸು ಫಲಿಸಿದೆ.

ಕಾರ್ತಿಕಮಾಸ - ಶುಕ್ಲಪಕ್ಷ - ಪಂಚಮಿ - ಶುಕ್ರವಾರ - ಉತ್ತರಾಷಾಢ ನಕ್ಷತ್ರ - ಸಹಸ್ರ ಕಿರಣ ಸ್ಪರ್ಶದಿಂದ ಸ್ವರ್ಣ ಕಮಲವು ವಿಕಸನಗೊಂಡಿದೆ. ಪದ್ಮಸರೋವರ ಮಧ್ಯೆ ಭಾಗದಿಂದ ಒಂದು ತೇಜೋರಾಶಿ ಆವಿರ್ಭಸಿದೆ. ನಾಲ್ಕು ಕಡೆಗೂ ಮದಗಜಗಳು ಕಮಲಗಳನ್ನು ಮೇಲೆತ್ತಿವೆ. ಕಾಂಚನ ಪದ್ಮದ ಸಾವಿರದಳಗಳು ಬಿಚ್ಚಿಕೊಂಡಿವೆ ಪದ್ಮಕರ್ಣಿಕದ ಮೇಲೆ ಪದ್ಮಾಸೀನಳಾಗಿದ್ದಾಳೆ. ಕೈಯಲ್ಲಿ ಪದ್ಮಗಳು, ವಿಕಸಿಸಿದ ಪರ್ದಗಳ ಹಾಗಿರುವ ಕಣ್ಣುಗಳು,ಪದ್ಮಸುಗಂಧಿ,ಪದ್ಮದ ಹಾಗಿರುವ ವದನ, ಮಂದಸ್ಮಿತ ವದನಗಳಾಗಿ, ವಿಶಾಲನಯನಗಳಿಂದ ಬಿಂಬಾಧರಿಯಾದ ಸಂಪನ್ನಲಕ್ಷ್ಮಿ ಅವತರಿಸಿದ್ದಾಳೆ.ಆಕೆಯ ಶರೀರವೆಲ್ಲಾ ಕನಕರತ್ನಾಭರಣಗಳು, ಕರ್ಣಿಕೋತ್ಪಲ ತಟಾಕಿಂತಗಳೂ, ಮುತ್ತಿನ ಪಟ್ಟೆಗಳಿಂದ ಕಟ್ಟಿದ ಮುಂಗುರುಗಳಿಂದ ವಿಚಿತ್ರಾಂಬರಗಳಿಂದ ಮಿಂಚುತ್ತಿರುವಾಗಲೇ ಬೆಳದಿಂಗಳ ಬಾಲೆಯಂತೆ ನಡೆದು ಬಂದಿದ್ದಾಳೆ. ತನ್ನ ಕರಪದ್ಮಗಳಿಂದ ಕಮುದಹಾರವನ್ನು ಶ್ರೀನಿವಾನಿಗೆ ಕಂಠಾರ್ಪಿತಗೈದಿದ್ದಾಳೆ.ದಿವ್ಯತುಲಸಿ ಸುಂಗಧ ಭರಿತವಾದ ವೈಕುಂಠ ಪತಿಯ ವಕ್ಷಃಸ್ಥಳದ ಮೇಲೆ ನಿಂತಿದ್ದಾಳೆ ಅಲಮೇಲುಮಂಗೆ ನಿತ್ಯವಾಸಿನಿ ಕಣ್ಣಿಂದಲೇ ವಂದನೆಗಳನ್ನು ತಿಳಿಸಿದ್ದಾಳೆ.ಆ ಹರಿಯ ಪಟ್ಟದ ರಾಣಿ ಕೃತಾರ್ಥನಾದ ಶ್ರೀನಿವಾಸನು ದೇವತೆಗಳೆಲ್ಲರೂ ಆಶ್ಚರ್ಯಾನಂದಗಳಿಂದ ನೋಡುತ್ತಿರಲು ಗರುಡಾರೂಢಾನಾಗಿ ಶೇಷಾಚಲ ಸೇರಿ ಕೊಂಡಿದ್ದಾನೆ. ಶ್ರೀ ದೇವಿಯಿಂದೊಡಗೂಡಿ ಶ್ರೀಪತಿ ಸ್ವಾಮಿ ಪುಷ್ಕರಿಣಿ ತಟದಲ್ಲಿ ಆನಂದನಿಲಯನಾಗಿ ಭಕ್ತರಿಗೆ ಇಹ ಲೋಕದಲ್ಲೇ ಮೋಕ್ಷಾನಂದವನ್ನು ಪ್ರಸಾದಿಸಿದ್ದಾನೆ.

ಅದು ತಿರುಚಾನೂರಿನ ಪದ್ಮ ಸರೋವರ. ಈ ಪದ್ಮ ಸರೋವರದ ಮಹಾತ್ಮೆಯನ್ನು ನಾರದಲೆಲ್ಲರೂ ಸ್ತುತಿಸಿದ್ದಾರೆ. ಶ್ರೇಷ್ಠ ಆಸ್ತಿಕರೆಲ್ಲರೂ ಪರಮ ಭಕ್ತಿಯಿಂದ ಸೇವಿಸಿದ್ದಾರೆ. ವ್ಯಾಸಪುತ್ರ ಶುಕಮಹರ್ಷಿ ಇಲ್ಲಿ ಆಶ್ರಮ ಕಟ್ಟಿಕೊಂಡು ಆಧ್ಯಾತ್ಮ ಯೋಗವನ್ನೇ ಸಾಧಿಸಿದ್ದಾನಂತೆ. ಈ ಶುಕಮಹರ್ಷಿಯ ಹೆಸರಿನಿಂದಲೇ ಈ ಗ್ರಾಮ ಪ್ರಸಿದ್ಧಿ ಹೊಂದಿದೆ. 'ಶ್ರೀ ಶುಕನೂರ್', ತಿರುಶುಕನೂರ್ ಆಗಿ, ತಿರುಚಾನೂರಾಗಿ ಪರಿವರ್ತನೆ ಹೊಂದಿದೆ. ಭಕ್ತರ ಆಶಯದ ಮೇರೆಗೆ ರಾಜಾಧಿಕಾರಿಗಳ ಅನುಕೂಲಾನುಸಾರವಾಗಿ ಇಲ್ಲಿ ವಿಷ್ಣು ಶಿವಾಲಯಗಳು ಆವಿರ್ಭವಿಸಿವೆ. ಇಂದಿಗೆ ಪ್ರಧಾನವಾಗಿ 'ಪದ್ಮಾವತಿ ದೇವಿ' ಸನ್ನಿಧಾನವಾಗಿ ಸಂಪೂರ್ಣ ವೈಭವಗಳನ್ನು ಹೊಂದಿದೆ.ತಿರುಮಲೆ ತಿರುಪತಿ ಪ್ರಾಗಂಣದಲ್ಲಿರುವ ಈ ಗುಡಿಯು "ಬಂಗಾರದ ಶಾಂತಿ ವಿಮಾನ"ವನ್ನು ಹೊಂದಿದೆ. ತಿರುಚಾನೂರಿನ ಪದ್ಮಾವತಿಯ ಶಾಂತಿ ವಿಮಾನವು ತಿರುಮಲೆಯ ಆನಂದನಿಲಯ ಶ್ರೀನಿವಾಸನ ದಿಕ್ಕಿಗೇ ಮುಖ ಮಾಡಿದೆ. ಕಾರ್ತಿಕ ಮಾಸದಲ್ಲಿ ಪಂಚರಾತ್ರಾಗಮನಸಾರ ಈ ಲಕ್ಷ್ಮೀ ದೇವಿಗೆ ಬ್ರಹ್ಮೋತ್ಸವಗಳು ತಿರು ಪತಿ ಶ್ರೀವೇಂಕಟೇಶ್ವರನ ಬ್ರಹ್ಮೋತ್ಸವದ ಮಾದರಿಯಲ್ಲೇ ನಿರ್ವಹಿಸಲ್ಪಡುತ್ತವೆ.'ಪಂಚಮಿತೀರ್ಥ' ಹಬ್ಬದ ಮೂಲಕ ಪರಿಸಮಾಪ್ತಗೊಳ್ಳುತ್ತವೆ.ಆ ಪರ್ವದಿನದಂದು ತಿರುಮಲೆ ಶ್ರೀನಿವಾಸನಿಗೆ ಪ್ರತ್ಯೇಕ ಪೂಜೆಗಳನ್ನು ನಿರ್ವಹಿಸುತ್ತಾರೆ. ಶ್ರೀನಿವಾಸನು ತನ್ನ ಸತಿ ಅಲಮೇಲುಮಂಗಳಿಗೆ ಕಳುಹಿಸುವ ತುಳಸಿ, ಅರಶಿನ, ಪೀತಾಂಬರ, ಉಡಿ ಸಾಮಾನುಗಳು ದೇವಾಲಯದ ಸಕಲ ಮರ್ಯಾದೆಗಳೊಂದಿಗೆ ತಿರುಮಲದ ಬೀದಿ ಬೀದಿಗಳಲ್ಲಿ ದಿಬ್ಬಣದಲ್ಲಿ ಹೊರಟು ತಿರುಚಾನೂರನ್ನು ಸೇರಿಕೊಳ್ಳುತ್ತವೆ. ಪದ್ಮಾವತಿ ಬಂಗಾರದ ಪಲ್ಲಕ್ಕಿಯಲ್ಲಿ ಮೆರವಣಿಗೆ ಹೊರಟು ವಿಶೇಷವಾದ ಚೂರ್ಣಾಭಿಷೇಕಗಳನ್ನು ನಿರ್ವಹಿಸಿ ಕೊಂಡು ಪದ್ಮಸರೋವರ ಮಂಟಪವನ್ನು ಸೇರಿಕೊಳ್ಳುತ್ತಾಳೆ. ತಿರುಮಲೆಯ ಸಾರ್ವಭೌಮನಾದ ಶ್ರೀನಿವಾಸನು ಸುದರ್ಶನ ಚಕ್ರದೊಂದಿಗೆ ಕಳುಹಿಸಿದ ಉಡಿಯನ್ನು ದೇವಾಲಯ ಮರ್ಯಾದಾನುಸಾರ ತೆಗೆದುಕೊಂಡು ಪದ್ಮಸರೋವರ ಮಂಟಪವನ್ನು ಸೇರುತ್ತಾರೆ. ಈ ಮಂಟಪದಲ್ಲಿ 'ಚಕ್ರಸ್ನಾನಂ' ಸಂಪ್ರದಾಯಿಕವಾಗಿ ವೈಭವದಿಂದ ಜರಗುತ್ತದೆ. ಅನಂತರ ಸುದರ್ಶನ ಚಕ್ರ ಮೊದಲುಗೊಂಡು ನೆರೆದ ಸಾವಿರಾರು ಭಕ್ತರು ಪದ್ಮಸರೋವರದಲ್ಲಿ ಮುಳುಗು ಹಾಕುತ್ತಾರೆ. ಈ ಚಕ್ರಸ್ನಾನ ಮುಗಿಯುವವರೆಗೆ ತಿರುಮಲೆಯಲ್ಲಿ ಶ್ರೀನಿವಾಸನಿಗೆ ಯಾವ ಪೂಜೆಗಳೂ ಸಲ್ಲಿಸಲಾಗುವುದಿಲ್ಲ. ಈ ಸಂದರ್ಭದಲ್ಲಿ ವೇಂಕಟೇಶನು ತಿರುಮಲೆಯಲ್ಲಾದರೂ ಏಕಿದ್ದಾನು? ತನ್ನ ಸತಿ ಪದ್ಮಸರೋವರದಲ್ಲಿ ಆವಿರ್ಭಸಿದ ಸಂದರ್ಭದಲ್ಲಿ ಆ ಜನ್ಮ ದಿನದ ಉತ್ಸವವೇದಿಕೆಯಲ್ಲಿ ಪಾಲ್ಗೊಳ್ಳಲು ತಿರುಚಾನೂರಿನಲ್ಲೇ ಇರುತ್ತಾನೆ.ಧರ್ಮಪತ್ನಿಯ ವಿಷಯದಲ್ಲಿ ಪ್ರತಿಯೊಬ್ಬರೂ ಪಾಲಿಸಬೇಕಾದ ಧರ್ಮವನ್ನು 'ಪದ್ಮಾವತಿ - ಶ್ರೀನಿವಾಸರ ಕಥೆ' ತಿಳಿಸಿಕೊಡುತ್ತದೆ. 'ಶ್ರೀ ಶುಕರ' ನೆಲೆವೀಡಾಗಿರುವುದರಿಂದ 'ತಿರುಚಾನೂರು' ಆಗಿದೆ. ಲಕ್ಷ್ಮಿ,ಅಲಮೇಲುಮಂಗ, ಪದ್ಮಾವತಿ ಎಂಬುವು ಶ್ರೀನಿವಾಸನ ಪಟ್ಟ ಮಹಿಷಿಯ ಪರ್ಯಾಯ ಪದಗಳೇ ಯಾವ ಹೆಸರಿಂದ ಕರೆದರೂ ಉತ್ತರಿಸಿ ವರವನೀಯುವ ಈ ವರಲಕ್ಷ್ಮಿ ಶ್ರೀನಿವಾಸನಿಗೇ ಶ್ರೀರಕ್ಷೆ. ಇನ್ನೂ 'ಪದ್ಮಾವತಿ ದೇವಾಲಯ' ಕುರಿತು ತಿಳಿದು ಕೊಳ್ಳೋಣ.

ಯುಗ ಯುಗಗಳು ಕಳೆದರೂ ತೀರದ ಸಂಸ್ಕೃತಿಯನ್ನು, ಚಾರಿತ್ರಿಕ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಮಹೋಜ್ವಲವೂ,ಮಹೋನ್ನತವೂ ಆದ ಕೀರ್ತಿಚಂದ್ರಿಕೆಗಳಿಂದ



ಸುಶೋಭಿಸಿ ಪ್ರಾಶ್ಚಾತ್ಯ ದೇಶಗಳಿಂದ ಹೊಗಳಿಕೆಗೊಳಗಾಗಿರುವ ಭಾರತದೇಶ ಅದೆಷ್ಟೋ ಪುಣ್ಯ ಕ್ಷೇತ್ರಗಳಿಗೆ, ಶಿಲ್ಪಕಲಾವೇತ್ತವಾದ ಚಾರಿತ್ರಿಕ ಪ್ರಾಂತ್ಯಗಳಿಗೆ ನೆಲೆ ವೀಡಾಗಿದೆ. ವೈಷ್ಣವ ಪಂಥಕ್ಕೆ ಮೇರುಗಳಾಗಿರುವ ಅನೇಕ ಪುಣ್ಯ ಕ್ಷೇತ್ರಗಳಲ್ಲಿ ತಿರುಚಾನೂರು ಸಹಾ ಒಂದು.ಸುಪ್ರಸಿದ್ಧವಾದ ವೈಷ್ಣವ ಕ್ಷೇತ್ರವಿದು. ತಿರುಪತಿಯಿಂದ ದಕ್ಷಿಣಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿ ಈ ಕ್ಷೇತ್ರ ನೆಲೆ ನಿಂತಿದೆ. ಇಲ್ಲಿ ಪದ್ಮಾವತಿಯ ಜೊತೆಗೆ ಶ್ರೀನಿವಾಸನು ಪ್ರಸನ್ನ ವೇಂಕಟೇಶನಾಗಿ ನೆಲೆಸಿ ಭಕ್ತರ ಪಾಲಿನ ಕಲ್ಪವೃಕ್ಷವಾಗಿ ನಿಂತಿದ್ದಾನೆ.ತಿರುಚಾನೂರು ಮೊದಲು ತಿರುಮಲೆಗೆ ಹೋಗುವ ಯಾತ್ರಿಕರ ತಂಗುದಾಣವಾಗಿತ್ತು.ಆ ಕಾರಣದಿಂದಾಗಿಯೇ ಭಕ್ತರು ಇಲ್ಲಿನಿಂದಲೇ ಪದ್ಮ ಸರೋವರದಲ್ಲಿ ಸ್ನಾನಸಂಧ್ಯಾವನಾದಿಗಳನ್ನು ಮುಗಿಸಿಕೊಂಡು ತಿರುಮಲೆಗೆ ಪ್ರಯಾಣಿಸುತ್ತಿದ್ದರು.ತಿರುಪತಿ ಗೋವಿಂದರಾಜ ಸ್ವಾಮಿ ಆಲಯಕ್ಕೆ ಈ ಆಲಯಕ್ಕೆ ಬಹಳಷ್ಟು ಹೋಲಿಕೆಗಳಿವೆ. ಆಲಯದ ಸ್ತಂಭ ಮಂಡಪ, ಮುಖ ಮಂಟಪಗಳೊಂದೇ ಅಲ್ಲದೇ ಅಂತರಾಳ,ಗರ್ಭಗುಡಿಯೂ ಸಹಾ ವಾಸ್ತು ಶಾಸ್ತ್ರ ರೀತ್ಯಾ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಶ್ರೀ ಪದ್ಮಾವತಿದೇವಿ ಪದ್ಮಾಸೀನಳಾಗಿ ಪ್ರಸನ್ನ ವದನದಿಂದ ದರ್ಶನ ಕೊಡುತ್ತಾಳೆ.ಆಕೆಗೆ ಚತುರ್ಭುಜಗಳಿವೆ. ಮೇಲಿನ ಎರಡು ಕೈಗಳಲ್ಲಿ ಕಮಲಗಳೂ,ಕೆಳಗಿನ ಎರಡು ಹಸ್ತಗಳಲ್ಲಿ ವರದ ಮುದ್ರೆಗಳನ್ನೊಳಗೊಂಡಿವೆ.ಗರ್ಭಗೃಹಕ್ಕೆ ಎರಡೂ ಕಡೆಗಳಲ್ಲಿ ದ್ವಾರ ಪಾಲಕರ ವಿಗ್ರಹಗಳಿವೆ.ಗರ್ಭಗೃಹದ ಮೇಲ್ಭಾಗದ ಏಕಶಿಲಾ ವಿಮಾನದಲ್ಲಿ ಕುಟ, ಶಾಲ ಮೊದಲಾದ ಅಲಂಕಾರಗಳೂ,ನಾಲ್ಕು ದಿಕ್ಕುಗಳಲ್ಲಿ ಸಿಂಹಗಳಿವೆ.ಇವು ವಿಜಯನಗರದ ಶೈಲಿಯಲ್ಲಿ ನಿರ್ಮಿತಗೊಂಡಿವೆ. ಮಂಟಪದ ಸಮೀಪದಲ್ಲಿ ಧ್ವಜಸ್ತಂಭ, ಬಲಿಪೀಠವಿದೆ.ದಕ್ಷಿಣ,ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ನಿರ್ಮಿಸಲಾದ ಹಲವು ಮಂಟಪಗಳು ಚೋಳ, ಮತ್ತೆ ಕೆಲವು ವಿಜಯನಗರದ ಶೈಲಿಗಳಲ್ಲಿ ನಿರ್ಮಾಣಗೊಂಡಿದೆ. ಉತ್ತರ ಭಾಗದ ದೇವಾಲಯದಲ್ಲಿ ರಾಮಾನುಜರು, ದಕ್ಷಿಣಕ್ಕೆ ಗರುಡ, ವಿಶ್ವಕ್ಸೇನರಿದ್ದಾರೆ. ಈ ಆಲಯವು 17 ನೇ ಶತಮಾನದಲ್ಲಿ ಪುನರ್ಜೀವನಗೊಂಡಿದೆ.

ತೊಂಡಮಾನದವರಿಗೆ ಮೊದಲಿನಿಂದಲೂ ನಾರಾಯಣವನವೇ ರಾಜಧಾನಿಯಾಗಿತ್ತು. ಮಿತ್ರವರ್ಮನ ನಂತರ ಆಕಾಶರಾಜ ರಾಜನಾದನು. ಆಕಾಶರಾಜನ ಪತ್ನಿ ಧರಣಿದೇವಿ ಅವರಿಬ್ಬರಿಗೆ ವಸುದಾನನೆಂಬ ಮಗನೂ ಮತ್ತು ಪದ್ಮಾವತಿಯೆಂಬ ಕುಮಾರಿಯೂ ಇದ್ದಳು. ಪದ್ಮಾವತಿ ಆನೆಯನ್ನು ಭೇಟೆಯಾಡುತ್ತಾ ಅಗಸ್ತ್ಯಾಶ್ರಮದ ಪ್ರಾಂತ್ಯಕ್ಕೆ ಬಂದ ಶ್ರೀನಿವಾಸನನ್ನು ನೋಡಿದ್ದಾಳೆ. ಆ ರೂಪವನ್ನು ಕಂಡು ಆಕರ್ಷಿತಳಾಗಿದ್ದಾಳೆ. ಶ್ರೀ ಪದ್ಮಾವತಿಯ ರೂಪುರೇಖೆಗಳನ್ನು ಕಂಡು, ಅವಳ ಮುಗ್ಧ ಮೋಹನ ಸೌಂದರ್ಯಕ್ಕೆ ಸಮ್ಮೋಹಿತನಾಗಿದ್ದಾನೆ ಸ್ವಾಮಿ. ಬಕುಳಾಮಾತೆಯ ಮಧ್ಯಸ್ಥಿಕೆಯಲ್ಲಿ ನಾರಾಯಣವನದಲ್ಲಿ ಅವರಿಬ್ಬರ ಕಲ್ಯಾಣವೇರ್ಪಟ್ಟಿದೆ. ಆಕಾಶರಾಜನ ತಮ್ಮ ತೊಂಡಮಾನರಾಜ,ಮಗ ವಸುದಾನರು ಪದ್ಮಾವತಿ-ಶ್ರೀನಿವಾಸರ ದೇವಾಲಯಗಳನ್ನು ನಿರ್ಮಿಸಿದಂತೆ ಪ್ರತೀತಿ.ಶ್ರೀ ಪದ್ಮಾವತಿದೇವಿಯನ್ನು ಪದ್ಮಶಾಲಿ ಪಂಗಡದವರು ಇಂದಿಗೂ ಕುಲದೈವನಾಗಿ ಪೂಜಿಸುತ್ತಾರೆ. ಆಕೆಯನ್ನು ಅಲರ್ ಮೇಲುಮಂಗ ತಾಯಾರೆಂದು ಸಹಾ ಕರೆಯುತ್ತಾರೆ.

ಶ್ರೀ ಪದ್ಮಾವತಿ ದೇವಿಯನ್ನು ಅಲಮೇಲುಮಂಗತಾಯಾರೆಂದು ಪ್ರಸ್ತಾಪಿಸಿದ ಶಾಸನವು ಕ್ರಿ.ಶ. 1495, 1496 ರ ಶಾಸನದಲ್ಲಿ ಶ್ರೀ ಪದ್ಮಾವತಿದೇವಿಗೆ ಜರಗುವ ಪೂಜಾವಿಧಾನಗಳನ್ನು ಉಚಿತ ರೂಪದಲ್ಲಿ ಬರೆಸಿದ ಉಲ್ಲೇಖವಿದೆ. ಕ್ರಿ.ಶ. 1533ರಲ್ಲಿ ವಿಜಯನಗರ ಸಾರ್ವಭೌಮನಾದ ಅಚ್ಯುತದೇವ ಮಹಾರಾಜನು ಈ ದೇವಿಗೆ ಮಹೋತ್ಸವವೆಂಬ ಉತ್ಸವವನ್ನು ಏರ್ಪಡಿಸಿದ್ದಾನೆ. ಕ್ರಿ.ಶ. 1545 ರ ಶಾಸನದಲ್ಲಿ ದೇವಿಗೆ ಆಕೆಯ ಪವಿತ್ರ ಸ್ನಾನಕ್ಕೆ ಬಳಸುವ ಅರಿಶಿನ,ಚಂದನ, ಮೊದಲಾದ ಸುಗಂಧ ಲೇಪನಗಳ ಪ್ರಸ್ತಾಪವಿದೆ.

ತಿರುಮಲೆಗೆ ಹೋಗುವ ಯಾತ್ರಿಕರಿಗೆ ತಂಗುದಾಣವಾಗಿದ್ದ ತಿರುಚಾನೂರು ಕ್ರಿ.ಶ. 8 ನೇ ಶತಮಾನದಲ್ಲಿ ಸುಪ್ರಸಿದ್ಧ ವೈಷ್ಣವ ಕೇಂದ್ರವಾಗಿ ವೈಷ್ಣವೇತರ ಗುರುಗಳ ತಾಣವಾಗಿತ್ತು. ಕ್ರಿ.ಶ. 9 ನೇ ಶತಮಾನದ ವೇಳೆಗೆ ವೈಷ್ಣವ ಪೀಠವೆಂದು ಪ್ರಖ್ಯಾತಿ ಪಡೆದಿತ್ತು ಎಷ್ಟೋ ವೈಷ್ಣವ ಕುಟುಂಬಗಳು ಇಲ್ಲಿ ಸ್ಥಿರನೆಲೆಗಳನ್ನು ಕಟ್ಟಿಕೊಂಡರು ಮೊದಲು ತಿರುಮಲೆಯು ದಟ್ಟವಾದ ಅರಣ್ಯ ಪ್ರಾಂತ್ಯವಾಗಿತ್ತು. ಕ್ರೂರವಾದ ಮೃಗಗಳಿಂದ ಕೂಡಿದ್ದ ಕಾರಣಕ್ಕೆ ತಿರುಮಲೆ ಪ್ರವಾಸ ಅತಿಪ್ರಯಾಸಕರವಾದುದೆಂದು ತಿಳಿಯಲ್ಪಟ್ಟಿತ್ತು. ಅದಕ್ಕೆಂದೇ ಶ್ರೀನಿವಾಸನು ವಿಗ್ರಹಗಳನ್ನು ಶ್ರೀನಿವಾಸ ಮಂಗಾಪುರ, ನಾರಾಯಣವನದಲ್ಲಿ ತೊಂಡಮಾನರಾಜರ ಮೂಲಕ ತಿರುಚಾನೂರಿನಲ್ಲಿಯೂ ಪ್ರತಿಷ್ಠಾಪಿಸಿಲಾಯ್ತು. ತಿರುಚಾನೂರಿನ ವೇಂಕಟೇಶನು ಪ್ರಸನ್ನ ವೇಂಕಟೇಶ್ವರನೆಂದು ಪ್ರಸಿದ್ಧಿಯನ್ನು ಹೊಂದಿದನು. ಅದೇ ಸಮಯದಲ್ಲೇ ತಿರುಚಾನೂರಿನ ತಿರುವಿಲಾನ್ ಕೋಯಿಲ್‌ನ ತಿರುಮಂತ್ರ ಶಾಲೆಯಲ್ಲಿ ಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು.ಸ್ವಾಮಿಯ ಬೆಳ್ಳಿ ವಿಗ್ರಹವನ್ನು ಪಲ್ಲವರಾಣಿ ಸಮವಾಯಿ ಬಹುಮಾನವಾಗಿ ನೀಡಿದ ಹಾಗೆ ಶಾಸನಾಧಾರಗಳಿವೆ.ಕ್ರಿ.ಶ. 1782 ರಲ್ಲಿ ಹೈದರಾಲಿಯ ನಂತರ ಮುಸ್ಲಿಂ ದಂಡಯಾತ್ರೆಗಳಿಗೆ ಗುರಿಯಾಗಿ, ಶಿಥಿಲಗೊಂಡು ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯ ಕಾಲದಲ್ಲಿ ಪುನರುದ್ಧರಣ ಕಂಡಿತು. ವಿಜಯನಗರ ಕಾಲದಲ್ಲಿ ಈ ಆಲಯಕ್ಕೆ ಅದೆಷ್ಟೋ ಭೂದಾನಗಳನ್ನು ಕೊಡ ಲಾಗಿದೆ. ಆ ಸಮಯದಲ್ಲಿ ಇಲ್ಲಿ ವೈಷ್ಣವ ಪಂಥವು ಉನ್ನತ ಕ್ಕೇರಿದೆ.ಕ್ರಿ.ಶ. 16 ನೇ ಶತಮಾನದಲ್ಲಿ ಪ್ರಥಮ ಚರಣದಲ್ಲಿ ಇಲ್ಲಿ ವರದರಾಜ ಸ್ವಾಮಿಯ ಆಲಯದ ನಿರ್ಮಾಣವಾಗಿದೆ. ವಾಸ್ತು ಶಾಸ್ತ್ರಜ್ಞರಾನು ಸಾರವಾಗಿ ಚಾರಿತ್ರಿಕ ಪ್ರಾಧಾನ್ಯತಾನು ಸಾರವಾಗಿ ತಿರುಚಾನೂರು ಸುಪ್ರಸಿದ್ಧಿಗೊಂಡು ಒಂದು ಕಡೆಯಿಂದ ಚಾರಿತ್ರ ಕಾರರಿಗೂ ಮತ್ತೊಂದು ಕಡೆಯಿಂದ ಯಾತ್ರಿಕರಿಗೂ ಅತ್ಯಂತ ದರ್ಶನೀಯ ಪ್ರದೇಶವಾಗಿ ಕಂಡು ಬಂದಿದೆ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

( ದೂರವಾಣಿ ಸಂಖ್ಯೆಯನ್ನು ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by **Dr. K. Radha Ramana**, M.A., M.Phil., Phd., Chief Editor, T.T.D. and Printed at T.T.D. Press by **Sri R.V. Vijaya Kumar,** B.A., B.Ed., Dy. E.O. (Publications & Press), T.T.D. Press, Tirupati - 517 507.

## ತಿರುಮಲ ತಿರುಪತಿ ದೇವಸ್ಥಾನಗಳು



**ಆಂಧ್ರಪ್ರದೇಶ ರಾಜ್ಯ ರಾಜಧಾನಿ ಅಮರಾವತಿಯಲ್ಲಿ**
**ತಿ.ತಿ.ದೇ. ಯವರು ಶ್ರೀ ವೆಂಕಟೇಶ್ವರ ಸ್ವಾಮಿಯವರ ನೂತನ ಆಲಯದಲ್ಲಿ ಪ್ರತಿಷ್ಠಿಸಿದ**
**ಶ್ರೀ ವೆಂಕಟೇಶ್ವರ ಸ್ವಾಮಿಯವರ ಮೂಲವಿರಾಟ್ ವಿಗ್ರಹದ ತಯಾರಿ (04-07-2019)**
**ಸಂದರ್ಭದಲ್ಲಿ ಶಿಲಾಪೂಜಾ ದೃಶ್ಯಗಳು**

ಈ ಕಾರ್ಯಕ್ರಮದಲ್ಲಿ
ತಿ.ತಿ.ದೇ. ಧರ್ಮಕರ್ತ ಮಂಡಳಿ ಅಧ್ಯಕ್ಷರು ಶ್ರೀ. ವೈ.ವಿ.ಸುಬ್ಬಾರೆಡ್ಡಿ ಯವರು
ತಿ.ತಿ.ದೇ. ಆಗಮಶಾಸ್ತ್ರ ಸಲಹೆದಾರರು, ಪಂಡಿತರು, ಅರ್ಚಕರು,
ಅಧಿಕಾರಿಗಳು ಶಿಲ್ಪಾಚಾರ್ಯರು ಮತ್ತು ಭಕ್ತರು ಪಾಲ್ಗೊಂಡರು.
















SAPTHAGIRI
(KANNADA) ILLUSTRATED MONTHLY
Published by
Tirumala Tirupati Devasthanams 25-07-2019
Regd. with the Registrar of Newspapers
under "RNI" No.10742,
Postal Regd.No.TRP/14 - 2018-2020
Licensed to post without prepayment
No.PMGK/RNP/WPP-04/2018-2020